ಭಾನುವಾರ, ಅಕ್ಟೋಬರ್ 3, 2021 | ₹ 6.00

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋವಿಡ್: ಜನರ ಆರೋಗ್ಯ ರಕ್ಷಣೆಗೆ ಕೈಗೊಂಡ ಕ್ರಮ ಪರಿಗಣಿಸಿ ಗೌರವ

ಕರ್ನಾಟಕಕ್ಕೆ ಪ್ರಶಸ್ತಿ ಗರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಂದರ್ಭದಲ್ಲಿ ಜನರ ಆರೋಗ್ಯ ರಕ್ಷಣೆಗಾಗಿ ಕೈಗೊಂಡ ಕಾರ್ಯಗಳಿಗಾಗಿ ಕರ್ನಾಟಕಕ್ಕೆ 'ದಿ ಇಂಡಿಯಾ ಟುಡೇ ಗ್ರೂಪ್'ನಿಂದ ‘ಅತ್ಯುತ್ತಮ ರಾಜ್ಯ’ ಪ್ರಶಸ್ತಿ ಲಭಿಸಿದೆ.

ಮಹಾತ್ಮ ಗಾಂಧಿ ಜಯಂತಿ ಪ್ರಯುಕ್ತ ನೀಡಲಾದ 'ಇಂಡಿಯಾ ಟುಡೇ ಹೆಲ್ತ್ ಗಿರಿ' ಪ್ರಶಸ್ತಿಯನ್ನು ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಸ್ವೀಕರಿಸಿದರು. ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ಪ್ರಶಸ್ತಿ ಪ್ರದಾನ ಮಾಡಿದರು,



ನಗರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ‘ಇಂಡಿಯಾ ಟುಡೇ ಹೆಲ್ತ್ ಗಿರಿ’ ಪ್ರಶಸ್ತಿಯನ್ನು ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವೀಯ ಅವರು ರಾಜ್ಯದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ. ಕೆ.ಸುಧಾಕರ್ ಅವರಿಗೆ ಪ್ರದಾನ ಮಾಡಿದರು. ಇಂಡಿಯಾ ಟುಡೇ ಸಮೂಹದ ಅಧ್ಯಕ್ಷ ಮತ್ತು ಎಡಿಟರ್ ಇನ್ ಚೀಫ್ ಅರುಣ್ ಪುರಿ ಇದ್ದಾರೆ

ಸಚಿವ ಡಾ.ಕೆ.ಸುಧಾಕರ್, ‘ಒಂದೂವರೆ ವರ್ಷದಿಂದ ರಾಜ್ಯ ಸಮರ್ಥವಾಗಿ ಹೋರಾಡುತ್ತಿದೆ. ಸರ್ಕಾರ ಕೋವಿಡ್ ವಿರುದ್ಧ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಹೆಚ್ಚಳ, ಆಮ್ಲಜನಕ ಘಟಕ ಸ್ಥಾಪನೆ ಹಾಗೂ ವೆಂಟಿಲೇಟರ್ ಸೌಲಭ್ಯ, ದಾಖಲೆ ಪ್ರಮಾಣದಲ್ಲಿ ಕೋವಿಡ್ ಲಸಿಕೆ ನೀಡಿರುವುದು ಕೋವಿಡ್ ನಿಯಂತ್ರಣಕ್ಕೆ ನೆರವಾಯಿತು. ಕೋವಿಡ್ ಪರೀಕ್ಷೆ ಹೆಚ್ಚಿಸಿ ಸೊಂಕಿತರನ್ನು ಪತ್ತೆ ಮಾಡಿ ಚಿಕಿತ್ಸೆ ನೀಡುವ ಮೂಲಕ ರೋಗವನ್ನು ನಿಯಂತ್ರಣಕ್ಕೆ ತರಲಾಯಿತು’ ಎಂದರು.

‘ಕೋವಿಡ್ ವಿಚಾರದಲ್ಲಿ ರಾಜ್ಯ ಸರ್ಕಾರ ಕೈಗೊಂಡ ದಿಟ್ಟ ಕ್ರಮಗಳಿಗೆ ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಕೋವಿಡ್ ವಿರುದ್ಧ ಹೋರಾಟ ಮುಂದುವರಿಸಲು ಈ ಪ್ರಶಸ್ತಿ ಮತ್ತಷ್ಟು ಶಕ್ತಿ ನೀಡಿದೆ’ ಎಂದೂ ಹೇಳಿದರು.

ಪ್ರಶಸ್ತಿಯ ಅಂತಿಮ ಸುತ್ತಿಗೆ ಐದು ರಾಜ್ಯಗಳು ಆಯ್ಕೆಯಾಗಿದ್ದವು.

ಶಿವರಾಮ ಕಾರಂತ ಬಡಾವಣೆ ಯೋಜನೆಗೆ ದಲಿತ ಸಂಘರ್ಷ ಸಮಿತಿ ವಿರೋಧ

ಭೂಸ್ವಾಧೀನ ಪ್ರಕ್ರಿಯೆ ರದ್ದತಿಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಯಲಹಂಕ: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಅಭಿವೃದ್ಧಿ ಪಡಿಸುತ್ತಿರುವ ಡಾ.ಶಿವರಾಮ ಕಾರಂತ ಬಡಾವಣೆಗಾಗಿ ರೈತರ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದನ್ನು ವಿರೋಧಿಸಿ ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಲು ಮುಂದಾದ ವಿವಿಧ ಗ್ರಾಮಗಳ ರೈತರನ್ನು ಪೊಲೀಸರು ವಶಕ್ಕೆ ಪಡೆದರು.

ಭೂಸ್ವಾಧೀನ ಪ್ರಕ್ರಿಯೆಯನ್ನು ಕೂಡಲೇ ರದ್ದುಗೊಳಿಸಬೇಕೆಂದು ಒತ್ತಾಯಿಸಿ ಸಂತ್ರಸ್ತ ರೈತರು ಇಲ್ಲಿನ ಕೆಂಪೇಗೌಡರ ಪ್ರತಿಮೆಯಿಂದ ಮಿನಿ-ವಿಧಾನಸೌಧದವರೆಗೂ ಪ್ರತಿಭಟನಾ ರ‍್ಯಾಲಿ ನಡೆಸಲು ಸಿದ್ಧತೆ ನಡೆಸಿದ್ದರು. ಗಾಂಧಿ ವೇಷ ಹಾಗೂ ಖಾದಿ ಉಡುಪು ಧರಿಸಿದ್ದ ಕೆಲ ರೈತರು ರಾಮಗೊಂಡನಹಳ್ಳಿಯಿಂದ ಯಲಹಂಕದತ್ತ ಮೆರವಣಿಗೆಯಲ್ಲಿ ತೆರಳಲು ಮುಂದಾಗಿದ್ದರು. ಅವರನ್ನು ಆರಂಭದಲ್ಲೇ ಪೊಲೀಸರು ತಡೆದು ವಶಕ್ಕೆ ಪಡೆದರು.



ರಾಮಗೊಂಡನಹಳ್ಳಿಯಿಂದ ಗಾಂಧಿ ನಡಿಗೆ ಹೊರಟಿದ್ದ ದಲಿತ ಸಂಘರ್ಷ ಸಮಿತಿ ಕಾರ್ಯಕರ್ತರನ್ನು ಹಾಗೂ ರೈತರನ್ನು ಪೊಲೀಸರು ಶನಿವಾರ ವಶಕ್ಕೆ ಪಡೆದರು

ರೈತಮುಖಂಡ ಮಾವಳಿಪುರ ಬಿ.ಶ್ರೀನಿವಾಸ್, ‘ಬಡಾವಣೆ ಯೋಜನೆಗಾಗಿ 17 ಗ್ರಾಮಗಳ 3,500 ಎಕರೆ ಭೂಮಿಯನ್ನು ವಶಪಡಿಸಿಕೊಂಡಿರುವ ಬಿಡಿಎ, ಸೂಕ್ತ ಪರಿಹಾರ ನೀಡದೆ ರೈತರನ್ನು ಸತಾಯಿಸುತ್ತಿದೆ. ತಮ್ಮ ಜಮೀನುಗಳಲ್ಲಿ ರೈತರು ನಿರ್ಮಿಸಿಕೊಂಡಿದ್ದ ಮನೆಗಳನ್ನು ಧ್ವಂಸಗೊಳಿಸಿ, ಅವರನ್ನು ಒಕ್ಕಲೆಬ್ಬಿಸುತ್ತಿದೆ. ವಶಪಡಿಸಿಕೊಂಡಿರುವ ಜಮೀನು ಶೇ 80ರಷ್ಟು ಅಭಿವೃದ್ಧಿ ಹೊಂದಿದೆ’ ಎಂದರು.

ರೈತರನ್ನು ವಶಕ್ಕೆ ಪಡೆದ ಪೊಲೀಸರ ಕ್ರಮವನ್ನು ಖಂಡಿಸಿ, ಯಲಹಂಕದ ಸಂತೆ ವೃತ್ತದ ನಾಡಪ್ರಭು ಕೆಂಪೇಗೌಡರ ಪ್ರತಿಮೆಯ ಬಳಿ ಜಮಾವಣೆಗೊಂಡ ಇನ್ನೊಂದು ರೈತರ ತಂಡವು ಪ್ರತಿಭಟನೆ ಆರಂಭಿಸಿತು. ಮಿನಿ ವಿಧಾನಸೌಧದ ಕಡೆಗೆ ಪಾದಯಾತ್ರೆ ಹೊರಟ ಈ ರೈತರನ್ನೂ ಪೊಲೀಸರು ತಡೆದು ವಾಹನಗಳಲ್ಲಿ ಕರೆದೊಯ್ದರು.

ದಲಿತ ಸಂಘರ್ಷ ಸಮಿತಿ ರಾಜ್ಯ ಸಂಯೋಜಕ ವಿ.ನಾಗರಾಜ್, ‘ಶಾಂತಿಯುತವಾಗಿ ಗಾಂಧಿ ನಡಿಗೆ ಹೊರಟಿದ್ದ ರೈತರನ್ನು ವಶಕ್ಕೆ ಪಡೆದಿರುವ ಪೊಲೀಸರ ಕ್ರಮ ಖಂಡನೀಯ. 2013ರ ಭೂಸ್ವಾಧೀನ ಕಾಯ್ದೆಯನ್ವಯ ಪರಿಹಾರ ನೀಡಬೇಕಾದುದು ಸರಿಯಾದ ಕ್ರಮ. ಹಳೆಯ ಭೂಸ್ವಾಧೀನ ಕಾಯ್ದೆಯನ್ವಯ ಪರಿಹಾರ ನೀಡಿದರೆ ರೈತರಿಗೆ ಅನ್ಯಾಯವಾಗಲಿದೆ. ಸರ್ಕಾರದ ನಡೆ ಇದೇ ರೀತಿ ಮುಂದುವರಿದರೆ ಮುಖ್ಯಮಂತ್ರಿಗಳ ನಿವಾಸದೆದುರು ಧರಣಿ ನಡೆಸುತ್ತೇವೆ’ ಎಂದು ಎಚ್ಚರಿಕೆ ನೀಡಿದರು.

ದಲಿತ ಸಂಘರ್ಷ ಸಮಿತಿಯ ಬೆಂಗಳೂರು ನಗರ ಜಿಲ್ಲಾ ಸಂಯೋಜಕ ರಾಮಗೊಂಡನಹಳ್ಳಿ ರಮೇಶ್, ಸರ್ವೋದಯ ಗ್ರಾಮೀಣಾಭಿವೃದ್ಧಿ ಸೇವಾಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಬಸವರಾಜ ಪಾದಯಾತ್ರಿ, ಸ್ಥಳೀಯ ಮುಖಂಡರಾದ ಮುನಿರಾಜು, ಎನ್.ಕೃಷ್ಣಪ್ಪ, ಸುರೇಶ್ ಎಸ್.ಮೃತ್ಯುಂಜಯ, ಎನ್.ನಾಗರಾಜು, ರಾಧಮ್ಮ, ಬಿ.ರಾಜಣ್ಣ ಪಾಲ್ಗೊಂಡಿದ್ದರು.

ಪೂರ್ವ– ಪಶ್ಚಿಮ ಕಾರಿಡಾರ್ ಮೆಟ್ರೊ ರೈಲು ಪ್ರಯಾಣಿಕರ ಕೋರಿಕೆ

‘ನಡು ದಾರಿಯಲ್ಲಿ ಇಳಿಸದಿರಿ’

ಪ್ರಜಾವಾಣಿ ವಾರ್ತೆ



ಕೆಂಗೇರಿಗೆ ಹೋಗುವ ಜನರು ನಾಯಂಡಳ್ಳಿ ಮೆಟ್ರೊ ನಿಲ್ದಾಣದಲ್ಲಿ ಇಳಿದು ಮೆಟ್ರೊ ರೈಲಿಗಾಗಿ ಕಾಯುತ್ತಿರುವ ದೃಶ್ಯ ಪ್ರಜಾವಾಣಿ ಚಿತ್ರ

ಬೆಂಗಳೂರು: ‘ನಮ್ಮನ್ನು ನಡುದಾರಿಯಲ್ಲಿ ಇಳಿಸದಿರಿ. ಕೆಂಗೇರಿವರೆಗೂ ಒಂದೇ ಮೆಟ್ರೊ ರೈಲಿನಲ್ಲಿ ಪ್ರಯಾಣಿಸಲು ಅವಕಾಶ ನೀಡಿ’

ಪೂರ್ವ– ಪಶ್ಚಿಮ ಕಾರಿಡಾರ್‌ನಲ್ಲಿ (ನೇರಳೆ ಮಾರ್ಗ) ಮೈಸೂರು ರಸ್ತೆಯಿಂದ ಕೆಂಗೇರಿನ ನಡುವಿನ ನಿಲ್ದಾಣಗಳಿಗೆ ಪ್ರಯಾಣಿಸುವ ಪ್ರಯಾಣಿಕರು ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಅಧಿಕಾರಿಗಳಲ್ಲಿ ಮಾಡಿಕೊಂಡಿರುವ ಕೋರಿಕೆ ಇದು.

ಕೆಂಗೇರಿ– ಬೈಯಪ್ಪನಹಳ್ಳಿ ಮೆಟ್ರೊ ಮಾರ್ಗದಲ್ಲೂ ಕೆಲವು ಮೆಟ್ರೊ ರೈಲುಗಳು ಬೈಯಪ್ಪನಹಳ್ಳಿ– ಮೈಸೂರು ರಸ್ತೆ ನಿಲ್ದಾಣದ ನಡುವೆ ಮಾತ್ರ ಸಂಚರಿಸುತ್ತಿವೆ. ಮೈಸೂರು ರಸ್ತೆಯಾಚೆಗಿನ ನಾಯಂಡಹಳ್ಳಿ, ರಾಜರಾಜೇಶ್ವರಿ ನಗರ, ಜ್ಞಾನಭಾರತಿ, ಪಟ್ಟಣಗೆರೆ, ಕೆಂಗೇರಿ ಬಸ್ ಟರ್ಮಿನಲ್ ಹಾಗೂ ಕೆಂಗೇರಿ ಮೆಟ್ರೊ ನಿಲ್ದಾಣಗಳಿಗೆ ಪ್ರಯಾಣಿಸುವವರು ಮೈಸೂರು ರಸ್ತೆ ನಿಲ್ದಾಣದಲ್ಲಿ ಇಳಿದು, ಬೇರೆ ರೈಲಿನಲ್ಲಿ ಪ್ರಯಾಣ ಮುಂದುವರಿಸಬೇಕಾಗಿದೆ.

ಬೈಯಪ್ಪನಹಳ್ಳಿ– ಮೈಸೂರು ರಸ್ತೆ ನಡುವೆ ಸಂಚರಿಸುವ ಮೆಟ್ರೊ ರೈಲು ಮೈಸೂರು ರಸ್ತೆ ನಿಲ್ದಾಣಕ್ಕೆ ಬರುತ್ತಿದ್ದಂತೆಯೇ, ‘ಇದು ಕೊನೆಯ ನಿಲ್ದಾಣ’ ಎಂಬ ಪ್ರಕಟಣೆ ಕೇಳಿಸುತ್ತದೆ. ಈ ರೈಲು ಮೈಸೂರು ರಸ್ತೆಯಿಂದ ಮುಂದಕ್ಕೆ ಸಂಚರಿಸುವುದಿಲ್ಲ ಎಂಬ ವಿಚಾರ ತಿಳಿಯದ ಅನೇಕ ಪ್ರಯಾಣಿಕರು ಗಲಿಬಿಲಿಗೆ ಒಳಗಾಗುತ್ತಿದ್ದಾರೆ. ಒಂದೇ ರೈಲಿನಲ್ಲಿ ತಮಗೆ ಬೇಕಾದ ನಿಲ್ದಾಣ ತಲುಪುವ ವ್ಯವಸ್ಥೆಯನ್ನು ಬಿಎಂಆರ್‌ಸಿಎಲ್ ಕಲ್ಪಿಸಿದರೆ ಅನುಕೂಲವಾಗಲಿದೆ ಎಂದು ಅನೇಕ ಪ್ರಯಾಣಿಕರು ಒತ್ತಾಯಿಸಿದ್ದಾರೆ.

‘ಬಹುತೇಕರು ಬೋರ್ಡ್ ನೋಡಿ ಮೆಟ್ರೊ ಹತ್ತುವುದಿಲ್ಲ. ಮೈಸೂರು ರಸ್ತೆ ನಿಲ್ದಾಣದಲ್ಲಿ ದಿಢೀರ್ ಕೆಳಗಿಳಿಸಿದರೆ ಕೆಂಗೇರಿ ಕಡೆಗೆ ಹೋಗಬೇಕಾದ ಪ್ರಯಾಣಿಕರು ಗಲಿಬಿಲಿಗೊಳಗಾಗುವುದು ಸಹಜ. ಕೆಂಗೇರಿಗೆ ದಟ್ಟಣೆ ಅವಧಿಯಲ್ಲೂ ಪ್ರತಿ 10 ನಿಮಿಷಕ್ಕೊಂದು ರೈಲು ಮಾತ್ರ ಇದೆ. ರೈಲು ಹತ್ತುವ ಮುನ್ನ ಕಾದಿರುವ ಪ್ರಯಾಣಿಕರು ಮೈಸೂರು ರಸ್ತೆ ನಿಲ್ದಾಣದಲ್ಲಿ ಇಳಿದು ಮತ್ತೊಂದು ರೈಲಿಗಾಗಿ ಮತ್ತೆ ಕಾಯಬೇಕು. ಕೆಂಗೇರಿವರೆಗೆ ಮೆಟ್ರೊ ಮಾರ್ಗ ವಿಸ್ತರಣೆಯಾದ ಬಳಿಕವೂ ಪ್ರಯಾಣಿಕರು ಈ ರೀತಿ ಅನನುಕೂಲ ಎದುರಿಸುವಂತೆ ಮಾಡುವುದು ಸರಿಯಲ್ಲ. ಕನಿಷ್ಠಪಕ್ಷ ಪ್ರಯಾಣಿಕರ ದಟ್ಟಣೆ ಹೆಚ್ಚು ಇರುವ ಸಂಜೆ ಸಮಯದಲ್ಲಾದರೂ ಕೆಂಗೇರಿವರೆಗೆ ಒಂದೇ ರೈಲಿನಲ್ಲಿ ಸಂಚರಿಸುವುದಕ್ಕೆ ಅವಕಾಶ ಕಲ್ಪಿಸಬೇಕು’ ಎಂದು ಕೆಂಗೇರಿ ನಿವಾಸಿ ವರಲಕ್ಷ್ಮಿ ಆಗ್ರಹಿಸಿದರು.

‘ಪ್ರಯಾಣಿಕರ ಸಂಖ್ಯೆ ಹೆಚ್ಚಿದ ಬಳಿಕ ಕ್ರಮ’

‘ಕೆಂಗೇರಿ ಮೆಟ್ರೊ ನಿಲ್ದಾಣಕ್ಕೆ ಪ್ರತಿ 10 ನಿಮಿಷಕ್ಕೆ ಒಂದು ಮೆಟ್ರೊ ರೈಲು ಇದೆ. ಕೆಂಗೇರಿ ಕಡೆಗೆ ಪ್ರಯಾಣಿಸುವವರ ಸಂಖ್ಯೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಇಲ್ಲ. ಕೋವಿಡ್ ಕಡಿಮೆ ಆಗುತ್ತಿದ್ದಂತೆಯೇ ಪ್ರಯಾಣಿಕರ ಸಂಖ್ಯೆ ಕ್ರಮೇಣ ಹೆಚ್ಚಳವಾಗುತ್ತಿದೆ. ಮೈಸೂರು ರಸ್ತೆ–ಕೆಂಗೇರಿ ನಡುವಿನ ನಿಲ್ದಾಣಗಳಿಗೆ ಪ್ರಯಾಣಿಸುವವರ ಸಂಖ್ಯೆ ನಿರೀಕ್ಷಿತ ಪ್ರಮಾಣದಲ್ಲಿ ಜಾಸ್ತಿ ಆದ ಬಳಿಕ ದಟ್ಟಣೆ ಅವಧಿಯಲ್ಲಿ ಬೈಯಪ್ಪನಹಳ್ಳಿಯಿಂದ ಹೊರಡುವ ಎಲ್ಲ ರೈಲುಗಳು ಕೆಂಗೇರಿವರೆಗೆ ಸಂಚರಿಸುವುದಕ್ಕೆ ಕ್ರಮ ಕೈಗೊಳ್ಳಲಿದ್ದೇವೆ’ ಎಂದು ಬಿಎಂಆರ್‌ಸಿಎಲ್ ವ್ಯವಸ್ಥಾಪಕ ನಿರ್ದೇಶಕ ಅಂಜುಂ ಪರ್ವೇಜ್ ‘ಪ್ರಜಾವಾಣಿ’ಗೆ ತಿಳಿಸಿದರು.

ಮೆಟ್ರೊ ಪ್ರಯಾಣಿಕರು ಏನನ್ನುತ್ತಾರೆ?

‘ಸೇವಾ ನ್ಯೂನತೆಯಿಂದ ಪ್ರಯಾಣಿಕರಿಗೆ ಅನನುಕೂಲ’



ಬೈಯಪ್ಪನಹಳ್ಳಿ ನಿಲ್ದಾಣಕ್ಕೆ ಹೋಲಿಸಿದರೆ ಸಂಜೆ ವೇಳೆ ಕೆಂಗೇರಿ ಕಡೆಗೆ ಸಾಗುವ ಪ್ರಯಾಣಿಕರ ಸಂಖ್ಯೆ ಜಾಸ್ತಿ. ಆದರೆ, ಕೆಲವು ಮೆಟ್ರೊ ರೈಲುಗಳು ಕೆಂಗೇರಿವರೆಗೆ ಸಂಚರಿಸದ ಕಾರಣ ಮೈಸೂರು ರಸ್ತೆಯ ಆಚೆಗಿನ ಮೆಟ್ರೊ ನಿಲ್ದಾಣ ತಲುಪಬೇಕಾದ ಪ್ರಯಾಣಿಕರಿಗೆ ಅನನುಕೂಲವಾಗುತ್ತಿದೆ. ಇದು ಬಿಎಂಆರ್‌ಸಿಎಲ್‌ನ ಸೇವಾ ನ್ಯೂನತೆಗೆ ಸಾಕ್ಷಿ. ಈ ಕೊರತೆಯನ್ನು ನಿಗಮವು ಸರಿಪಡಿಸಬೇಕು.

– **ಭಾಸ್ಕರ್ ನರಸಿಂಹಯ್ಯ**, ಕೆಂಗೇರಿ ನಿವಾಸಿ

‘ಅರ್ಧದಲ್ಲಿ ಇಳಿಸುವ ವಿಚಾರ ತಿಳಿದಿರಲಿಲ್ಲ’

ನಾನು ಕೆಂಗೇರಿವರೆಗೆ ಮೆಟ್ರೊದಲ್ಲಿ ಸಂಚರಿಸಿ, ನಂತರ ಅಲ್ಲಿಂದ ರಾಮನಗರಕ್ಕೆ ಹೋಗಬೇಕಿದೆ. ಆದರೆ, ಮೈಸೂರು ರಸ್ತೆ ನಿಲ್ದಾಣದಲ್ಲೇ ನಮ್ಮನ್ನು ಇಳಿಸುತ್ತಾರೆ ಎಂದು ತಿಳಿದಿರಲಿಲ್ಲ. ಮಾರ್ಗ ಮಧ್ಯೆ ಪ್ರಯಾಣಿಕರನ್ನು ಇಳಿಸಿ ಮತ್ತೊಂದು ರೈಲಿನಲ್ಲಿ ಪ್ರಯಾಣಿಸುವಂತೆ ಸೂಚಿಸುವುದು ಸರಿಯಾದ ಕ್ರಮವಲ್ಲ. ಅರ್ಧದಲ್ಲೇ ಇಳಿಯಬೇಕಾಗುತ್ತದೆ ಎಂಬ ಕುರಿತು ಯಾವ ನಿಲ್ದಾಣಗಳಲ್ಲೂ ಸೂಚನೆಗಳನ್ನು ಹಾಕಿಲ್ಲ.



ಪ್ರೀತಂ, ರಾಮನಗರ ನಿವಾಸಿ

‘ದಟ್ಟಣೆ ಅವಧಿಯಲ್ಲಾದರೂ ಕೆಂಗೇರಿವರೆಗೆ ಸಾಗಲಿ’

ಪ್ರಯಾಣಿಕರ ಸಂಖ್ಯೆ ಕಡಿಮೆ ಇರುವಾಗ ಬೇಕಿದ್ದರೆ, ಕೆಲವೊಂದು ಮೆಟ್ರೊ ರೈಲುಗಳು ಬೈಯಪ್ಪನಹಳ್ಳಿಯಿಂದ ಮೈಸೂರು ರಸ್ತೆವರೆಗೆ ಮಾತ್ರ ಸಂಚರಿಸಲಿ. ಆದರೆ, ದಟ್ಟಣೆ ಅವಧಿಯಲ್ಲಿ ಒಂದೇ ರೈಲಿನಲ್ಲಿ ಕೆಂಗೇರಿವರೆಗೆ ಪ್ರಯಾಣಿಸಲು ಅವಕಾಶ ಕಲ್ಪಿಸಬೇಕು. ನಾನು ನಿತ್ಯ ಸಂಜೆ ವೇಳೆ ಇಂದಿರಾನಗರದಿಂದ ಕೆಂಗೇರಿಗೆ ಪ್ರಯಾಣಿಸುತ್ತೇನೆ. ಮೈಸೂರು ರಸ್ತೆ ನಿಲ್ದಾಣದಲ್ಲಿ ಇಳಿದು, ಮತ್ತೊಂದು ರೈಲಿಗಾಗಿ ಕಾಯುವುದು ಕಿರಿಕಿರಿ.



ಪೂರ್ವಿ, ಕೆಂಗೇರಿ ನಿವಾಸಿ

ಭಾನುವಾರ, ಅಕ್ಟೋಬರ್ 3, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 275 | ಪುಟ 22
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮೊಬೈಲ್‌ನಲ್ಲೇ ಮದುವೆಗೆ ಸಾಕ್ಷಿಯಾಗುವ ದಿನಗಳಿವು. ಕೋವಿಡ್ ಹೊಡೆತದಿಂದ ಮದುವೆಗಳ ಸ್ವರೂಪ ಹೇಗೆಲ್ಲ ಬದಲಾಗಿದೆ ಗೊತ್ತಾ?



ರಾಹುಲ್, ಪ್ರಿಯಾಂಕಾ ಗಾಂಧಿ ಪರ ನಿಲ್ಲುವೆ: ಸಿಧು 12

ಛತ್ತೀಸ್‌ಗಡ, ಮೇಘಾಲಯದಲ್ಲೂ ಹೊಸ ಬಿಕ್ಕಟ್ಟು 12

ಕ್ರೀಡೆ: ಗಗನಕುಸುಮವಾದ ಮೂಲಸೌಕರ್ಯ

ಥಳುಕಿನ ಅಡಿಯ ಹುಳುಕು

• ವಿಶಾಖ ಎನ್.



ಕಾಮಗಾರಿ ನಡೆಯುತ್ತಿರುವ ಕಂಠೀರವ ಕ್ರೀಡಾಂಗಣದ ಟ್ರ್ಯಾಕ್

ಒಳನೋಟ
ಕ್ರೀಡೆಗೆ ಬೇಕಿದೆ ಬೆಂಬಲ
ಪ್ರತಿಕ್ರಿಯಿಸಿ: 9606038256
feedback@prajavani.co.in

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ
https://bit.ly/3mng3Z1

ದಾವಣಗೆರೆ: ಬೆಂಗಳೂರಿನ ಕಂಠೀರವ ಕ್ರೀಡಾಂಗಣದಲ್ಲಿನ ಸಿಂಥೆಟಿಕ್ ಟ್ರ್ಯಾಕ್‌ನ ರಬ್ಬರ್ ತೆಗೆದು ಒಂದೂವರೆ ವರ್ಷ ಕಳೆದಿದೆ. ಅದನ್ನು ಪುನಃ ಹಾಕುವ ಕೆಲಸ ಇನ್ನೂ ಮುಗಿದಿಲ್ಲ. ಅನತಿ ದೂರದಲ್ಲೇ ಇರುವ ಸಂಪಂಗಿರಾಮನಗರದ ಶಾಲೆಗಳ ಕ್ರೀಡಾಸಕ್ತ ಮಕ್ಕಳ ಕಡೆ ನೋಡಿದರೆ ವ್ಯಂಗ್ಯವೊಂದು ವ್ಯಕ್ತಗೊಳ್ಳುತ್ತದೆ. ಕಂಠೀರವ ಕ್ರೀಡಾಂಗಣಕ್ಕೆ ಅಗತ್ಯವಿರುವ ಬಾಡಿಗೆ ತೆತ್ತು, ಮಕ್ಕಳ ಅಭ್ಯಾಸಕ್ಕೆ ಅಣಿ ಮಾಡಿಸುವ ಶಕ್ತಿ ಅಲ್ಲಿನ ಶಾಲೆಗಳಿಗೆ ಇಲ್ಲ.

ಮಹಾನಗರದ ಕ್ರೀಡಾ ಪರಿಸ್ಥಿತಿಯ ವ್ಯಂಗ್ಯವೇ ಹೀಗಿದೆ. ಇನ್ನು ಹಳ್ಳಿಗಳಲ್ಲಿನ ದುಃಸ್ಥಿತಿಯ ಕುರಿತು ಮಾತನಾಡದಿರುವುದೇ ಒಳಿತು. ವಿಜಯಪುರದ ವೆಲೋಡ್ರೋಂ ಕಾಮಗಾರಿಯ ಆಮೆ ಗತಿ, ಕ್ರೀಡಾಕ್ಷೇತ್ರದ ಸ್ಥಿತಿಗತಿಗೆ ಉದಾಹರಣೆ. ಮಳೆ ಧಾರಾಕಾರವಾಗಿ ಸುರಿಯುವ ಎಷ್ಟೋ ಕಡೆ ವ್ಯತಿರಿಕ್ತ ಪರಿಸ್ಥಿತಿಯನ್ನೂ ಮೀರಿ, ತರಬೇತಿ ನೀಡುವ ವ್ಯವಸ್ಥೆ ಇಲ್ಲ. ಹಳ್ಳಿಗಾಡಿನಲ್ಲಿ ಯಾವುದೋ ಸ್ಪರ್ಧೆಯಲ್ಲಿ ಹುರಿಯಾಳುಗಳಾಗಬಲ್ಲವರು ಹೆಚ್ಚುವರಿ ತರಬೇತಿಗಾಗಿ ದೂರದ ಇನ್ಯಾವುದೋ ನಗರಿಗೆ ಹೋಗಬೇಕಾದದ್ದು ಅನಿವಾರ್ಯ.

ಒಲಿಂಪಿಕ್ಸ್ ಪದಕಗಳ ಕನಸು ಕಾಣುತ್ತಾ ಅಂಗಾತ ಮಲಗುವ ಕರ್ನಾಟಕದ ಕ್ರೀಡಾಪಟುಗಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗಲು ಇಂಥ ಪರಿಸ್ಥಿತಿಯೇ ಕಾರಣ.

ವಿಶ್ವ ಜೂನಿಯರ್ ಅಥ್ಲೆಟಿಕ್ಸ್‌ನಲ್ಲಿ ಪದಕ ಗೆದ್ದ ಅಥ್ಲೀಟ್ ಪ್ರಿಯಾ ಮೋಹನ್ ಬೆಂಗಳೂರಿನಲ್ಲಿ ಭರವಸೆ ಮೂಡಿಸಿರುವುದನ್ನು ಹಿರಿಯ ತರಬೇತುದಾರ ವಿಶ್ವನಾಥರಾವ್ ಬೀಡು ಉದಾಹರಿಸುತ್ತಲೇ, ತರಬೇತಿಗಾಗಿ ಅವರು ಪಟ್ಟಿದ್ದ ಕಷ್ಟವನ್ನೂ ತೆರೆದಿಟ್ಟರು.

ದೂರದ ವಿದ್ಯಾನಗರದಲ್ಲಿ ಪ್ರಿಯಾ ಈಗ ತರಬೇತಿ ಪಡೆಯುತ್ತಿದ್ದಾರೆ. ಕಂಠೀರವ ಕ್ರೀಡಾಂಗಣದಲ್ಲೇ ಅದು ಸಾಧ್ಯವಿದ್ದಿದ್ದರೆ ಪರಿಸ್ಥಿತಿ ಇನ್ನೂ ಚೆನ್ನಾಗಿರುತ್ತಿತ್ತು ಎನ್ನುವ ಬೀಡು, ತರಬೇತುದಾರರ ಸಂಬಳಕ್ಕೂ ಈಗಿನ ಪರಿಸ್ಥಿತಿಗೂ ಇರುವ ಸಾವಯವ ಸಂಬಂಧವನ್ನೂ ಅನಾವರಣಗೊಳಿಸುತ್ತಾರೆ.

ತರಬೇತುದಾರರಿಗೆ ಈಗ ಸರ್ಕಾರ ₹ 40 ಸಾವಿರ ಸಂಬಳ ನಿಗದಿಪಡಿಸಿದೆ. ಪ್ರತಿಭಾವಂತ ಅಥ್ಲೀಟ್‌ಗಳ ಕೌಶಲ ಹೆಚ್ಚಿಸಲು ಕೊಡಬೇಕಾದ ವೈಯಕ್ತಿಕ ನಿಗಾವನ್ನು ಅವರು ಸಂಬಳ ಕಡಿಮೆ ಎನ್ನುವ ಕಾರಣಕ್ಕಾಗಿಯೇ ನೀಡುತ್ತಿಲ್ಲ. ಇನ್ನಷ್ಟು ಸಾಣೆ ಸಿಗಬೇಕಾದರೆ ಅಥ್ಲೀಟ್‌ಗಳು ತಮ್ಮ ಕಿಸೆಯಿಂದ ಹಣ ತೆರಬೇಕು.

ಕಂಠೀರವ ಕ್ರೀಡಾಂಗಣವನ್ನು ಫುಟ್‌ಬಾಲ್ ಪಂದ್ಯಗಳಿಗೆ ಬರೀ ₹ 35 ಸಾವಿರ ಬಾಡಿಗೆ ಪಡೆದು ನೀಡುವ ಅಧಿಕಾರಿಗಳು, 10ಕೆ ರನ್ ಸ್ಪರ್ಧೆ ನಡೆದಾಗ ₹ 80 ಸಾವಿರ ಬಾಡಿಗೆ ಪಡೆದ ವಸ್ತುಸ್ಥಿತಿಗೂ ಬೀಡು ಕನ್ನಡಿ ಹಿಡಿಯುತ್ತಾರೆ.



ತಮಿಳುನಾಡಿನ ನೆಹರೂ ಕ್ರೀಡಾಂಗಣವನ್ನು ಬೆಳಿಗ್ಗೆ 9ರಿಂದ ಸಂಜೆ 4ರ ವರೆಗೆ ಬಾಡಿಗೆಗೆ ಕೊಡುತ್ತಾರೆ. ಉಳಿದ ಅವಧಿ ಕ್ರೀಡಾಪಟುಗಳಿಗೆ ಮೀಸಲು. ಈ ಪದ್ಧತಿ ನಮ್ಮಲ್ಲೂ ಬರಬೇಕು
ವಿಶ್ವನಾಥರಾವ್ ಬೀಡು
ಅಥ್ಲೆಟಿಕ್ಸ್ ತರಬೇತುದಾರ



ಒಲಿಂಪಿಕ್ಸ್‌ಗೆಂದೇ ಗುರುತಿಸಲಾಗುವ ಕ್ರೀಡಾಪಟುಗಳಿಗೆ ವಿಶೇಷ ಅಕಾಡೆಮಿ ರೂಪಿಸಿ, ಅವರಿಗೆ ಅಲ್ಲಿಯೇ ತರಬೇತಿ ನೀಡುವ ವ್ಯವಸ್ಥೆಯಾಗಬೇಕು
ಜೆ.ಜೆ. ಶೋಭಾ, ಏಷ್ಯನ್ ಗೇಮ್ಸ್ ಪದಕ ವಿಜೇತ ಅಥ್ಲೀಟ್

6ನೇ ಪುಟ ನೋಡಿ | ಇನ್ನಷ್ಟು ಸುದ್ದಿಗಳು 6



ಯುಕೆಪಿ: ಏಕರೂಪದ ಪರಿಹಾರಕ್ಕೆ ಒತ್ತಾಯ

ಬಾಗಲಕೋಟೆ: ಕೃಷ್ಣಾ ಮೇಲ್ದಂಡೆ ಯೋಜನೆ ಮೂರನೇ ಹಂತದ ಅನುಷ್ಠಾನದ ವೇಳೆ ಮುಳುಗಡೆ ಆಗಲಿರುವ 1.33 ಲಕ್ಷ ಎಕರೆ ಭೂಮಿ ಹಾಗೂ 20 ಗ್ರಾಮಗಳ ಸಂತ್ರಸ್ತರಿಗೆ ಏಕರೂಪದ ಪರಿಹಾರ ಕೊಡುವಂತೆ ಉತ್ತರ ಕರ್ನಾಟಕ ಸ್ವಾಭಿಮಾನಿ ವೇದಿಕೆ ಶನಿವಾರ ಇಲ್ಲಿ ರಾಜ್ಯ ಸರ್ಕಾರಕ್ಕೆ ಆಗ್ರಹಿಸಿತು.

ವೇದಿಕೆ ಆಶ್ರಯದಲ್ಲಿ 'ಗಾಂಧೀಜಿ ನಡಿಗೆ ಕೃಷ್ಣೆಯ ಕಡೆಗೆ' ಹೆಸರಿನಲ್ಲಿಬೀಳಗಿ ತಾಲ್ಲೂಕು ಅನಗವಾಡಿಯ ಘಟಪ್ರಭಾ ಸೇತುವೆಯಿಂದ ವಿಜಯಪುರ ಜಿಲ್ಲೆ ಕೊರ್ತಿ–ಕೊಲ್ಹಾರದ ಕೃಷ್ಣಾ ನದಿ ಸೇತುವೆಯವರೆಗೆ 24 ಕಿ.ಮೀ ದೂರ ಪಾದಯಾತ್ರೆ ನಡೆಯಿತು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ, ಗದುಗಿನ ತೋಂಟದಾರ್ಯ ಮಠದ ಸಿದ್ದರಾಮ ಸ್ವಾಮೀಜಿ ನೇತೃತ್ವ ವಹಿಸಿದ್ದರು.

ಚಿತ್ರ 4

ಪ್ರತಿಪಕ್ಷಗಳ ವಿರುದ್ಧ ಪ್ರಧಾನಿ ವಾಗ್ದಾಳಿ

'ಬೌದ್ಧಿಕ ಅಪ್ರಾಮಾಣಿಕತೆ, ರಾಜಕೀಯ ವಂಚನೆ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳನ್ನು ಟೀಕಿಸಿರುವ ವಿರೋಧ ಪಕ್ಷಗಳ ನಡೆಯನ್ನು 'ಬೌದ್ಧಿಕ ಅಪ್ರಾಮಾಣಿಕತೆ' ಮತ್ತು 'ರಾಜಕೀಯ ವಂಚನೆ' ಎಂದು ಪ್ರಧಾನಿ ನರೇಂದ್ರ ಮೋದಿ ಕರೆದಿದ್ದಾರೆ.

ದಶಕಗಳ ಹಿಂದೆಯೇ ಕೃಷಿಯ ಪ್ರಯೋಜನಗಳನ್ನು ಪಡೆಯಬೇಕಾಗಿದ್ದ ದೇಶದ ನಾಗರಿಕರಿಗೆ ಅವುಗಳನ್ನು ತಲುಪಿಸಲು ಕಠಿಣ ಮತ್ತು ದೊಡ್ಡ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಗತ್ಯವಿದೆ ಎಂದು ಪ್ರತಿಪಾದಿಸಿದ್ದಾರೆ.

12ನೇ ಪುಟ ನೋಡಿ



ಎಷ್ಟೋ ರಾಜಕೀಯ ಪಕ್ಷಗಳು ಜನರನ್ನು 'ರಾಜಕೀಯ ಶಕ್ತಿ'ಯ ದೃಷ್ಟಿಯಲ್ಲಿ ನೋಡುತ್ತವೆ. ಆದರೆ ನಾನು 'ಜನ ಶಕ್ತಿ' ದೃಷ್ಟಿಯಲ್ಲಿ ನೋಡುತ್ತೇನೆ
ನರೇಂದ್ರ ಮೋದಿ
ಪ್ರಧಾನಿ

ಒಳ ಪುಟಗಳು



ವಿಜಯನಗರ ಜಿಲ್ಲೆ ಉದಯ

ಹೊಸಪೇಟೆ (ವಿಜಯನಗರ): ಪಂಪ– ವಿರೂಪಾಕ್ಷನ ನೆಲೆಬೀಡಾದ ಹಂಪಿಯ ಗತವೈಭವ ಸಾರುವ ಭವ್ಯ ವೇದಿಕೆಯ ವರ್ಣರಂಜಿತ ಕಾರ್ಯಕ್ರಮದಲ್ಲಿ ಶನಿವಾರ ಸಂಜೆ ರಾಜ್ಯದ 31ನೇ ಜಿಲ್ಲೆಯಾಗಿ ವಿಜಯನಗರ ಅಧಿಕೃತವಾಗಿ ಉದ್ಘಾಟನೆಗೊಂಡಿತು. 4

ದೂರಸಂಪರ್ಕ ಪರವಾನಗಿ ನಿಯಮ ಸಡಿಲ

ನವದೆಹಲಿ (ಪಿಟಿಐ): ದೂರಸಂಪರ್ಕ ಕಂಪನಿಗಳು ಪರವಾನಗಿ ಶುಲ್ಕವನ್ನು ತಡವಾಗಿ ಪಾವತಿಸಿದರೆ ವಿಧಿಸುವ ಬಡ್ಡಿದರವನ್ನು ದೂರಸಂಪರ್ಕ ಇಲಾಖೆಯು ತಗ್ಗಿಸಿದೆ. ಇದರಿಂದಾಗಿ ಈ ವಲಯದ ಮೇಲಿನ ಆರ್ಥಿಕ ಹೊರೆಯು ತುಸು ತಗ್ಗುವ ನಿರೀಕ್ಷೆ ಮಾಡಲಾಗಿದೆ. 12

ಚಿನಕುರಳಿ

ಪ್ರಕಾಶ್ ಶೆಟ್ಟಿ





'ವನ್ಯಜೀವಿ ಸಂರಕ್ಷಣೆಗಾಗಿ ನಡಿಗೆ'ಯಲ್ಲಿ ಸಂಸದ ಪಿ.ಸಿ. ಮೋಹನ್, ಅರಣ್ಯ ಸಚಿವ ಉಮೇಶ ಕತ್ತಿ, ಅರಣ್ಯ ಇಲಾಖೆ ಸಿಬ್ಬಂದಿ ಭಾಗವಹಿಸಿದರು

ಪ್ರಜಾವಾಣಿ ಚಿತ್ರ

ಸಚಿವ ಉಮೇಶ ಕತ್ತಿ ಹೇಳಿಕೆ

ಅರಣ್ಯ: ಶೇ 30ಕ್ಕೆ ಹೆಚ್ಚಿಸುವ ಗುರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 67ನೇ ವನ್ಯಜೀವಿ ಸಪ್ತಾಹ-ಕಾರ್ಯಕ್ರಮ
- ರಾಜ್ಯದಲ್ಲಿ ಸದ್ಯ ಶೇ 20ರಷ್ಟು ಅರಣ್ಯ ಪ್ರದೇಶವಿದೆ
- ಮೀನಿನ ವಿಶೇಷ ಅಂಚೆ ಲಕೋಟೆ ಬಿಡುಗಡೆ

ಬೆಂಗಳೂರು: 'ರಾಜ್ಯದಲ್ಲಿ ಸದ್ಯ ಶೇ 20ರಷ್ಟು ಅರಣ್ಯ ಪ್ರದೇಶವಿದ್ದು, ಈ ಪ್ರಮಾಣವನ್ನು ಶೇ 30ಕ್ಕೆ ಹೆಚ್ಚಿಸಲು ಅರಣ್ಯ ಇಲಾಖೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ' ಎಂದು ಅರಣ್ಯ ಸಚಿವ ಉಮೇಶ ಕತ್ತಿ ಹೇಳಿದರು.

67ನೇ ವನ್ಯಜೀವಿ ಸಪ್ತಾಹದ ಅಂಗವಾಗಿ ನಗರದ ಕಬ್ಬನ್ ಪಾರ್ಕ್‌ನಲ್ಲಿ ಆಯೋಜಿಸಲಾಗಿದ್ದ 'ವನ್ಯಜೀವಿ ಸಂರಕ್ಷಣೆಗಾಗಿ ನಡಿಗೆ' ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ವನ್ಯಜೀವಿಗಳ ಹಾಗೂ ಕಾಡಿನ ರಕ್ಷಣೆ ಬಗ್ಗೆ ನಮ್ಮಲ್ಲಿ ಹೆಚ್ಚಿನ ಜಾಗೃತಿ ಮೂಡಬೇಕಿದೆ' ಎಂದರು.

'ಕಾಡು ಉಳಿದರೆ ಮಾತ್ರ ನೆಮ್ಮದಿಯಿಂದ ಇರಲು ಸಾಧ್ಯ. ಕಾಡು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ಎಲ್ಲರ ಮೇಲಿದೆ. ಕರ್ನಾಟಕವನ್ನು ದೇಶದಲ್ಲಿಯೇ ಅತೀ ಹೆಚ್ಚು ಅರಣ್ಯ ಪ್ರದೇಶ ಹೊಂದಿರುವ ರಾಜ್ಯವನ್ನಾಗಿ ರೂಪಿಸುವ ಗುರಿಯನ್ನು ಅರಣ್ಯ ಇಲಾಖೆ ಹೊಂದಿದೆ' ಎಂದು ತಿಳಿಸಿದರು.

ಅಳಿವಿನ ಅಂಚಿನಲ್ಲಿರುವ ಮೀನಿನ ವಿಶೇಷ ಅಂಚೆ ಲಕೋಟೆಯನ್ನು ಬಿಡುಗಡೆ ಮಾಡಲಾಯಿತು. ವನ್ಯಜೀವಿ ಸಂರಕ್ಷಣೆ ಕುರಿತು ಜಾಗೃತಿ ಮೂಡಿಸಲು ಕಬ್ಬನ್ ಉದ್ಯಾನದಿಂದ ಲಾಲ್‌ಬಾಗ್‌ವರೆಗೆ ಏರ್ಪಡಿಸಿದ್ದ ನಡಿಗೆಗೆ ಹಸಿರು ನಿಶಾನೆ ತೋರಿಸಲಾಯಿತು.

ಶಾಸಕ ರಿಜ್ವಾನ್ ಅರ್ಷದ್, ಸಂಸದ ಪಿ.ಸಿ. ಮೋಹನ್, ಅರಣ್ಯ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಜಾವೇದ್ ಅಖ್ತರ್, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸಂಜಯ್ ಮೋಹನ್ ಇದ್ದರು.

'ಖಾಸಗಿ ಶಾಲೆಗಳಿಂದ ಸುಲಿಗೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾಸಗಿ ಶಾಲೆಗಳು ಶುಲ್ಕದ ಹೆಸರಿನಲ್ಲಿ ಸುಲಿಗೆ ಮಾಡುತ್ತಿವೆ' ಎಂದು ಆರೋಪಿಸಿ ವಿದ್ಯಾರ್ಥಿಗಳ ಪೋಷಕರು ನಗರದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು.

'ರಾಜ್ಯ ಖಾಸಗಿ ಶಾಲಾ ಪೋಷಕರ ಸಂಘಟನೆಗಳ ಸಮನ್ವಯ ವೇದಿಕೆ' ಹಾಗೂ 'ವಾಯ್ಸ್ ಆಫ್ ಪೇರೆಂಟ್ಸ್' ಸಂಘಟನೆ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಆನಂದರಾವ್ ವೃತ್ತದಲ್ಲಿರುವ ಗಾಂಧಿ ಪ್ರತಿಮೆ ಎದುರು ಸೇರಿದ್ದ ಪೋಷಕರು, ಘೋಷಣಾ ಫಲಕ ಪ್ರದರ್ಶಿಸಿದರು. ಕೈಗೆ ಕಪ್ಪು ಪಟ್ಟಿ ಕಟ್ಟಿಕೊಂಡು ಆಕ್ರೋಶ ಹೊರಹಾಕಿದರು.

'ಖಾಸಗಿ ಶಾಲೆಗಳಲ್ಲಿ ಶುಲ್ಕ ನಿಯಂತ್ರಣಕ್ಕೆ ಸಮಿತಿ ರಚಿಸಬೇಕು' ಎಂದು ಪೋಷಕರು ಒತ್ತಾಯಿಸಿದರು.

'2020–21ನೇ ಶೈಕ್ಷಣಿಕ ಸಾಲಿನಲ್ಲಿ ಶೇ 15ರಷ್ಟು ಶುಲ್ಕ ಕಡಿತ ಮಾಡುವಂತೆ ಹೈಕೋರ್ಟ್ ಈಗಾಗಲೇ ಹೇಳಿದೆ. ಆದರೆ, 2021-22ನೇ ಶೈಕ್ಷಣಿಕ ಸಾಲಿನಲ್ಲಿ ಎಷ್ಟು ಶುಲ್ಕ ಪಾವತಿಸಬೇಕೆಂಬ ಬಗ್ಗೆ ಸ್ಪಷ್ಟತೆ ಇಲ್ಲ. ಹೀಗಾಗಿ, ಖಾಸಗಿ ಶಾಲೆಯವರು ಶುಲ್ಕ ಹೆಚ್ಚಳ ಮಾಡಿ ಪೋಷಕರ ಸುಲಿಗೆಗೆ ಇಳಿದಿದ್ದಾರೆ' ಎಂದು ಕಿಡಿಕಾರಿದರು.

ಶಿಕ್ಷಣ ತಜ್ಞ ವಿ.ಪಿ. ನಿರಂಜನಾರಾಧ್ಯ, 'ಸರ್ಕಾರ ಶುಲ್ಕ ನಿಯಂತ್ರಣ ಸಮಿತಿ ರಚಿಸಬೇಕು. ಇಲ್ಲದಿದ್ದರೆ, ಪೋಷಕರ ಕೆಂಗಣ್ಣಿಗೆ ಸರ್ಕಾರ ಗುರಿಯಾಗುತ್ತದೆ' ಎಂದು ಎಚ್ಚರಿಸಿದರು.



ರಾಜ್ಯಸಭೆ ವಿರೋಧ ಪಕ್ಷದ ನಾಯಕರಾದ ಬಳಿಕ ಮೊದಲಬಾರಿಗೆ ಶನಿವಾರ, ಕಲಬುರ್ಗಿ ನಗರಕ್ಕೆ ಆಗಮಿಸಿದ ಮಲ್ಲಿಕಾರ್ಜುನ ಖರ್ಗೆ ಅವರನ್ನು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಅದ್ದೂರಿ ಮೆರವಣಿಗೆ ಮೂಲಕ ಸ್ವಾಗತಿಸಿದರು

ರಾಜಕೀಯ ನಿವೃತ್ತಿ ಇಲ್ಲ: ಮಲ್ಲಿಕಾರ್ಜುನ ಖರ್ಗೆ

ಕಲಬುರ್ಗಿ: 'ನಾನು ರಾಜಕೀಯ ನಿವೃತ್ತಿ ತೆಗೆದುಕೊಳ್ಳುವುದಿಲ್ಲ. ಜನರ ಮಧ್ಯೆ ಇಲ್ಲದಿದ್ದರೆ ನಾನು ಬದುಕುವುದೇ ಇಲ್ಲ. ಎಲ್ಲಿಯವರೆಗೆ ಉಸಿರಾಡುತ್ತೇನೋ ಅಲ್ಲಿಯವರೆಗೂ ಹೋರಾಡುತ್ತೇನೆ' ಎಂದು ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ರಾಜ್ಯಸಭೆ ವಿರೋಧ ಪಕ್ಷದ ನಾಯಕರಾದ ಬಳಿಕ ಮೊದಲಬಾರಿಗೆ ಶನಿವಾರ ನಗರಕ್ಕೆ ಬಂದ ಅವರಿಗೆ, ಜಿಲ್ಲಾ ಕಾಂಗ್ರೆಸ್‌ನಿಂದ ಆಯೋಜಿಸಿದ್ದ ಅದ್ದೂರಿ ಅಭಿನಂದನಾ ಸಮಾರಂಭದಲ್ಲಿ ಮಾತನಾಡಿದರು.

'ನಾವು ಒಂದು ತತ್ವವನ್ನು ನಂಬಿನಿಂತ ಮೇಲೆ ಅದರ ಅನುಷ್ಠಾನಕ್ಕಾಗಿ, ಅದನ್ನು ಈ ನೆಲದಲ್ಲಿ ನೆಲೆ ನಿಲ್ಲಿಸಲು ಕೊನೆಯವರೆಗೂ ಹೋರಾಡಬೇಕಾಗುತ್ತದೆ. ಮುಂದಿನ ಸಾರಿ ಖರ್ಗೆ ರಾಜಕೀಯ ನಿವೃತ್ತಿ ಪಡೆಯುತ್ತಾರೆ ಎಂದು ಕೆಲವರು ಲೆಕ್ಕಾಚಾರ ಮಾಡಿಕೊಂಡಿದ್ದಾರೆ. ನಿವೃತ್ತಿ ಪಡೆಯುವುದಾದರೆ ರಾಜಕೀಯಕ್ಕೆ ಏಕೆ ಬರಬೇಕಾಗಿತ್ತು' ಎಂದೂ ಅವರು ಪ್ರಶ್ನಿಸಿದರು.

'ಕಳೆದ ಲೋಕಸಭೆ ಚುನಾವಣೆಯಲ್ಲಿ ಕಲಬುರ್ಗಿ ಜನ ನನ್ನನ್ನು ಸೋಲಿಸಿಲ್ಲ. ಮೋದಿ, ಅಮಿತ್ ಶಾ ಷಡ್ಯಂತ್ರ ಮಾಡಿ ಸೋಲಿಸಿದರು' ಎಂದರು.

'ನಮ್ಮಲ್ಲಿ ಬೀಜಗುಣ ಇದೆ. ನೀವು ನಮ್ಮನ್ನು ಮಣ್ಣಿನಲ್ಲಿ ಹೂತರೂ ಮತ್ತೆ ಮರವಾಗಿ ಬೆಳೆಯುತ್ತೇವೆ' ಎಂದು ಪ್ರಧಾನಿ ಮೋದಿ ಅವರಿಗೆ ಎಚ್ಚರಿಕೆ ನೀಡಿದ ಅವರು, 'ಎಲ್ಲರೂ ಕೂಡಿ ಬಾಳುವಂಥ ದೇಶವನ್ನು ಕಟ್ಟಿದ್ದು ನಾವು. ಆದರೆ, ಧರ್ಮ- ಮತದ ಅಸ್ತ್ರಗಳಿಂದ ಏಕತೆ ಒಡೆಯುತ್ತಿರುವವರು ನೀವು. ಏಳು ದಶಕಗಳಿಂದ ಕಾಂಗ್ರೆಸ್ಸಿಗರು ಏನು ಮಾಡಿದ್ದಾರೆ ಎಂದು ಪದೇಪದೇ ಕೇಳುತ್ತೀರಲ್ಲ; ನಾವು ಏನೂ ಮಾಡದೇ ಇದ್ದಿದ್ದರೆ ಇವತ್ತು ನೀವು ಬದುಕಿರುತ್ತಿದ್ದಿರಾ' ಎಂದು ಖಾರವಾಗಿ ಪ್ರಶ್ನಿಸಿದರು.

ಭವ್ಯ ಮೆರವಣಿಗೆ: ಕೋವಿಡ್ ಕಾರಣ ಒಂದೂವರೆ ವರ್ಷದ ಬಳಿಕ ತವರಿಗೆ ಬಂದ ಹಿರಿಯ ನಾಯಕನಿಗೆ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಭವ್ಯ ಸ್ವಾಗತ ನೀಡಿದರು.



ಗಾಂಧೀಜಿ ನಡಿಗೆ ಕೃಷ್ಣೆಯ ಕಡೆಗೆ..

ಬೀಳಗಿ ತಾಲ್ಲೂಕಿನ ಅನಗವಾಡಿ ಬಳಿಯ ಘಟಪ್ರಭಾ ಸೇತುವೆಯಿಂದ ವಿಜಯಪುರ ತಾಲ್ಲೂಕು ಕೊರ್ತಿ–ಕೊಲ್ಹಾರ ಬಳಿಯ ಕೃಷ್ಣಾ ನದಿ ಸೇತುವೆವರೆಗೆ ಶನಿವಾರ ನಡೆದ 'ಗಾಂಧೀಜಿ ನಡಿಗೆ ಕೃಷ್ಣೆಯ ಕಡೆಗೆ' ಪಾದಯಾತ್ರೆಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಯ ಸಾವಿರಾರು ಸಂತ್ರಸ್ತರು ಹೆಜ್ಜೆ ಹಾಕಿದರು

ಪ್ರಜಾವಾಣಿ ಚಿತ್ರ: ಸಂಗಮೇಶ ಬಡಿಗೇರ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	112.78	7,114	6,175
ಹಾರಂಗಿ	2,859	2,857.58	1,050	1,500
ಕಬಿನಿ	2284.00	2,279.2	1,200	3,500
ಹೇಮಾವತಿ	2,922	2,913.70	3,515	4,962
ಲಿಂಗನಮಕ್ಕಿ	1,819	1,815.85	5,951	-
ಸೂಪಾ (ಮೀ)	564	556.61	2,715	5,376
ಮಾಣಿ	594	587.72	1,224	-
ತುಂಗಭದ್ರಾ	1,633	1,632.48	10,950	10,541
ಮಲಪ್ರಭಾ	2079.5	2,078.80	1,694	1,694
ಘಟಪ್ರಭಾ	2175	2,175.00	4,233	4,233
ಭದ್ರಾ	186	184.8	3,183	3,785
ಆಲಮಟ್ಟಿ (ಮೀ)	519.6	519.60	11,700	11,700
ನಾರಾಯಣಪುರ (ಮೀ)	492.25	492.22	12000	16,100

* ನೆಲಮಟ್ಟದಿಂದ

₹650 ಕೋಟಿಯಲ್ಲಿ ಪ್ರವಾಸಿ ತಾಣಗಳ ಅಭಿವೃದ್ಧಿ: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ

ವಿಜಯನಗರ ಜಿಲ್ಲೆ ಉದಯ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ಪಂಪ- ವಿರೂಪಾಕ್ಷನ ನೆಲೆಬೀಡಾದ ಹಂಪಿಯ ಗತವೈಭವ ಸಾರುವ ಭವ್ಯ ವೇದಿಕೆಯ ವರ್ಣರಂಜಿತ ಕಾರ್ಯಕ್ರಮದಲ್ಲಿ ಶನಿವಾರ ಸಂಜೆ ರಾಜ್ಯದ 31ನೇ ಜಿಲ್ಲೆಯಾಗಿ ವಿಜಯನಗರ ಅಧಿಕೃತವಾಗಿ ಉದ್ಘಾಟನೆಗೊಂಡಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಜಿಲ್ಲೆ ಘೋಷಿಸಿದ್ದ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜಂಟಿಯಾಗಿ ಕಾರ್ಯಕ್ರಮ ಉದ್ಘಾಟಿಸಿದರು. ಬಳಿಕ ₹464 ಕೋಟಿ ಮೊತ್ತದ ಯೋಜನೆಗಳಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಿ.ಎಂ, 'ರಾಜ್ಯ ಮತ್ತು ಕೇಂದ್ರ ಸರ್ಕಾರದ ಸಹಭಾಗಿತ್ವದಲ್ಲಿ ₹630 ಕೋಟಿ ವೆಚ್ಚದಲ್ಲಿ ಹಂಪಿ ಸೇರಿದಂತೆ ರಾಜ್ಯದ ಹೆಗ್ಗುರುತಿನಂತಿರುವ ಎಲ್ಲಾ ಪ್ರವಾಸಿ ತಾಣಗಳ ಅಭಿವೃದ್ಧಿಗೆ ಯೋಜನೆ ರೂಪಿಸಲಾಗಿದೆ' ಎಂದು ಹೇಳಿದರು.

'ಹಂಪಿ ಅಂತರರಾಷ್ಟ್ರೀಯ ಪ್ರವಾಸಿಗರ ನೆಚ್ಚಿನ ತಾಣವಾಗಿ ಅಭಿವೃದ್ಧಿಯಾಗಬೇಕು. ಅದಕ್ಕಾಗಿ ಈ ಭಾಗದಲ್ಲಿ 'ಹೆಲಿ ಟೂರಿಸಂ' ಆರಂಭಿಸಲಾಗುವುದು. ರಾಜ್ಯದ ಇತರೆ ಪ್ರವಾಸಿ ತಾಣಗಳ ಸಮಗ್ರ ಅಭಿವೃದ್ಧಿಗೆ ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದರು.

'ವಿಜಯನಗರ ಸಾಮ್ರಾಜ್ಯ ಒಂದೆರಡು ದಿನದಲ್ಲಿ ಕಟ್ಟಿಲ್ಲ. ವಿದ್ಯಾರಣ್ಯರ ಸಂಕಲ್ಪ, ಹಕ್ಕ-ಬುಕ್ಕರ ಛಲದಿಂದ ಇದು ಅಸ್ತಿತ್ವಕ್ಕೆ ಬಂದಿತ್ತು. ಅದೇ ರೀತಿ ಅನೇಕ ಜನರ ಹೋರಾಟ, ಸಚಿವ ಆನಂದ್ ಸಿಂಗ್ ಅವರ ರಾಜಕೀಯ ಇಚ್ಛಾಶಕ್ತಿಯಿಂದ ಇದು ಜನ್ಮ ತಳೆದಿದೆ. ಈ ಜಿಲ್ಲೆ ರಾಜ್ಯದ ಇತರೆ 30 ಜಿಲ್ಲೆಗಳಂತೆ ಸಮಾನ ಅಭಿವೃದ್ಧಿ ಕಾಣಬೇಕು. ಈಗಾಗಲೇ ಜಿಲ್ಲೆಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಕಚೇರಿಗಳ ನಿರ್ಮಾಣಕ್ಕೆ ₹50 ಕೋಟಿ ಬಿಡುಗಡೆ ಮಾಡಲಾಗಿದೆ. ಜಿಲ್ಲೆಯ ಸ್ಥಾಪನೆಯ ದಿನವೇ ಅಭಿವೃದ್ಧಿ ಪರ್ವ ಆರಂಭಗೊಂಡಿದೆ' ಎಂದರು.

'ವಿಜಯನಗರ ಜಿಲ್ಲೆಗಿರುವ ಪರಂಪರೆಯ ಹಿನ್ನೆಲೆ ರಾಜ್ಯದ ಬೇರೆ ಯಾವ ಜಿಲ್ಲೆಗೂ ಇಲ್ಲ. ವಿಜಯನಗರ ಸಾಮ್ರಾಜ್ಯದಲ್ಲಿ ಎಲ್ಲಾ ಪ್ರಜೆಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಲಾಗಿತ್ತು. ನಮ್ಮ ಸರ್ಕಾರವೂ ಅದೇ ಆಶಯ ಒಳಗೊಂಡಿದೆ. ಈಗ ವಿಜಯನಗರದ ಪುನರ್ ಸ್ಥಾಪನೆಯಾಗಿದೆ. ಸರ್ವರೂ ಸುಖ, ಶಾಂತಿ, ಸಮೃದ್ಧಿಯಿಂದ ಇರಬೇಕು. ಆರ್ಥಿಕವಾಗಿ ಎಲ್ಲರೂ ಸಬಲರಾಗಬೇಕು. ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಎಲ್ಲಾ ಸವಲತ್ತು ಸಿಗಬೇಕು. ಅದಕ್ಕಾಗಿ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಎಲ್ಲಾ ರೀತಿಯ ಸೌಲಭ್ಯ ಕಲ್ಪಿಸಲು ಸರ್ಕಾರ ಮುಂದಾಗಿದೆ. ಈ ಯೋಜನೆಗೆ ಬರುವ ಜನವರಿಯಲ್ಲಿ ಚಾಲನೆ ನೀಡಲಾಗುವುದು' ಎಂದು ತಿಳಿಸಿದರು.



ಹೊಸಪೇಟೆಯಲ್ಲಿ ಶನಿವಾರ ಸಂಜೆ ನಡೆದ ವಿಜಯನಗರ ಜಿಲ್ಲೆ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ವಿಜಯನಗರದ ಸ್ತಂಭ ಅನಾವರಣಗೊಳಿಸಿದರು. ಇಂಧನ ಖಾತೆ ಸಚಿವ ಸುನೀಲ್ ಕುಮಾರ್, ನಗರಾಭಿವೃದ್ಧಿ ಖಾತೆ ಸಚಿವ ಬೈರತಿ ಬಸವರಾಜ, ತೋಟಗಾರಿಕೆ ಸಚಿವ ಎನ್. ಮುನಿರತ್ನ, ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ, ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್, ಶಾಸಕ ಬಿ.ಎಸ್. ಯಡಿಯೂರಪ್ಪ, ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಸಾರಿಗೆ ಸಚಿವ ಬಿ. ಶ್ರೀರಾಮುಲು ಇದ್ದಾರೆ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿಕೆ

ಅಭ್ಯರ್ಥಿಗಳ ಪಟ್ಟಿ ಇಂದು ಅಂತಿಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿಂದಗಿ ಮತ್ತು ಹಾನಗಲ್ ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯ ಸಂಭವನೀಯ ಅಭ್ಯರ್ಥಿಗಳ ಕುರಿತು ಭಾನುವಾರ ನಡೆಯುವ ಪಕ್ಷದ ರಾಜ್ಯ ಪ್ರಮುಖರ ಸಮಿತಿ (ಕೋರ್ ಕಮಿಟಿ) ಸಭೆಯಲ್ಲಿ ಚರ್ಚಿಸಿ, ವರಿಷ್ಠರಿಗೆ ಶಿಫಾರಸು ಕಳುಹಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರ ನಿವಾಸಕ್ಕೆ ಶನಿವಾರ ಭೇಟಿನೀಡಿ ಮೈಸೂರು ದಸರಾ ಉದ್ಘಾಟನೆಗೆ ಅಧಿಕೃತ ಆಹ್ವಾನ ನೀಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ರು.

'ಸಿಂದಗಿ ಮತ್ತು ಹಾನಗಲ್ ಕ್ಷೇತ್ರಗಳಲ್ಲಿ ಈಗಾಗಲೇ ಪಕ್ಷದ ಸ್ಥಳೀಯ ಕಾರ್ಯಕರ್ತರ ಸಭೆ ನಡೆಸಿ, ಅಭಿಪ್ರಾಯ ಸಂಗ್ರಹಿಸಲಾಗಿದೆ. ಅಲ್ಲಿಂದ ಬಂದಿರುವ ವರದಿಗಳ ಕುರಿತು ಪ್ರಮುಖರ ಸಮಿತಿ ಚರ್ಚಿಸಲಿದೆ. ಸಭೆಯ ಬಳಿಕ ಸಂಭವನೀಯ ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ರಾಷ್ಟ್ರೀಯ ಘಟಕಕ್ಕೆ ರವಾನಿಸಲಾಗುವುದು ಎಂದರು.

ಕೆಲವು ಸಚಿವರು ಮತ್ತು ಪಕ್ಷದ ಪದಾಧಿಕಾರಿಗಳಲ್ಲಿ ಕೆಲವರನ್ನು ಚುನಾವಣಾ ಉಸ್ತುವಾರಿಗಳನ್ನಾಗಿ ನೇಮಿಸಲಾಗುವುದು. ಈ ಬಗ್ಗೆಯೂ ಪ್ರಮುಖರ ಸಮಿತಿಯ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ಹೇಳಿದರು.

ಸಂವಿಧಾನ ಕ್ಲಬ್ ಸ್ಥಾಪನೆಗೆ ತೀರ್ಮಾನ: ಸಂವಿಧಾನ ಕ್ಲಬ್ (ಕಾನ್‌ಸ್ಟಿಟ್ಯೂಷನ್ ಕ್ಲಬ್) ಸ್ಥಾಪಿಸುವ ಪ್ರಸ್ತಾವ ಹತ್ತು ವರ್ಷಗಳಿಂದಲೂ ಬಾಕಿ ಇತ್ತು. ಎಲ್ಲ ಪಕ್ಷಗಳ ನಾಯಕರ ಜತೆಗೂ ಈ ಕುರಿತು ಚರ್ಚಿಸಲಾಗಿತ್ತು. ಈಗ ಕ್ಲಬ್ ಸ್ಥಾಪನೆಗೆ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ತಕ್ಷಣದಲ್ಲೇ ಕ್ಲಬ್ ಆರಂಭವಾಗುವುದಿಲ್ಲ. ಹತ್ತು ವರ್ಷಗಳಿಂದಲೂ ಬಾಕಿ ಇರುವ ಪ್ರಸ್ತಾವದ ಕುರಿತು ಚರ್ಚಿಸಿ, ತೀರ್ಮಾನಕ್ಕೆ ಬರಲಾಗಿದೆ. ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲ ಪಕ್ಷಗಳ ನಾಯಕರ ಜತೆಗೂ ಈ ಕುರಿತು ಚರ್ಚಿಸಲಾಗಿದೆ ಎಂದರು.

ಆತ್ಮಹತ್ಯೆ ಪರಿಹಾರವಲ್ಲ

ಹೆಚ್ಚುತ್ತಿರುವ ಆತ್ಮಹತ್ಯೆ ತಡೆ ಕುರಿತ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ತಾತ್ಕಾಲಿಕವಾಗಿ ನಮ್ಮನ್ನು ಕಾಡುವ ಸಮಸ್ಯೆಗಳಿಗೆ ಆತ್ಮಹತ್ಯೆ ಪರಿಹಾರವಲ್ಲ. ಕುಟುಂಬದ ಜತೆ ಒಟ್ಟಾಗಿ ನಿಂತು ಸಮಸ್ಯೆಗಳನ್ನು ಎದುರಿಸಬೇಕು. ಆತ್ಮಹತ್ಯೆಗಳನ್ನು ತಡೆಯಲು ಸರ್ಕಾರ, ಸಮಾಜ, ಶಿಕ್ಷಣ ಸಂಸ್ಥೆಗಳು ಎಲ್ಲರೂ ಒಗ್ಗೂಡಿ ಪ್ರಯತ್ನಿಸಬೇಕಿದೆ ಎಂದು ಹೇಳಿದರು.

ಇಂದು ಪ್ರಮುಖರ ಸಮಿತಿ ಸಭೆ

ಎರಡು ವಿಧಾನಸಭಾ ಕ್ಷೇತ್ರಗಳ ಉಪ ಚುನಾವಣೆಗೆ ಅಭ್ಯರ್ಥಿಗಳ ಪಟ್ಟಿಯನ್ನು ಅಂತಿಮಗೊಳಿಸುವ ಸಂಬಂಧ ಬಿಜೆಪಿ ರಾಜ್ಯ ಘಟಕದ ಪ್ರಮುಖರ ಸಮಿತಿ ಸಭೆ ಭಾನುವಾರ ನಡೆಯಲಿದೆ.

ಪಕ್ಷದ ರಾಜ್ಯ ಘಟಕದ ಉಸ್ತುವಾರಿ ಅರುಣ್ ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಸೇರಿದಂತೆ ಪ್ರಮುಖರು ಸಭೆ ಸೇರಿ ಚರ್ಚಿಸಲಿದ್ದಾರೆ.

'7ಕ್ಕೆ ಹಾನಗಲ್, 8ಕ್ಕೆ ಸಿಂದಗಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ನಾಮಪತ್ರ'



ಡಿ.ಕೆ. ಶಿವಕುಮಾರ್

ಬೆಂಗಳೂರು: ಉಪ ಚುನಾವಣೆ ನಡೆಯಲಿರುವ ಹಾನಗಲ್ ಕ್ಷೇತ್ರಕ್ಕೆ ಇದೇ 7ರಂದು ಹಾಗೂ ಸಿಂದಗಿಯಲ್ಲಿ 8ರಂದು ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಲಿದ್ದಾರೆ.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಎರಡೂ ಕ್ಷೇತ್ರಗಳ ಅಭ್ಯರ್ಥಿ ಬಗ್ಗೆ ಸ್ಥಳೀಯ ನಾಯಕರ ಜತೆ ನಾವು ಚರ್ಚಿಸಿದ್ದೇವೆ. ನಮ್ಮ ಅಭಿಪ್ರಾಯವನ್ನು ವರಿಷ್ಠರಿಗೆ ತಿಳಿಸಿದ್ದೇವೆ' ಎಂದರು.

'7ರಂದು ನಾನು, ಶಾಸಕಾಂಗ ಪಕ್ಷದ ನಾಯಕರಾದ ಸಿದ್ದರಾಮಯ್ಯ, ಎಚ್.ಕೆ. ಪಾಟೀಲ ಮತ್ತು ಸ್ಥಳೀಯ ನಾಯಕರು ಹಾನಗಲ್‌ಗೆ ತೆರಳಲಿದ್ದೇವೆ. ಮರುದಿನ ಸಿಂದಗಿಗೆ ಹೋಗುತ್ತೇವೆ. ಎರಡೂ ಕ್ಷೇತ್ರಗಳಲ್ಲಿ ಪಕ್ಷ ಗೆಲ್ಲುವ ವಿಶ್ವಾಸವಿದೆ' ಎಂದರು.

ಮುಸ್ಲಿಂ ಸಮುದಾಯದ ಅಭ್ಯರ್ಥಿಯನ್ನು ಜೆಡಿಎಸ್ ಕಣಕ್ಕೆ ಇಳಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಅದು ಅವರ ಪಕ್ಷದ ರಾಜಕೀಯ ತಂತ್ರಗಾರಿಕೆ. ಅದರ ಬಗ್ಗೆ ನಾನು ಮಾತನಾಡುವುದಿಲ್ಲ' ಎಂದು ಶಿವಕುಮಾರ್ ಹೇಳಿದರು.

ಪರಮೇಶ್ವರ ಅವರು ಮುಖ್ಯಮಂತ್ರಿ ಆಗುವ ಬಯಕೆ ವ್ಯಕ್ತಪಡಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಯಾರು ಯಾವ ಆಸೆ ಬೇಕಾದರೂ ವ್ಯಕ್ತಪಡಿಸಬಹುದು. ಅದರಲ್ಲಿ ತಪ್ಪಿಲ್ಲ' ಎಂದರು.

'ಬಿಜೆಪಿ ಗೆಲ್ಲಿಸಲು ಜೆಡಿಎಸ್‌ನಿಂದ ಮುಸ್ಲಿಂ ಅಭ್ಯರ್ಥಿ'

'ಬಿಜೆಪಿಗೆ ಅನುಕೂಲ ಮಾಡಲು ಜೆಡಿಎಸ್‌ನವರು ಉತ್ತರ ಕರ್ನಾಟಕ ಭಾಗದಲ್ಲಿ ಮುಸ್ಲಿಂ ಅಭ್ಯರ್ಥಿ ಹಾಕುತ್ತಾರೆ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೇಳಿದರು.

'ಜೆಡಿಎಸ್‌ನವರು ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಕಾಂಗ್ರೆಸ್ ಸೋಲಿಸುವ ಕೆಲಸ ಮಾಡುತ್ತಿದ್ದಾರೆ. ಬಸವಕಲ್ಯಾಣದಲ್ಲಿ ಅದನ್ನೇ ಮಾಡಿದ್ದರು. ಮುಸ್ಲಿಮರ ಬಗ್ಗೆ ಕಾಳಜಿ ಇದ್ದರೆ ಸಂಪುಟದಲ್ಲಿ ಯಾಕೆ ಯಾರಿಗೂ ಅವಕಾಶ ಕೊಟ್ಟಿರಲಿಲ್ಲ. ಮಂಡ್ಯ, ಮೈಸೂರಿನಲ್ಲಿ ಅಲ್ಪಸಂಖ್ಯಾತರಿಗೆ ಯಾಕೆ ಟಿಕೆಟ್ ಕೊಡಲ್ಲ ' ಎಂದು ಪ್ರಶ್ನಿಸಿದರು.

'ಹಾನಗಲ್‌ನಲ್ಲಿ ಮನೋಹರ ತಹಶೀಲ್ದಾರ್ ಮತ್ತು ಶ್ರೀನಿವಾಸ ಮಾನೆ ಆಕಾಂಕ್ಷಿಗಳು. ನಾವು ಯಾರಿಗೆ ಟಿಕೆಟ್ ಕೊಟ್ಟರೂ ಒಟ್ಟಾಗಿ ಕೆಲಸ ಮಾಡಬೇಕು ಎಂದು ಹೇಳಿದ್ದೇವೆ. 2–3 ದಿನಗಳಲ್ಲಿ ಹೈಕಮಾಂಡ್ ಅಂತಿಮ ನಿರ್ಧಾರ ತೆಗೆದುಕೊಳ್ಳಲಿದೆ' ಎಂದು ಅವರು ಹೇಳಿದರು.

'ಪರಮೇಶ್ವರ ಹೇಳಿಕೆಯ ಬಗ್ಗೆ ನಾನು ಏನೂ ಮಾತನಾಡಲ್ಲ. ಹೈಕಮಾಂಡ್ ಏನು ನಿರ್ಧಾರ ಮಾಡುತ್ತೊ ಅದಕ್ಕೆ ಬದ್ಧ' ಎಂದರು.

ಸುದ್ದಿ 2 ನಿಮಿಷ

ಸಿ.ಪಿ.ಯೋಗೇಶ್ವರ್ ಪುತ್ರಿ ವಿರುದ್ಧ ಕ್ರಮಕ್ಕೆ ನಿರ್ಧಾರ

ಮಂಡ್ಯ: ಗೋದಾಮು ಬಾಡಿಗೆ, ತೆರಿಗೆ ವಂಚನೆ ಆರೋಪ ಎದುರಿಸುತ್ತಿರುವ ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಪಿ.ಯೋಗೇಶ್ವರ್ ಪುತ್ರಿ, ಡೆಕ್ಕನ್ ಫೀಲ್ಡ್ ಆಗ್ರೋ ಇಂಡಸ್ಟ್ರಿ ಸಿಇಒ ನಿಶಾ ಯೋಗೇಶ್ವರ್ ವಿರುದ್ಧ ಕ್ರಮ ಕೈಗೊಳ್ಳಲು ಮದ್ದೂರು ತಾಲ್ಲೂಕು ವ್ಯವಸಾಯೋತ್ಪನ್ನಗಳ ಮಾರಾಟ ಸಹಕಾರ ಸಂಘ (ಟಿಎಪಿಸಿಎಂಎಸ್) ನಿರ್ಧರಿಸಿದೆ.

2018ರ ಏಪ್ರಿಲ್‌ನಿಂದ ಇಲ್ಲಿಯವರೆಗೆ ಡೆಕ್ಕನ್ ಫೀಲ್ಡ್ ಆಗ್ರೋ ಇಂಡಸ್ಟ್ರಿ ಗೋದಾಮು ಬಾಡಿಗೆ, ಖಾಲಿ ಆವರಣದ ನೆಲಬಾಡಿಗೆ ಪಾವತಿಸದೆ ವಂಚಿಸಿದೆ. ಸೆಪ್ಟೆಂಬರ್ ಅಂತ್ಯದವರೆಗೆ ₹ 36 ಲಕ್ಷ ಬಾಡಿಗೆ, ಶೇ 18 ಜಿಎಸ್‌ಟಿ ಸೇರಿ ₹ 42 ಲಕ್ಷ ಹಣ ಬರಬೇಕಾಗಿದೆ. ಖಾಲಿ ಜಾಗದ ನೆಲ ಬಾಡಿಗೆ ₹ 1.9 ಲಕ್ಷ ಬಾಕಿ ಇದೆ. ಜೊತೆಗೆ ಪುರಸಭೆಯ ಕಂದಾಯ, ತೆರಿಗೆ ಸೇರಿ ಒಟ್ಟು ₹ 5 ಲಕ್ಷ ಬರಬೇಕಾಗಿದೆ.



ಕಂಪನಿಯ ಸಿಇಒ ನಿಶಾ ಅವರಿಗೆ ಹಲವು ಬಾರಿ ನೋಟಿಸ್ ನೀಡಿದರೂ ಬಾಡಿಗೆ ಹಾಗೂ ತೆರಿಗೆ ಹಣ ಪಾವತಿಸಿಲ್ಲ. ಹೀಗಾಗಿ ಅವರ ವಿರುದ್ಧ ಕ್ರಮ ಕೈಗೊಳ್ಳುವ ಕುರಿತು ಸೆ.25ರಂದು ನಡೆದ ಟಿಎಪಿಸಿಎಂಎಸ್ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಳ್ಳಲಾಗಿದೆ.

'ಗೋದಾಮು ಬಾಡಿಗೆ ಪಡೆಯುವಾಗ ₹ 20 ಲಕ್ಷ ಮುಂಗಡ ಪಾವತಿಸಿದ್ದರು. ನಂತರ ಇಲ್ಲಿಯವರೆಗೂ ಹಣ ಪಾವತಿಸಿಲ್ಲ. ಗೋದಾಮು ಕಟ್ಟಡವನ್ನು ತೀವ್ರವಾಗಿ ಹಾನಿಗೊಳಿಸಿದ್ದಾರೆ. ಕರಾರು ಉಲ್ಲಂಘಿಸಿದ್ದಾರೆ. ಇವೆಲ್ಲದರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಟಿಎಪಿಸಿಎಂಎಸ್ ಉಪಾಧ್ಯಕ್ಷ ರಾಘವ್ ತಿಳಿಸಿದರು.

ಎಸ್.ಎಂ. ಕೃಷ್ಣಗೆ ಸರ್ಕಾರದ ಅಧಿಕೃತ ಆಹ್ವಾನ

ಬೆಂಗಳೂರು: ಇದೇ 7ರಿಂದ ಆರಂಭವಾಗುವ ನಾಡಹಬ್ಬ ಮೈಸೂರು ದಸರಾ ಉದ್ಘಾಟಿಸುವಂತೆ ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ಅಧಿಕೃತವಾಗಿ ಆಹ್ವಾನ ನೀಡಿದರು.

ಕೃಷ್ಣ ನಿವಾಸಕ್ಕೆ ಭೇಟಿ ನೀಡಿದ ಮುಖ್ಯಮಂತ್ರಿಯವರು, ಮೈಸೂರು ಪೇಟ ತೊಡಿಸಿ, ಶಾಲು ಹೊದಿಸಿ, ಫಲ ತಾಂಬೂಲ ನೀಡಿ ಗೌರವಿಸಿದರು. ಶಿವನಿ ಮರದಲ್ಲಿ ಕೆತ್ತನೆ ಮಾಡಿರುವ ಮೈಸೂರು ಅಂಬಾರಿಯ ಕಲಾಕೃತಿಯ ಸ್ಮರಣಿಕೆ ನೀಡಿ ದಸರಾ ಉದ್ಘಾಟನೆಗೆ ಆಹ್ವಾನಿಸಿದರು.

'ರಾಜ್ಯ ರಾಜಕೀಯದಲ್ಲಿ ಮುತ್ಸದ್ದಿ ನಾಯಕರಾಗಿ ಬೆಳೆದಿರುವ ಎಸ್.ಎಂ. ಕೃಷ್ಣ ಅವರನ್ನು ಈ ಬಾರಿಯ ದಸರಾ ಉದ್ಘಾಟಕರಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದೆವು. ನಾಡಹಬ್ಬ ಉದ್ಘಾಟಿಸುವಂತೆ ಅಧಿಕೃತವಾಗಿ ಆಹ್ವಾನ ನೀಡಿದ್ದೇವೆ' ಎಂದರು.

ಆಹ್ವಾನ ಸ್ವೀಕರಿಸಿದ ಬಳಿಕ ಪ್ರತಿಕ್ರಿಯಿಸಿದ ಕೃಷ್ಣ, 'ಮೈಸೂರು ನಗರ ಮತ್ತು ಅಲ್ಲಿನ ರಾಮಕೃಷ್ಣ ಆಶ್ರಮ ನನ್ನ ವ್ಯಕ್ತಿತ್ವದ ಮೇಲೆ ಬಹಳಷ್ಟು ಪ್ರಭಾವ ಬೀರಿವೆ. ಶಾಲೆ, ಕಾಲೇಜು ದಿನಗಳನ್ನು ಮೈಸೂರಿನಲ್ಲಿ ಕಳೆದಿದ್ದೆ. ಈಗ ದಸರಾ ಉದ್ಘಾಟಿಸುವ ಸುಯೋಗ ಸಿಕ್ಕಿದೆ' ಎಂದು ಹೇಳಿದರು.

ಕಂದಾಯ ಸಚಿವ ಆರ್. ಅಶೋಕ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಸಂಸದ ಪ್ರತಾಪ ಸಿಂಹ, ಮೈಸೂರು ಮಹಾನಗರ ಪಾಲಿಕೆ ಮೇಯರ್ ಸುನಂದಾ ಫಾಲನೇತ್ರ ಇದ್ದರು.

'ಹಕ್ಕುಪತ್ರ ಶುಲ್ಕ ಕಡಿತ: ಸಂಪುಟದಲ್ಲಿ ಚರ್ಚೆ'

ಹುಬ್ಬಳ್ಳಿ: 'ಕೊಳಚೆ ಪ್ರದೇಶದ ನಿವಾಸಿಗಳಿಗೆ ನೀಡುವ ಹಕ್ಕುಪತ್ರದ ಶುಲ್ಕವನ್ನು ಕಡಿಮೆ ಮಾಡುವ ಕುರಿತು ಸಚಿವ ಸಂಪುಟದಲ್ಲಿ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು' ಎಂದು ವಸತಿ ಸಚಿವ ವಿ. ಸೋಮಣ್ಣ ಹೇಳಿದರು.

ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಹುಬ್ಬಳ್ಳಿಯ ಕೊಳಚೆ ಪ್ರದೇಶದ ನಿವಾಸಿಗಳಿಗೆ ಚಾಮುಂಡೇಶ್ವರಿ ನಗರದಲ್ಲಿ ಶನಿವಾರ ಹಕ್ಕುಪತ್ರ ವಿತರಿಸಿ ಅವರು ಮಾತನಾಡಿದರು.

'ಹಕ್ಕುಪತ್ರ ನೀಡಲು ಸಾಮಾನ್ಯ ವರ್ಗದವರಿಂದ ₹4 ಸಾವಿರ, ಪರಿಶಿಷ್ಟ ವರ್ಗದವರಿಂದ ₹2 ಸಾವಿರ ಪಡೆಯಲಾಗುತ್ತಿದೆ. ಕಡುಬಡವರಿಗೆ ಈ ಹಣವನ್ನೂ ಭರಿಸಲು ಕಷ್ಟವಾಗುತ್ತಿದೆ ಎನ್ನುವ ಅಭಿಪ್ರಾಯವಿದೆ. ಈ ಹಿನ್ನೆಲೆಯಲ್ಲಿ ಸಾಮಾನ್ಯ ವರ್ಗದವರಿಗೆ ₹2 ಸಾವಿರ ಮತ್ತು ಪರಿಶಿಷ್ಟ ವರ್ಗದವರಿಗೆ ₹1 ಸಾವಿರ ನಿಗದಿ ಮಾಡಲು ಚಿಂತನೆ ನಡೆದಿದೆ' ಎಂದು ತಿಳಿಸಿದರು.

'ರಾಜ್ಯದ ಕೊಳಚೆ ಪ್ರದೇಶದಲ್ಲಿರುವ 3.37 ಲಕ್ಷ ಕುಟುಂಬಗಳಿಗೆ ಮನೆಗಳನ್ನು ನಿರ್ಮಿಸಿಕೊಟ್ಟು, ಏಕಕಾಲದಲ್ಲಿ ಹಕ್ಕು ಪತ್ರ ನೀಡಲಾಗುತ್ತಿದೆ. ಅದಕ್ಕಾಗಿ 8,600 ಎಕರೆ ಜಾಗವನ್ನು ನೀಡಲಾಗಿದೆ' ಎಂದು ಹೇಳಿದರು.

ಬಿಎಂಟಿಸಿ ನೌಕರನ ಸಾವಿನಿಂದ ನೊಂದಿದ್ದ ಕುಟುಂಬ

ಮಗ,ಮಗಳ ಕೊಂದು ತಾಯಿ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತ್ಮಹತ್ಯೆಗೆ ಪ್ರಚೋದಿಸಿ ಮಗನಿಗೆ ನೇಣು ಹಾಕಿಸಿ, ಮಗಳನ್ನು ಕೊಂದು ತಾಯಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಹೃದಯವಿದ್ರಾವಕ ಘಟನೆ ಬೆಂಗಳೂರಿನ ಮಾದನಾಯಕನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

'ಬೆಂಗಳೂರು ಉತ್ತರ ತಾಲ್ಲೂಕಿನ ಪ್ರಕೃತಿ ಬಡಾವಣೆಯ ವಸಂತಾ (36), ಅವರ ಮಗ ಯಶವಂತ (15) ಹಾಗೂ ಮಗಳು ನಿಶ್ಚಿತಾ (7) ಮೃತರು. ಮರಣೋತ್ತರ ಪರೀಕ್ಷೆ ನಡೆಸಿ ಮೂವರ ಮೃತದೇಹಗಳನ್ನು ಸಂಬಂಧಿಕರಿಗೆ ಹಸ್ತಾಂತರಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮಗನ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಹಾಗೂ ಮಗಳನ್ನು ಕೊಂದ ಆರೋಪದಡಿ ವಸಂತಾ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ತನಿಖೆ ಮುಂದುವರಿದಿದೆ' ಎಂದೂ ತಿಳಿಸಿದರು.

ಬಿಎಂಟಿಸಿ ನೌಕರನ ಕುಟುಂಬ: 'ಮೈಸೂರು ಜಿಲ್ಲೆಯ ಪಿರಿಯಾಪಟ್ಟಣದ ಪ್ರಸನ್ನಕುಮಾರ್, ನಗರದ ಬಿಎಂಟಿಸಿಯಲ್ಲಿ ಚಾಲಕ ಮತ್ತು ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದರು. ಅವರನ್ನು ಕೆಲ ವರ್ಷಗಳ ಹಿಂದೆ ವಸಂತಾ ಮದುವೆಯಾಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದರು' ಎಂದೂ ಅಧಿಕಾರಿ ಹೇಳಿದರು.

'ಬಾಡಿಗೆ ಮನೆಯಲ್ಲಿದ್ದ ದಂಪತಿ, ಸ್ವಂತ ಮನೆ ಖರೀದಿಸಲು ಮುಂದಾಗಿದ್ದರು. ₹ 20 ಲಕ್ಷ ಸಾಲ ಮಾಡಿ ಪ್ರಕೃತಿ ಬಡಾವಣೆಯಲ್ಲಿ ಮನೆ ಖರೀದಿಸಿದ್ದರು. ಅಲ್ಲಿಯೇ ಮಕ್ಕಳ ಜೊತೆ ದಂಪತಿ ವಾಸವಿದ್ದರು.'

'ಕೊರೊನಾ ಸೋಂಕು ತಗುಲಿ ಆಸ್ಪತ್ರೆ ಸೇರಿದ್ದ ಪ್ರಸನ್ನ ಕುಮಾರ್, ಚಿಕಿತ್ಸೆಗೆ ಸ್ಪಂದಿಸದೇ 2020ರ ಆಗಸ್ಟ್ 7ರಂದು ತೀರಿಕೊಂಡಿದ್ದರು. ಅವರ ಸಾವಿನಿಂದ ಕುಟುಂಬ ಸಂಕಷ್ಟಕ್ಕೆ ಸಿಲುಕಿತ್ತು. ವಸಂತಾ ಸಹ ಮಾನಸಿಕವಾಗಿ ನೊಂದಿದ್ದರು. ಮನೆ ಖರೀದಿಗೆ ಮಾಡಿದ್ದ ಸಾಲ ತೀರಿಸಲು ಅವರಿಗೆ ಆಗಿರಲಿಲ್ಲ. ಹೀಗಾಗಿ, ಸಾಲಗಾರರ ಕಾಟವೂ ಹೆಚ್ಚಾಗಿತ್ತು' ಎಂದೂ ಅಧಿಕಾರಿ ಮಾಹಿತಿ ನೀಡಿದರು.

'ಮನೆ ಮಾರಲು ತೀರ್ಮಾನಿಸಿದ್ದ ವಸಂತಾ, ಸಹೋದರ ಹಾಗೂ ಇತರರ ಮೂಲಕ ಗ್ರಾಹಕರಿಗಾಗಿ ಹುಡುಕಾಡುತ್ತಿದ್ದರು. ಆದರೆ, ಮನೆ ಮಾರಾಟ ಆಗಿರಲಿಲ್ಲ. ಇದು ವಸಂತಾ ಅವರನ್ನು ಮತ್ತಷ್ಟು ಚಿಂತೆಗೆ ದೂಡಿತ್ತು. ನೊಂದ ವಸಂತಾ, ಎರಡು ಬಾರಿ ಆತ್ಮಹತ್ಯೆಗೆ ಯತ್ನಿಸಿದ್ದರು. ಕುಟುಂಬಸ್ಥರೇ ಅವರನ್ನು ಕಾಪಾಡಿ ಬುದ್ದಿವಾದ ಹೇಳಿದ್ದರು ಎಂಬುದು ತನಿಖೆಯಿಂದ ತಿಳಿದುಬಂದಿದೆ' ಎಂದೂ ಅಧಿಕಾರಿ ಹೇಳಿದರು.

ಮನೆ ಕೊಠಡಿಯಲ್ಲಿ ಆತ್ಮಹತ್ಯೆ: 'ಮನೆಯ ಕೊಠಡಿಯೊಂದರಲ್ಲಿ ಮಗನಿಗೆ ನೇಣು ಹಾಕಿಸಿದ್ದ ವಸಂತಾ, ನಂತರ ಮಗಳನ್ನು ಕೊಂದು ಆಕೆಯ ಜೊತೆಯಲ್ಲೇ ಒಂದೇ ಹಗ್ಗದಲ್ಲಿ ನೇಣು ಹಾಕಿಕೊಂಡು ಶುಕ್ರವಾರ ಮಧ್ಯಾಹ್ನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ' ಎಂದೂ ಅಧಿಕಾರಿ ತಿಳಿಸಿದರು.

'ಮನೆ ಮಾರಾಟ ಬಗ್ಗೆ ಮಾತನಾಡಲು ವಸಂತಾ ಅವರಿಗೆ ಸಹೋದರ ಕರೆ ಮಾಡಿದ್ದರು. ಆದರೆ, ಯಾವುದೇ ಪ್ರತಿಕ್ರಿಯೆ ಬಂದಿರಲಿಲ್ಲ. ಗಾಬರಿಗೊಂಡ ಸಹೋದರ, ರಾತ್ರಿ ಮನೆ ಬಳಿ ಬಂದು ನೋಡಿದಾಗಲೇ ವಿಷಯ ಗೊತ್ತಾಯಿತು' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.



ವಸಂತಾ, ನಿಶ್ಚಿತಾ, ಪ್ರಸನ್ನಕುಮಾರ್ ಹಾಗೂ ಯಶವಂತ್

'₹ 30 ಲಕ್ಷ ಪರಿಹಾರಕ್ಕೆ ಕಾಯುತ್ತಿದ್ದ ಕುಟುಂಬ'

'ಬಿಎಂಟಿಸಿ ಚಾಲಕ ಹಾಗೂ ನಿರ್ವಾಹಕರನ್ನು ಕೊರೊನಾ ಯೋಧರೆಂದು ಸರ್ಕಾರ ಘೋಷಿಸಿತ್ತು. ಅವರು ಕೋವಿಡ್‌ನಿಂದ ಮೃತಪಟ್ಟರೆ ಅವಲಂಬಿತರಿಗೆ ₹ 30 ಲಕ್ಷ ಪರಿಹಾರ ನೀಡುವುದಾಗಿ ಘೋಷಿಸಿತ್ತು. ಆದರೆ, ಪ್ರಸನ್ನಕುಮಾರ್ ಅವರಿಗೆ ಯಾವುದೇ ಪರಿಹಾರ ನೀಡಿರಲಿಲ್ಲ' ಎಂದು ಸಂಬಂಧಿಕರೊಬ್ಬರು ಹೇಳಿದರು.

'ಪರಿಹಾರಕ್ಕಾಗಿ ಪತಿ ವಸಂತಾ, ಹಲವು ಬಾರಿ ಬಿಎಂಟಿಸಿ ಅಧಿಕಾರಿಗಳನ್ನು ಸಂಪರ್ಕಿಸಿದ್ದರು. ನಾನಾ ಕಾರಣ ನೀಡಿದ್ದ ಅಧಿಕಾರಿಗಳು, ಪರಿಹಾರ ನೀಡಲು ಮಂಜೂರು ಮಾಡಿಸಲು ಪ್ರಯತ್ನಿಸಿರಲಿಲ್ಲ. 'ಪರಿಹಾರ ಬಂದರೆ ಸಾಲ ತೀರಿಸಿ, ಮಕ್ಕಳನ್ನು ಚೆನ್ನಾಗಿ ನೋಡಿಕೊಳ್ಳಬಹುದು' ಎಂದು ತಿಳಿದಿದ್ದ ವಸಂತಾ, ಅಧಿಕಾರಿಗಳ ನಿರ್ಲಕ್ಷ್ಯದಿಂದ ನೊಂದಿದ್ದರು' ಎಂಬುದಾಗಿಯೂ ಸಂಬಂಧಿಕರು ತಿಳಿಸಿದರು.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಎಂಟಿಸಿ ಹಿರಿಯ ಅಧಿಕಾರಿಯೊಬ್ಬರು, 'ಕೋವಿಡ್‌ನಿಂದ ಮೃತಪಟ್ಟಿರುವ ನಾಲ್ವರು ನೌಕರರ ಅವಲಂಬಿತರಿಗೆ ಈಗಾಗಲೇ ತಲಾ ₹30 ಲಕ್ಷ ಪರಿಹಾರ ಕೊಡಿಸಲಾಗಿದೆ. ಪ್ರಸನ್ನಕುಮಾರ್ ಪ್ರಕರಣದಲ್ಲಿ ಪರಿಹಾರ ಮಂಜೂರು ಆಗಿಲ್ಲವೇಕೆ? ಎಂಬ ಬಗ್ಗೆ ಸಂಬಂಧಪಟ್ಟ ಅಧಿಕಾರಿಯಿಂದ ಮಾಹಿತಿ ಪಡೆದು ಕ್ರಮ ಕೈಗೊಳ್ಳಲಾಗುವುದು' ಎಂದರು.

'ಮನೆ ಮಾರಿ ಸಾಲ ತೀರಿಸಿ'

'ವಸಂತಾ ಅವರು ಬರೆದಿದ್ದಾರೆ ಎನ್ನಲಾದ ಮರಣ ಪತ್ರ ಮನೆಯಲ್ಲಿ ಸಿಕ್ಕಿದೆ. 'ಈ ಸಾವಿಗೆ ನಾವೇ ಕಾರಣ. ನನ್ನ ಪತಿಯನ್ನು ಕಳೆದುಕೊಂಡ ನೋವಿನಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನವರು ಅಂತ ಯಾರೂ ಇಲ್ಲ. ಈ ಮನೆ ಮಾರಾಟ ಮಾಡಿ, ಸಾಲ ತೀರಿಸಿ' ಎಂಬುದಾಗಿ ಪತ್ರದಲ್ಲಿ ಬರೆಯಲಾಗಿದೆ. ಅದನ್ನು ಸುಪರ್ದಿಗೆ ಪಡೆದು ಪರಿಶೀಲನೆ ನಡೆಸುತ್ತಿದ್ದೇವೆ' ಎಂದೂ ಪೊಲೀಸ್ ಅಧಿಕಾರಿ ಹೇಳಿದರು.

ಅನಿಯಮಿತ ವಿದ್ಯುತ್ ಕಡಿತ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಮಾಚೋಹಳ್ಳಿ, ಸೀಗೆಹಳ್ಳಿ, ಚಿಕ್ಕಗೊಲ್ಲರಹಟ್ಟಿ ಸುತ್ತಮುತ್ತಲಿನ ಸಣ್ಣ ಕೈಗಾರಿಕೆಗಳಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಸಲು ಬೆಸ್ಕಾಂ ವಿಫಲವಾಗಿದೆ ಎಂದು ಆರೋಪಿಸಿ ಬೆಸ್ಕಾಂ ಹಾಗೂ ಸರ್ಕಾರದ ವಿರುದ್ಧ ಮಾಚೋಹಳ್ಳಿ ಸಣ್ಣ ಕೈಗಾರಿಕೆಗಳ ಸಂಘದ ಪ್ರತಿನಿಧಿಗಳು ಪ್ರತಿಭಟನೆ ನಡೆಸಿದರು.

ಮಾಗಡಿ ಮುಖ್ಯರಸ್ತೆಯ ತಾವರೆಕೆರೆ ಬೆಸ್ಕಾಂ ಕಚೇರಿ ಎದುರು ಸೇರಿದ್ದ ಪ್ರತಿನಿಧಿಗಳು, ಬೆಸ್ಕಾಂ ವಿರುದ್ಧ ಘೋಷಣೆ ಕೂಗಿದರು. 'ಸಮರ್ಪಕ ವಿದ್ಯುತ್ ಸರಬರಾಜು ಆಗದ ಕಾರಣ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಸಂಕಷ್ಟಕ್ಕೆ ಸಿಲುಕಿವೆ. ಉತ್ಪಾದನೆಯಲ್ಲಿ ಕುಸಿತವಾಗಿದ್ದು, ಬೇಡಿಕೆಗಳನ್ನು ಪೂರೈಸಲು ಸಾಧ್ಯವಾಗುತ್ತಿಲ್ಲ. ಕೆಲವು ಕೈಗಾರಿಕೆಗಳು ಮುಚ್ಚುವ ಸ್ಥಿತಿಗೆ ತಲುಪಿವೆ' ಎಂದು ಅಳಲು ತೋಡಿಕೊಂಡರು.

ಸಂಘದ ಅಧ್ಯಕ್ಷ ವಿಜಯ್ ಕುಮಾರ್, 'ಕೋವಿಡ್ ಮೊದಲ ಅಲೆಯಲ್ಲಿ ಭಾರಿ ಸಮಸ್ಯೆಗಳನ್ನು ಎದುರಿಸಿದೆವು. ಎರಡನೇ ಅಲೆಯ ಹೊಡೆತದಿಂದ ಕೈಗಾರಿಕೆಗಳು ಅಕ್ಷರಶಃ ತತ್ತರಿಸಿವೆ. ಇತ್ತೀಚೆಗೆ ನಿರಂತರವಾಗಿ ವಿದ್ಯುತ್ ಕುಡಾ ಪೂರೈಕೆ ಆಗುತ್ತಿಲ್ಲ.ಈ ಪ್ರದೇಶದಲ್ಲಿ ಸುಮಾರು 1500ಕ್ಕೂ ಹೆಚ್ಚು ಉತ್ಪಾದನಾ ಘಟಕಗಳಿದ್ದು, 25 ಸಾವಿರಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಕೈಗಾರಿಕೆಗಳನ್ನೇ ನಂಬಿಕೊಂಡಿರುವವರ ಬದುಕು ಸಂಕಷ್ಟದಲ್ಲಿದೆ' ಎಂದು ದೂರಿದರು.

ಸಂಘದ ಉಪಾಧ್ಯಕ್ಷ ಸುರೇಶ್.ಎನ್. ಸಾಗರ್ ಮಾತನಾಡಿದರು. ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದ ಬೆಸ್ಕಾಂ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಧು, 'ಎರಡು ತಿಂಗಳ ಒಳಗಾಗಿ ಸಮಸ್ಯೆಗೆ ಪರಿಹಾರ ದೊರಕಿಸಿಕೊಡುತ್ತೇವೆ' ಎಂದು ಭರವಸೆ ನೀಡಿದರು.



ಸಮರ್ಪಕವಾಗಿ ವಿದ್ಯುತ್ ಪೂರೈಸದಿರುವುದನ್ನು ಖಂಡಿಸಿ ಸಣ್ಣ ಕೈಗಾರಿಕೋದ್ಯಮಿಗಳು ಮಾಗಡಿ ಮುಖ್ಯರಸ್ತೆಯ ತಾವರೆಕೆರೆ ಬೆಸ್ಕಾಂ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಮಾಚೋಹಳ್ಳಿ ಸಣ್ಣ ಕೈಗಾರಿಕೋದ್ಯಮಿಗಳ ಸಂಘದ ಸಂಸ್ಥಾಪಕ ಅಧ್ಯಕ್ಷ ಸುಧಾಕರ ಶೆಟ್ಟಿ, ಅಧ್ಯಕ್ಷ ವಿಜಯ್ ಕುಮಾರ್, ಉಪಾಧ್ಯಕ್ಷ ಸುರೇಶ್.ಎನ್.ಸಾಗರ್ ಖಜಾಂಚಿ ಕೆ.ಅರುಣ್ ಕುಮಾರ್ ನೇತೃತ್ವ ವಹಿಸಿದ್ದರು

ಕಾಡುಗೋಡಿ ಠಾಣೆ ಎಎಸ್ಐ ಬಂಧನ

ಬೆಂಗಳೂರು: ಯುವತಿ ನಾಪತ್ತೆ ಕುರಿತಂತೆ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ಸದ್ಯದ ಸ್ಥಿತಿಯ ಮಾಹಿತಿ ನೀಡಲು ₹ 5,000 ಲಂಚ ಪಡೆದ ಕಾಡುಗೋಡಿ ಪೊಲೀಸ್ ಠಾಣೆಯ ಸಹಾಯಕ ಸಬ್ ಇನ್‌ಸ್ಪೆಕ್ಟರ್ ಶ್ರೀನಿವಾಸ್ ಅವರನ್ನು ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶನಿವಾರ ಬಂಧಿಸಿದೆ.

ಜಯನಗರದ ನಿವಾಸಿಯೊಬ್ಬರು ರಾಮಮೂರ್ತಿ ನಗರದ ಯುವತಿಯನ್ನು ಪ್ರೀತಿಸಿ ವಿವಾಹವಾಗಿದ್ದರು. ಯುವತಿ ನಾಪತ್ತೆಯಾಗಿದ್ದಾರೆ ಎಂದು ಅವರ ಪೋಷಕರು ಕಾಡುಗೋಡಿ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಲಾಗಿತ್ತು. ವಿವಾಹ ನೋಂದಣಿ ಮಾಡಿಸಲು ಮುಂದಾಗಿದ್ದ ದಂಪತಿ, ನಾಪತ್ತೆ ಪ್ರಕರಣದ ತನಿಖೆ ಕುರಿತು ಮಾಹಿತಿ ನೀಡುವಂತೆ ತಮ್ಮ ಸ್ನೇಹಿತರ ಮೂಲಕ ಎಎಸ್ಐ ಅವರನ್ನು ಸಂಪರ್ಕಿಸಿದ್ದರು. ಪ್ರಕರಣದ ಮಾಹಿತಿ ನೀಡಲು ₹5,000 ಲಂಚ ಕೊಡುವಂತೆ ಶ್ರೀನಿವಾಸ್ ಬೇಡಿಕೆ ಇಟ್ಟಿದ್ದರು. ಶನಿವಾರ ಎಎಸ್ಐ ಲಂಚದ ಹಣ ಪಡೆಯುತ್ತಿದ್ದಾಗ ದಾಳಿ ನಡೆಸಿದ ಎಸಿಬಿ ಅಧಿಕಾರಿಗಳು, ಆರೋಪಿಯನ್ನು ಬಂಧಿಸಿದ್ದಾರೆ ಎಂದು ಭ್ರಷ್ಟಾಚಾರ ನಿಗ್ರಹ ದಳ ಮಾಹಿತಿ ನೀಡಿದೆ.

₹ 27 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಸಾಗಣೆ ಹಾಗೂ ಮಾರಾಟದ ವಿರುದ್ಧ ಕಾರ್ಯಾಚರಣೆ ನಡೆಸಿರುವ ಆಡುಗೋಡಿ ಠಾಣೆ ಪೊಲೀಸರು, ಇಬ್ಬರು ಆರೋಪಿಗಳನ್ನು ಬಂಧಿಸಿದ್ದಾರೆ. ಅವರಿಂದ ₹ 27 ಲಕ್ಷ ಮೌಲ್ಯದ ಮಾದಕ ವಸ್ತು ಜಪ್ತಿ ಮಾಡಿದ್ದಾರೆ.

'ನಗರದ ಅರುಣ್ (22) ಹಾಗೂ ಆಂಧ್ರಪ್ರದೇಶದ ದಿನೇಶ್‌ಕುಮಾರ್ (19) ಬಂಧಿತರು. ಇವರಿಬ್ಬರು ತಮ್ಮದೇ ಜಾಲ ರೂಪಿಸಿಕೊಂಡು ನಗರದಲ್ಲಿ ಗಾಂಜಾ ಹಾಗೂ ಹಶೀಷ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹೊರರಾಜ್ಯಗಳಿಂದ ಆರೋಪಿಗಳು, ಗಾಂಜಾ ಹಾಗೂ ಹಶೀಷ್ ತರುತ್ತಿದ್ದರು. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು, ಕೆಲ ಕಾರ್ಮಿಕರು ಆರೋಪಿಗಳ ಬಳಿ ಡ್ರಗ್ಸ್ ಖರೀದಿಸುತ್ತಿದ್ದರು. ಇದರಿಂದ ಆರೋಪಿಗಳು, ಹಣ ಗಳಿಸಿ ಐಷಾರಾಮಿ ಜೀವನ ನಡೆಸುತ್ತಿದ್ದರು' ಎಂದೂ ತಿಳಿಸಿದರು.

'5 ಕೆ.ಜಿ 100 ಗ್ರಾಂ ಗಾಂಜಾ, 540 ಗ್ರಾಂ ಹಶೀಷ್ ಆರೋಪಿಗಳ ಬಳಿ ಸಿಕ್ಕಿದೆ. ಮೊಬೈಲ್ ಹಾಗೂ ₹1,200 ನಗದು ಸಹ ಅವರಿಂದ ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಮತ್ತಷ್ಟು ಮಂದಿ ಶಾಮೀಲಾಗಿರುವ ಮಾಹಿತಿ ಇದೆ' ಎಂದೂ ಪೊಲೀಸರು ವಿವರಿಸಿದರು.

ಎನ್‌ಸಿಬಿ ಕಾರ್ಯಾಚರಣೆ; 140 ಕೆ.ಜಿ ಗಾಂಜಾ, ಎರಡು ಕಾರು ಜಪ್ತಿ

'ಸ್ವಿಗ್ಗಿ' ಡೆಲಿವರಿ ಬಾಯ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹಾರ ಪೊಟ್ಟಣಗಳ ಜೊತೆಯಲ್ಲಿ 'ಡ್ರಗ್ಸ್' ಬಚ್ಚಿಟ್ಟು ಗ್ರಾಹಕರಿಗೆ ಪೂರೈಕೆ ಮಾಡುತ್ತಿದ್ದ ಆರೋಪದಡಿ 'ಸ್ವಿಗ್ಗಿ' ಡೆಲಿವರಿ ಬಾಯ್ ಸೇರಿ ಏಳು ಮಂದಿಯನ್ನು ರಾಷ್ಟ್ರೀಯ ಮಾದಕ ವಸ್ತು ನಿಯಂತ್ರಣ ಘಟಕದ (ಎನ್‌ಸಿಬಿ) ಅಧಿಕಾರಿಗಳು ಬಂಧಿಸಿದ್ದಾರೆ.

'ನಗರದಲ್ಲಿ ವ್ಯವಸ್ಥಿತವಾಗಿ ಡ್ರಗ್ಸ್ ಮಾರುತ್ತಿದ್ದ ಜಾಲವನ್ನು ಭೇದಿಸಿ, ಏಳು ಮಂದಿಯನ್ನು ಸೆರೆ ಹಿಡಿಯಲಾಗಿದೆ. 140 ಕೆ.ಜಿ ಡ್ರಗ್ಸ್ ಹಾಗೂ ಎರಡು ಕಾರುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಎನ್‌ಸಿಬಿ ವಲಯ ನಿರ್ದೇಶಕ ಅಮಿತ್ ಘಾವಟೆ 'ಪ್ರಜಾವಾಣಿ'ಗೆ ತಿಳಿಸಿದರು.

'ಗಾಂಜಾವನ್ನು ಬಾಕ್ಸ್‌ಗಳಲ್ಲಿ ತುಂಬಿ ಕೊರಿಯರ್ ಮೂಲಕ ನಗರಕ್ಕೆ ಸಾಗಿಸುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಅದನ್ನು ಆಧರಿಸಿ ಕಾರ್ಯಾಚರಣೆ ನಡೆಸಿ, ಮಾರುತಿ ಸ್ವಿಫ್ಟ್ ಕಾರಿನಲ್ಲಿ ಸಾಗಿಸುತ್ತಿದ್ದ 8 ಬಾಕ್ಸ್‌ಗಳನ್ನು ಜಪ್ತಿ ಮಾಡಿ, ಇಬ್ಬರನ್ನು ಬಂಧಿಸಲಾಯಿತು. ಆ ಬಾಕ್ಸ್‌ಗಳಲ್ಲಿ 137 ಕೆ.ಜಿ ಗಾಂಜಾ ಇತ್ತು' ಎಂದೂ ಹೇಳಿದರು.

'ಬಂಧಿತ ಆರೋಪಿಗಳ ಮನೆ ಮೇಲೂ ದಾಳಿ ಮಾಡಿ, ನಗದು ಜಪ್ತಿ ಮಾಡಲಾಯಿತು. ಬಂಧಿತ ಆರೋಪಿಗಳು ನೀಡಿದ ಮಾಹಿತಿ ಆಧರಿಸಿ, 'ಸ್ವಿಗ್ಗಿ' ಡೆಲಿವರಿ ಬಾಯ್ ಬಂಧಿಸಲಾಯಿತು. ಈತನ ಬಳಿಯೂ 3 ಕೆ.ಜಿ ಗಾಂಜಾ ಪತ್ತೆಯಾಗಿದೆ' ಎಂದೂ ತಿಳಿಸಿದರು.

'10 ಗ್ರಾಂ ಹಾಗೂ 50 ಗ್ರಾಂ ತೂಕದ ಗಾಂಜಾ ಪೊಟ್ಟಣಗಳನ್ನು ಡೆಲಿವರಿ ಬಾಯ್ ಸಿದ್ಧಪಡಿಸಿದ್ದ. 'ಆ್ಯಪ್' ಮೂಲಕ ಆಹಾರ ಖರೀದಿಸುತ್ತಿದ್ದ ಗ್ರಾಹಕರು, ಗಾಂಜಾವನ್ನೂ ತರುವಂತೆ 'ಕೋಡ್' ಮೂಲಕ ತಿಳಿಸುತ್ತಿದ್ದರು. ಆರೋಪಿ, ಆಹಾರದ ಪೊಟ್ಟಣಗಳಲ್ಲಿ ಗಾಂಜಾ ಪೊಟ್ಟಣವನ್ನು ಬಚ್ಚಿಟ್ಟುಕೊಂಡು ಗ್ರಾಹಕರ ಮನೆಗೆ ತಲುಪಿಸುತ್ತಿದ್ದ.'

'ಗಾಂಜಾ ಸಾಗಣೆ ಹಾಗೂ ಮಾರಾಟಕ್ಕೆ ಇತರೆ ಆರೋಪಿಗಳು ಸಹಕಾರ ನೀಡುತ್ತಿದ್ದರು. ಇದರಿಂದಲೇ ಅಕ್ರಮವಾಗಿ ಹಣ ಗಳಿಸುತ್ತಿದ್ದರು. ಬಂಧಿತ ಡೆಲಿವರಿ ಬಾಯ್, ಡ್ರಗ್ಸ್ ಜಾಲದ ಪ್ರಮುಖ ಸೂತ್ರಧಾರಿ ಎಂಬುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಘಾವಟೆ ಮಾಹಿತಿ ನೀಡಿದರು.



ಬಂಧಿತ ಆರೋಪಿಗಳು ಹಾಗೂ ಜಪ್ತಿ ಮಾಡಲಾದ ಗಾಂಜಾ ಪೊಟ್ಟಣಗಳು

ಜೀಪಿನಲ್ಲಿ ಪರಾರಿ ಯತ್ನ: ಬೆನ್ನಟ್ಟಿ ಬಂಧನ

ಡ್ರಗ್ಸ್ ಜಾಲದಲ್ಲಿ ಭಾಗಿಯಾಗಿದ್ದ ನಾಲ್ವರನ್ನು ಎನ್‌ಸಿಬಿ ಅಧಿಕಾರಿಗಳು ಶಿವಮೊಗ್ಗ ಬಳಿ ಬೆನ್ನಟ್ಟಿ ಹಿಡಿದಿದ್ದಾರೆ. 'ಡ್ರಗ್ಸ್ ಜಾಲದಲ್ಲಿ ಭಾಗಿಯಾಗಿದ್ದ ನಾಲ್ವರು ತಲೆಮರೆಸಿಕೊಂಡು ಓಡಾಡುತ್ತಿದ್ದರು. ಬಂಧಿಸಲು ಹೋದಾಗ, ಜೀಪಿನಲ್ಲಿ ಪರಾರಿಯಾಗಲು ಯತ್ನಿಸಿದರು. ಸಿನಿಮೀಯ ರೀತಿಯಲ್ಲಿ ಅವರನ್ನು ಬೆನ್ನಟ್ಟಿ ಬಂಧಿಸಲಾಗಿದೆ' ಎಂದೂ ಎನ್‌ಸಿಬಿ ಮೂಲಗಳು ಹೇಳಿವೆ.

'ಮಹನೀಯರ ಜಯಂತಿಗೆ ಸರ್ಕಾರಿ ರಜೆ ರದ್ದಾಗಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಹಾತ್ಮ ಗಾಂಧಿ ಜಯಂತಿಯ ರಜೆ ಸೇರಿದಂತೆ ಎಲ್ಲ ಮಹನೀಯರ ಜಯಂತಿಗಳಿಗೆ ನೀಡಲಾಗುವ ಸರ್ಕಾರಿ ರಜೆಗಳನ್ನು ರದ್ದು ಮಾಡಬೇಕು' ಎಂದು ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ.ಕೃಷ್ಣ ಆಗ್ರಹಿಸಿದರು.

ಗಾಂಧಿ ಭವನದಲ್ಲಿ ಶನಿವಾರ ಏರ್ಪಡಿಸಿದ್ದ '2020ನೇ ಸಾಲಿನ ಗಾಂಧಿ ಸೇವಾ ಪ್ರಶಸ್ತಿ' ಪ್ರದಾನ ಸಮಾರಂಭದಲ್ಲಿ ಹಾಜರಿದ್ದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರಿಗೆ ಅವರು ಈ ಕುರಿತು ಮನವಿ ಮಾಡಿದರು.

'ಮಹನೀಯರ ಜಯಂತಿಗಳನ್ನು ಸರ್ಕಾರಿ ರಜೆಯ ಮೂಲಕ ಆಚರಿಸುವ ಬದಲಿಗೆ ಅಂದು ಶಾಲಾ-ಕಾಲೇಜು ಕಚೇರಿಗಳಲ್ಲಿ ಹಾಜರಿದ್ದು ಕೆಲಸ ಮಾಡಬೇಕು. ಈ ಮೂಲಕ ನಾಡಿಗೆ ಕೊಡುಗೆ ನೀಡಿದ ಹಿರಿಯರ ವಿಚಾರಗಳನ್ನು ಅಂತರ್ಗತ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಗಾಂಧಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ ಹೇಳಿಕೆ

ಖಾದಿ ಉತ್ತೇಜನಕ್ಕೆ ವಿಶೇಷ ಯೋಜನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾದಿ ಮತ್ತು ಗ್ರಾಮೋದ್ಯೋಗದ ಉತ್ಪನ್ನಗಳ ಉತ್ಪಾದನೆಯನ್ನು ಉತ್ತೇಜಿಸಲು ವಿಶೇಷ ಯೋಜನೆ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ನಗರದ ಗಾಂಧಿ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿ ಸ್ಮಾರಕ ನಿಧಿ ಮತ್ತು ಇತರ ಸಂಘ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಶನಿವಾರ ನಡೆದ ಗಾಂಧಿ ಜಯಂತಿ ಆಚರಣೆ ಕಾರ್ಯಕ್ರಮದಲ್ಲಿ ಗಾಂಧಿ ಸೇವಾ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

'ಗಾಂಧೀಜಿ ಒಬ್ಬ ಸ್ವಾತಂತ್ರ್ಯ ಹೋರಾಟಗಾರ ಮಾತ್ರ ಅಲ್ಲ. ನೈತಿಕ ಭಾರತವನ್ನು ಕಟ್ಟಿದ ಶಕ್ತಿ. ಗಾಂಧೀಜಿಯವರು ಜನರಿಂದ ಉತ್ಪಾದನಾ ಚಟುವಟಿಕೆಗಳು ನಡೆಯಬೇಕು ಎಂದು ಬಯಸಿದ್ದರು. ದುಡಿಮೆಯಲ್ಲಿ ಆರ್ಥಿಕತೆ ಇದೆ. ದುಡ್ಡಿನಲ್ಲಿ ಅಲ್ಲ. ಬಸವಣ್ಣನವರು ಕಾಯಕವೇ ಕೈಲಾಸ ಎಂದು ನುಡಿದರು. ಕಾಯಕ ಪೂಜೆಗಿಂತಲೂ ಮಿಗಿಲಾದದ್ದು' ಎಂದರು.

ಗಾಂಧೀಜಿಯವರ ಹೋರಾಟಕ್ಕೆ ತಾತ್ವಿಕ, ಸೈದ್ಧಾಂತಿಕ ಹಾಗೂ ವೈಜ್ಞಾನಿಕ ಹಿನ್ನೆಲೆಯಿದೆ. ಪ್ರತಿಯೊಬ್ಬರೂ ಬದ್ಧತೆಯೊಂದಿಗೆ ಕೆಲಸ ಮಾಡಿದಾಗ ಸಾರ್ಥಕತೆ ಮೂಡುತ್ತದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಪ್ರಗತಿಯಲ್ಲಿದೆ. ದಾವಣಗೆರೆಯ ಗಾಂಧಿ ಭವನ ಶೀಘ್ರದಲ್ಲೇ ಉದ್ಘಾಟನೆಯಾಗಲಿದ್ದು, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಉದ್ಘಾಟನೆಗೆ ಸಜ್ಜುಗೊಂಡಿವೆ. ಉಳಿದ ಜಿಲ್ಲೆಗಳ ಗಾಂಧಿ ಭವನಗಳೂ ಶೀಘ್ರವೇ ಸಿದ್ಧವಾಗಲಿವೆ ಎಂದು ಅವರು ಹೇಳಿದರು.

ಶಾಸಕ ಎಚ್.ಕೆ. ಪಾಟೀಲ, ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಶೋಕ ಬಿ. ಹಿಂಚಿಗೇರಿ ಮಾತನಾಡಿದರು. ಸಚಿವರಾದ ಗೋವಿಂದ ಎಂ. ಕಾರಜೋಳ, ಹಾಲಪ್ಪ ಆಚಾರ್, ಸಂಸದರಾದ ಶಿವಕುಮಾರ್ ಉದಾಸಿ, ಡಾ.ಎಲ್. ಹನುಮಂತಯ್ಯ ಉಪಸ್ಥಿತರಿದ್ದರು.

ಸಿದ್ಧಗಂಗಾ ಮಠದ ಪರವಾಗಿ ಡಾ. ಶಿವಪ್ಪ ಹಾಗೂ ಮೀರಾ ಕೊಪ್ಪಿಕರ್ ಪರವಾಗಿ ಗೋವಿಂದ ಕಾರಜೋಳ ಅವರು ಪ್ರಶಸ್ತಿ ಸ್ವೀಕರಿಸಿದರು.



ಗಾಂಧಿ ಭವನದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸಿದ್ಧಗಂಗಾ ಮಠದ ಪರವಾಗಿ ಡಾ. ಶಿವಪ್ಪ ಅವರಿಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿ ಪ್ರದಾನ ಮಾಡಿದರು. ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ವೂಡೇ ಪಿ. ಕೃಷ್ಣ, ಶಾಸಕ ಎಚ್.ಕೆ. ಪಾಟೀಲ ಮತ್ತು ಸಚಿವ ಗೋವಿಂದ ಕಾರಜೋಳ ಇದ್ದಾರೆ – ಪ್ರಜಾವಾಣಿ ಚಿತ್ರ



ಕುಂದುಕೊರತೆ ಜನದನಿ

ವಾಡುತ್ತಿವೆಯೇ?... ನಿಮ್ಮ ಅಹವಾಲುಗಳಿಗೆ 'ಪ್ರಜಾವಾಣಿ' ಧ್ವನಿಯಾಗಲಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ), ಜಲಮಂಡಳಿ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ (ಬಿಎಂಟಿಸಿ), ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಸಂಬಂಧಿಸಿದ ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪ್ರಕ್ರಿಯೆಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಪ್ರದೇಶದಲ್ಲಿ ಜಲಮಂಡಳಿ ಸಮರ್ಪಕವಾಗಿ ನೀರು ಪೂರೈಸುತ್ತಿಲ್ಲವೇ? ನೀವು ಓಡಾಡುವ ರಸ್ತೆಯಲ್ಲಿ ಗುಂಡಿ ಬಿದ್ದಿದೆಯೇ? ಕಸ ರಾಶಿ ಬಿದ್ದಿದೆಯೇ ಅಥವಾ ನಿತ್ಯ ವಿಹಾರಕ್ಕೆ ಹೋಗುವ ಉದ್ಯಾನ ಪಾಳುಬಿದ್ದಿದೆಯೇ? ಬಸ್‌ಗಳು ಬರುತ್ತಿಲ್ಲವೇ? ಸಮಸ್ಯೆಗಳು ತಾಂಡವ-

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ: peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.

ರಾಷ್ಟ್ರಪಿತನ ಸ್ಮರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನಗಳನ್ನು ನಗರದ ವಿವಿಧೆಡೆ ಶನಿವಾರ ಸಂಭ್ರಮದಿಂದ ಆಚರಿಸಲಾಯಿತು.

ಮಹಾನ್ ಚೇತನಗಳ ಜನ್ಮದಿನದ ಪ್ರಯುಕ್ತ ವಿವಿಧ ಸಂಘ ಸಂಸ್ಥೆಗಳು ಸಾಂಸ್ಕೃತಿಕ ಹಾಗೂ ಸಸಿ ನೆಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದವು. ಗಾಂಧಿ ಹಾಗೂ ಶಾಸ್ತ್ರಿಯವರು ದೇಶಕ್ಕೆ ನೀಡಿರುವ ಕೊಡುಗೆಗಳನ್ನೂ ಸ್ಮರಿಸಲಾಯಿತು.

ಗಾಂಧಿ ಸಂಸ್ಮರಣೆಯ ಅಂಗವಾಗಿ ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಗಾಂಧಿ ತತ್ವಗಳನ್ನು ಬಿಂಬಿಸುವ ಕಲಾಕೃತಿಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಲಾಕೃತಿಗಳನ್ನು ವೀಕ್ಷಿಸಿದರು.

ಮಲ್ಲೇಶ್ವರ ಆಟದ ಮೈದಾನದ ಸಮೀಪ ಏರ್ಪಡಿಸಿದ್ದ ಒಂದು ದಿನದ ಖಾದಿ ಮೇಳಕ್ಕೆ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಚಾಲನೆ ನೀಡಿದರು. ಬೂಸ ಫ್ಯಾಕ್ಟರಿ ಸಮೀಪ ನಡೆದ ಸ್ವಚ್ಛತಾ ಕಾರ್ಯಕ್ರಮದಲ್ಲೂ ಪಾಲ್ಗೊಂಡರು. ಸುಬೇದಾರ್ ಪಾಳ್ಯ ಶಾಲೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಗೋಪೂಜೆ ಮಾಡಿದರು.

ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೋಣನಕುಂಟೆ ವಾರ್ಡ್‌ನಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಮೂಲ್ ಮಾಜಿ ಅಧ್ಯಕ್ಷ ಆರ್.ಕೆ.ರಮೇಶ್ ಹಾಗೂ ಗೊಟ್ಟಿಗೆರೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್ ಲಕ್ಷ್ಮಣ ಅವರು ಕೋವಿಡ್ ಸೇನಾನಿಗಳನ್ನು ಸನ್ಮಾನಿಸಿದರು.

ಬಿಬಿಎಂಪಿ ವತಿಯಿಂದ ಎಂ.ಜಿ. ರಸ್ತೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ಕಾರ್ಯಕ್ರಮದಲ್ಲಿ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.

ಖಾದಿ ಬಟ್ಟೆ: ಕಲಬೆರಕೆ ತಡೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಖಾದಿ ಬಟ್ಟೆಯಲ್ಲಿನ ಕಲಬೆರಕೆಗೆ ತಡೆ ಹಾಕಿ, ಶುದ್ಧ ಕೈಮಗ್ಗ ಉತ್ಪನ್ನಗಳನ್ನು ಸರ್ಕಾರ ಪ್ರೋತ್ಸಾಹಿಸಬೇಕು' ಎಂದು ರಂಗಕರ್ಮಿ ಪ್ರಸನ್ನ ಆಗ್ರಹಿಸಿದರು.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಶನಿವಾರ ಇಲ್ಲಿ ಮನವಿ ಸಲ್ಲಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಖಾದಿ ಮತ್ತು ಕೈಮಗ್ಗ ಎನ್ನುವುದು ಪವಿತ್ರವಾದ ಬ್ರ್ಯಾಂಡ್. ಇದರ ಕಲಬೆರಕೆಯಿಂದ ನೂಲುಗಾರ್ತಿಯರು ಹಾಗೂ ನೇಕಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಧ್ಯಯನವೊಂದರ ಪ್ರಕಾರ ಶೇ 70ರಷ್ಟು ಖಾದಿ ಬಟ್ಟೆಯು ಕಲಬೆರಕೆಯಿಂದ ಕೂಡಿದೆ. ಇದಕ್ಕೆ ಕಡಿವಾಣ ಹಾಕಿದರೆ ಮಾತ್ರ ಗ್ರಾಮೀಣ ಜನತೆಗೆ ನ್ಯಾಯ ಸಿಗಲಿದೆ. ಈ ಬಗ್ಗೆ ಮುಖ್ಯಮಂತ್ರಿ ಅವರಿಗೂ ಮನವಿ ಮಾಡಲಾಗಿದೆ. ಶುದ್ಧ ಖಾದಿ ಅಭಿಯಾನ ಪ್ರಾರಂಭಿಸುವ ಭರವಸೆಯನ್ನು ಅವರು ನೀಡಿದ್ದಾರೆ' ಎಂದು ಅವರು ತಿಳಿಸಿದರು.

ಖಾದಿ ಭಂಡಾರದಲ್ಲಿ ಸೀರೆ ಖರೀದಿಸಿದ ಸಿ.ಎಂ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವರಾದ ಗೋವಿಂದ ಕಾರಜೋಳ, ಎಂಟಿಬಿ ನಾಗರಾಜು, ಸುನೀಲ್ ಕುಮಾರ್, ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಕುಮಾರಕೃಪಾ ರಸ್ತೆಯಲ್ಲಿರುವ ಖಾದಿ ಬಟ್ಟೆಗಳ ಮಾರಾಟ ಮಳಿಗೆಗೆ ಶನಿವಾರ ಭೇಟಿ ನೀಡಿ ಖಾದಿ ಹಾಗೂ ಗ್ರಾಮೋದ್ಯಮ ಉತ್ಪನ್ನಗಳನ್ನು ಖರೀದಿಸಿದರು.

ಬೊಮ್ಮಾಯಿ ಅವರು, ಪತ್ನಿಗೆ ರೇಷ್ಮೆ ಸೀರೆ ಮತ್ತು ಜುಬ್ಬಾ ಬಟ್ಟೆ ಸೇರಿದಂತೆ ₹ 16,031 ಮೊತ್ತದ ಉತ್ಪನ್ನಗಳ ಖರೀದಿ ಮಾಡಿದರೆ, ಎಂಟಿಬಿ ನಾಗರಾಜ್ ₹ 3,000 ಹಾಗೂ ಬಿ.ವೈ.ವಿಜಯೇಂದ್ರ ₹ 4,300 ಮೊತ್ತದ ಬಟ್ಟೆ ಖರೀದಿ ಮಾಡಿದರು.

ಈ ಮಳಿಗೆಯನ್ನು ಬಸವರಾಜ ಬೊಮ್ಮಾಯಿ ಅವರ ತಂದೆ ಎಸ್. ಆರ್. ಬೊಮ್ಮಾಯಿ (ಅಂದಿನ ಹಣಕಾಸು ಸಚಿವ) ಅವರು 1984ರ ನವೆಂಬರ್ 15ರಂದು ಉದ್ಘಾಟಿಸಿದ್ದರು.

ನೋಂದಣಿಯಾದ ಖಾದಿ ಭಂಡಾರಗಳಲ್ಲಿ ಅರಳೆ ಖಾದಿ, ಉಣ್ಣೆ ಖಾದಿ, ಪಾಲಿ ವಸ್ತ್ರಗಳ ಮೇಲೆ ಗರಿಷ್ಠ ಶೇ 35 ರಷ್ಟು ಮತ್ತು ರೇಷ್ಮೆ ಖಾದಿ ಮೇಲೆ ಶೇ 20 ರಷ್ಟು ರಿಯಾಯಿತಿ ನೀಡಲಾಗುತ್ತಿದೆ. ರಾಜ್ಯದಲ್ಲಿ 166 ಖಾದಿ ಸಂಘ-ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿದ್ದು, 20 ಸಾವಿರಕ್ಕೂ ಅಧಿಕ ನೂಲುವವರು, ನೇಕಾರರು, ಇದ್ದಾರೆ.

ಕೋವಿಡ್ ಅಂಕಿ-ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.53 ಕೋಟಿ ▲	3.38 ಕೋಟಿ ▲
ಸಕ್ರಿಯ ಪ್ರಕರಣ	1.84 ಕೋಟಿ	2.64 ಲಕ್ಷ ▼
ಗುಣಮುಖ	21.20 ಕೋಟಿ ▲	3.30 ಕೋಟಿ
ಸಾವು	48.09 ಲಕ್ಷ ▲	4.48 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	4.75 ಲಕ್ಷ ▼	23,139 ▼
ಗುಣಮುಖ	4.48 ಲಕ್ಷ ▼	25,021 ▲
ಸಾವು	7,400 ▼	241 ▲

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
1.20 ಲಕ್ಷ ▲ ಅಮೆರಿಕ; 35,273 ▼ ಬ್ರಿಟನ್; 28,873 ಟರ್ಕಿ

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
99.07 ▲ ಅಮೆರಿಕ; 13.48 ▲ ಬ್ರಿಟನ್; 6.34 ರಷ್ಯಾ
(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)


ಎಲ್ಲಿ ಹೆಚ್ಚು ಸಾವು (ಒಟ್ಟು)
1.39 ಲಕ್ಷ ಮಹಾರಾಷ್ಟ್ರ; 35,627 ▲ ತಮಿಳುನಾಡು; 25,182 ▲ ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
65.56 ಮಹಾರಾಷ್ಟ್ರ ▲; 46.94 ಕೇರಳ; 26.66 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

'ಸಿದ್ದರಾಮಯ್ಯ ಯಾರು?'

ಪ್ರಜಾವಾಣಿ ವಾರ್ತೆ



ಕುಮಾರಸ್ವಾಮಿ

ಬೆಂಗಳೂರು: 'ಚುನಾವಣೆಗಳಲ್ಲಿ ಜೆಡಿಎಸ್ ಅಭ್ಯರ್ಥಿಗಳನ್ನು ನಿರ್ಧರಿಸುವುದು ನಮ್ಮ ಪಕ್ಷದ ಆಂತರಿಕ ವಿಚಾರ. ಇಂತಹವರಿಗೇ ಟಿಕೆಟ್ ಕೊಡಿ ಎಂದು ಹೇಳಲು ಸಿದ್ದರಾಮಯ್ಯ ಯಾರು' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದರು.

'ಸಿಂದಗಿ ಮತ್ತು ಹಾನಗಲ್ ವಿಧಾನಸಭಾ ಕ್ಷೇತ್ರಗಳ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲ ಮಾಡಿಕೊಡಲು ಜೆಡಿಎಸ್ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸುತ್ತಿದೆ' ಎಂಬ ಸಿದ್ದರಾಮಯ್ಯ ಆರೋಪಕ್ಕೆ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಅವರು, 'ಎರಡೂ ಕ್ಷೇತ್ರಗಳಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸುವುದು ನಮ್ಮ ಪಕ್ಷದ ನಿರ್ಧಾರ. ಅದರ ಉಸಾಬರಿ ಸಿದ್ದರಾಮಯ್ಯ ಅವರಿಗೆ ಏಕೆ' ಎಂದು ಕೇಳಿದರು.

ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಮುಸ್ಲಿಂ ಸಮಾಜದವರಿಗೆ 20, ಮಹಿಳೆಯರಿಗೆ 20ರಿಂದ 25 ಟಿಕೆಟ್ ನೀಡುತ್ತೇವೆ. ಸಿದ್ದರಾಮಯ್ಯ ಅವರನ್ನು ಕೇಳಿ ನಾನು ಅಭ್ಯರ್ಥಿ ನಿರ್ಧರಿಸಬೇಕಾ? ಆ ರೀತಿ ಹೇಳಲು ಸಿದ್ದರಾಮಯ್ಯ ಯಾರು? ಕಾಂಗ್ರೆಸ್, ಬಿಜೆಪಿಯ ದೊಣ್ಣೆ ನಾಯಕರನ್ನು ಕೇಳಿ ಜೆಡಿಎಸ್ ಅಭ್ಯರ್ಥಿಗಳನ್ನು ಕಣಕ್ಕಿಳಿಸಬೇಕೆ' ಎಂದು ಕುಮಾರಸ್ವಾಮಿ ಪ್ರಶ್ನಿಸಿದರು.

ಮಹಿಳಾ ಕಾಂಗ್ರೆಸ್‌ನಿಂದ 'ಗಾಂಧಿ ನಮನ'

ಬೆಂಗಳೂರು: ಕೆಪಿಸಿಸಿ ಮಹಿಳಾ ಕಾಂಗ್ರೆಸ್ ವತಿಯಿಂದ ಮಹಾತ್ಮ ಗಾಂಧಿ ಸ್ಮರಣಾರ್ಥ ಶುಕ್ರವಾರ ರಾತ್ರಿ 11 ಗಂಟೆಯಿಂದ ಮಧ್ಯರಾತ್ರಿ 1 ಗಂಟೆಯವರೆಗೆ ಮೌರ್ಯ ವೃತ್ತದ ಬಳಿ ಇರುವ ಗಾಂಧಿ ಪ್ರತಿಮೆ ಎದುರು 'ಗಾಂಧಿ ನಮನ' ನಡೆಯಿತು.

ಮಹಿಳಾ ಘಟಕದ ಅಧ್ಯಕ್ಷೆ ಪುಷ್ಪಾ ಅಮರನಾಥ್ ನೇತೃತ್ವದಲ್ಲಿ ಪಕ್ಷದ ಕಾರ್ಯಕರ್ತೆಯರು ಗಾಂಧಿ ಪ್ರತಿಮೆಗೆ ಪುಷ್ಪ ಮಾಲೆ ಅರ್ಪಿಸಿ, ಮೋಂಬತ್ತಿ ಹಚ್ಚಿ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪುಷ್ಪಾ ಅಮರನಾಥ್, 'ದೇಶದಲ್ಲಿ ಮಹಿಳೆಯರ ಮೇಲೆ ದೌರ್ಜನ್ಯಗಳು ಅತಿಯಾಗಿದ್ದು, ಇಲ್ಲದಂತಾಗಿದೆ' ಎಂದರು.

ಶಾಸಕಿ ಸೌಮ್ಯಾ ರೆಡ್ಡಿ, 'ಮಹಿಳಾ ಸುರಕ್ಷತೆ ಬಹಳ ಮುಖ್ಯ. ಮಹಿಳೆಯರ ರಕ್ಷಣೆಗೆ ಆಗ್ರಹಿಸಿ ಬಿಜೆಪಿ ವಿರುದ್ಧ ಹೋರಾಟ ನಡೆಸಬೇಕಿದೆ' ಎಂದರು.

ಕೋವಿಡ್: ಕನಿಷ್ಠ ಮರಣ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ ನಾಲ್ಕು ಕೋವಿಡ್ ಮರಣ ಪ್ರಕರಣಗಳು ದೃಢಪಟ್ಟಿವೆ. ಇವು ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ (ಮಾರ್ಚ್ ಮೊದಲ ವಾರದ ನಂತರ) ವರದಿಯಾದ ಕನಿಷ್ಠ ಪ್ರಕರಣಗಳಾಗಿವೆ.

ಕೋವಿಡ್ ಪರೀಕ್ಷೆಗಳ ಸಂಖ್ಯೆಯನ್ನು ಮತ್ತೆ ಹೆಚ್ಚಳ ಮಾಡಲಾಗಿದ್ದು, ಒಂದು ದಿನದ ಅವಧಿಯಲ್ಲಿ 1.69 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. 636 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣವು ಶೇ 0.37 ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 13 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಬೀದರ್, ಗದಗ, ಕಲಬುರ್ಗಿ ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 100, ಮೈಸೂರಿನಲ್ಲಿ 44 ಹಾಗೂ ಕೊಡಗಿನಲ್ಲಿ 28 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 245 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.77 ಲಕ್ಷ ದಾಟಿದೆ.

ಸೋಂಕಿತರಲ್ಲಿ 745 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.27 ಲಕ್ಷದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 12,356ಕ್ಕೆ ಇಳಿಕೆಯಾಗಿದೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ-ಅಂಶ

12,46,896 ಒಟ್ಟು ಪ್ರಕರಣಗಳು ▲
(12,46,651 ನಿನ್ನೆಯ ವಿವರ)

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
7,665 ▲	12,23,069 ▲	16,161 ▲

ದಿನದ ಏರಿಕೆ

ಹೊಸ ಪ್ರಕರಣ	245 ▲
ಗುಣಮುಖ	206 ▼
ಸಾವು	01 ▼

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಬಾಲಕ ನೀರುಪಾಲು

ಹಲಗೂರು (ಮಂಡ್ಯ): ಸಮೀಪದ ಮುತ್ತತ್ತಿ ಕಾವೇರಿ ನದಿಯಲ್ಲಿ ಶನಿವಾರ ಸ್ನಾನ ಮಾಡುತ್ತಿದ್ದಾಗ ನೀರಿನ ಸೆಳೆತಕ್ಕೆ ಸಿಲುಕಿ ಬೆಂಗಳೂರಿನ ಚಳ್ಳಘಟ್ಟ ಮೂಲದ ಸಿ.ಆರ್ಯ (16) ನೀರು ಪಾಲಾಗಿದ್ದಾನೆ. ಕುಟುಂಬದ ಸದಸ್ಯರ ಜತೆ ಮುತ್ತತ್ತಿ ದೇವಾಲಯಕ್ಕೆ ಪೂಜೆಗೆ ಬಂದಿದ್ದಾಗ ದುರ್ಘಟನೆ ನಡೆದಿದೆ.

ಹಿರಿಯರಿಗೆ ಕೋವಿಡ್ ಅರಿವು ಮೂಡಿಸಿದ ಪುಟಾಣಿಗಳು!

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಕೈಯಲ್ಲಿ ಸಣ್ಣ ಕೋಲು. ತಲೆಯನ್ನು ಸುತ್ತುವರಿದಿದ್ದ ಬಿಳಿಯ ವಸ್ತ್ರ. ಜೊತೆಗೆ ಪುಟಾಣಿ ಕನ್ನಡಕ ಮತ್ತು ಕಚ್ಚೆ ಪಂಚೆ ಧರಿಸಿದ್ದ ಮಕ್ಕಳು ಮನೆ ಮನೆಗೆ ತೆರಳಿ ಕೋವಿಡ್ ಲಸಿಕೆ ಪಡೆಯುವಂತೆ ಹಿರಿಯರಿಗೆ ಸಲಹೆ ನೀಡಿದರು. ಶುಭಾಶಯ ಪತ್ರ ನೀಡಿ, ಸಿಹಿ ಹಂಚಿ ಸಂಭ್ರಮಿಸಿದರು.

ಇಲ್ಲಿನ ಕರ್ನಾಟಕ ಸಂಸ್ಕೃತಿ ವಿದ್ಯಾಪೀಠದ ಮಕ್ಕಳು ಗಾಂಧಿ ಜಯಂತಿ ಆಚರಿಸಿದ ಬಗೆ ಇದು.

ಗಾಂಧೀಜಿಯ ವೇಷಭೂಷಣ ಧರಿಸಿದ್ದ ಮಕ್ಕಳು ಕೋವಿಡ್ ಕುರಿತು ಅರಿವು ಮೂಡಿಸುತ್ತಿರುವುದನ್ನು ಕಂಡು ನಾಗರಿಕರೂ ಹರ್ಷ ವ್ಯಕ್ತಪಡಿಸಿದರು. ಮಕ್ಕಳು ಸುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳುವಂತೆ ಹಿರಿಯರಿಗೆ ಕಿವಿಮಾತನ್ನೂ ಹೇಳಿದರು.

ವಿದ್ಯಾಪೀಠದ ಸಂಸ್ಥಾಪಕ ಅಧ್ಯಕ್ಷ ಹಾಗೂ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಶಿಕ್ಷಕ ಡಿ.ಎಸ್. ಬಸವಾನಂದ ಪ್ರಕಾಶ್ ಗಾಂಧೀಜಿ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.



ಮನೆ ಮನೆಗೆ ತೆರಳಿ ಕೋವಿಡ್ ಜಾಗೃತಿ ಮೂಡಿಸಿದ ಗಾಂಧಿ ವೇಷಧಾರಿ ಬಾಲಕ

ಜಲಪಾತದಲ್ಲಿ ಬಿದ್ದು ಯುವಕ ಸಾವು

ಪ್ರಜಾವಾಣಿ ವಾರ್ತೆ

ಹೆತ್ತೂರು: ಹೋಬಳಿಯ ಮೂಕನಮನೆ ಜಲಪಾತದಲ್ಲಿ ಶನಿವಾರ ಈಜಲು ಹೋದ ಬೆಂಗಳೂರು ಜೆ.ಸಿ. ನಗರ ನಿವಾಸಿ ಕೆ.ಎನ್. ನಿಂಗರಾಜ್ (17) ತಲೆಗೆ ತೀವ್ರ ಪೆಟ್ಟು ಬಿದ್ದು ಮೃತಪಟ್ಟರು. ಅವರು ವೆಸ್ಟ್ ಲಯನ್ಸ್ ಪ್ಯಾರಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಯಾಗಿದ್ದರು.

27 ವಿದ್ಯಾರ್ಥಿಗಳು ಕಾಲೇಜಿನ ಕೆಲ ಸಿಬ್ಬಂದಿ ಜೊತೆಗೆ ಪ್ರವಾಸಕ್ಕೆ ಬಂದಿದ್ದಾಗ ದುರ್ಘಟನೆ ನಡೆದಿದೆ. ಮಧ್ಯಾಹ್ನ ಈಜಲು ಹೋದಾಗ ನೀರಿನ ಸುಳಿಗೆ ಸಿಕ್ಕಿ ಕೊಚ್ಚಿ ಹೋಗಿ ಬಂಡೆಯೊಂದಕ್ಕೆ ತಲೆ ಅಪ್ಪಳಿಸಿದ ಪರಿಣಾಮ ತೀವ್ರ ಪೆಟ್ಟು ಬಿದ್ದಿತ್ತು. ಮೃತದೇಹವನ್ನು ಹೊರ ತೆಗೆದಾಗ ಸ್ನೇಹಿತರ ಆಕ್ರಂದನ ಮುಗಿಲು ಮುಟ್ಟಿತ್ತು. ಯಸಳೂರು ಪಿಎಸ್ಐ ಮಂಜುನಾಥ್ ಭೇಟಿ ನೀಡಿದ್ದರು.

ಯುವ ಕಾಂಗ್ರೆಸ್‌ನಿಂದ ತಿರಂಗಾ ಯಾತ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ರಾಜ್ಯ ಯುವ ಕಾಂಗ್ರೆಸ್ ವತಿಯಿಂದ ಏರ್ಪಡಿಸಿದ್ದ ಬೃಹತ್ ತಿರಂಗಾ ಯಾತ್ರೆಯಲ್ಲಿ ಶನಿವಾರ ಪಕ್ಷದ ಕಾರ್ಯಕರ್ತರು 500 ಅಡಿ ಉದ್ದದ ರಾಷ್ಟ್ರ ಧ್ವಜ ಹಿಡಿದು ಕಮ್ಮನಹಳ್ಳಿಯ ಜ್ಯೋತಿ ಶಾಲೆಯಿಂದ ಸುಮಾರು 1 ಕಿ.ಮೀ. ದೂರ ಹೆಜ್ಜೆ ಹಾಕಿದರು.

ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್, ರಾಜ್ಯ ಯುವ ಕಾಂಗ್ರೆಸ್ ಅಧ್ಯಕ್ಷ ಎಂ.ಎಸ್. ರಕ್ಷಾ ರಾಮಯ್ಯ ನೇತೃತ್ವದಲ್ಲಿ ಈ ಯಾತ್ರೆ ನಡೆಯಿತು. ಮಹಾತ್ಮ ಗಾಂಧೀಜಿ ಮತ್ತಿತರ ನಾಯಕರ ಪೋಷಾಕು ತೊಟ್ಟ ಶಾಲಾ ವಿದ್ಯಾರ್ಥಿಗಳೂ ತಿರಂಗಾ ಯಾತ್ರೆಯಲ್ಲಿ ಭಾಗವಹಿಸಿದರು.

ಬಿ.ವಿ.ಶ್ರೀನಿವಾಸ್, 'ಒಗ್ಗಟ್ಟಿನಿಂದ ಇರುವ ದೇಶವನ್ನು ವಿಭಜಿಸುವ ಪ್ರಯತ್ನಗಳು ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿವೆ. ಇಂಥ ವಿಭಜಕ ಶಕ್ತಿಗಳಿಗೆ ಕಾಂಗ್ರೆಸ್ ಅವಕಾಶ ನೀಡುವುದಿಲ್ಲ. ಯುವ ಕಾಂಗ್ರೆಸ್ ಶಾಂತಿಯ ಸಂದೇಶ ಸಾರಲು ಈ ಯಾತ್ರೆ ಹಮ್ಮಿಕೊಂಡಿದೆ' ಎಂದರು.



ಮಹಾತ್ಮ ಗಾಂಧಿ ಜಯಂತಿ ಅಂಗವಾಗಿ ರಾಜ್ಯ ಯುವ ಕಾಂಗ್ರೆಸ್ ವತಿಯಿಂದ ಕಮ್ಮನಹಳ್ಳಿಯ ಜ್ಯೋತಿ ಶಾಲೆಯ ಬಳಿಯಿಂದ ಶನಿವಾರ ಆರಂಭವಾದ ತಿರಂಗಾ ಯಾತ್ರೆಯಲ್ಲಿ ಪಕ್ಷದ ಕಾರ್ಯಕರ್ತರು ಭಾಗವಹಿಸಿದರು

ನಗರದಲ್ಲಿ ಇಂದು

301ನೇ ಹಸಿರು ಭಾನುವಾರ: ತೇಜಸ್ವಿನಿ ಅನಂತಕುಮಾರ್, ಆಯೋಜನೆ: ಅದಮ್ಯ ಚೇತನ, ಸ್ಥಳ: ಭವಾನಿ ಮಾನೆ ಕೆರೆ, ಅಮೃತನಗರ, ಕನ್ನಾಯಕನ ಅಗ್ರಹಾರ, ಬೆಳಿಗ್ಗೆ 9

'ಕೋವಿಡ್-19ರ ಸಮಯದಲ್ಲಿ ವೈಜ್ಞಾನಿಕ ಮನೋಭಾವ' ಉಪನ್ಯಾಸ: ಪ್ರೊ. ನರೇಂದ್ರ ನಾಯಕ್, ಅಧ್ಯಕ್ಷತೆ: ಪ್ರೊ.ಎ.ಎಸ್. ನಟರಾಜ್, ಆಯೋಜನೆ: ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ನೂತನ ರಾಷ್ಟ್ರೀಯ ಶಿಕ್ಷಣ ನೀತಿಯಿಂದ ಅಂಗನವಾಡಿ ಕೇಂದ್ರಗಳ ಮೇಲಾಗುವ ಪರಿಣಾಮಗಳು: ಎ.ಆರ್. ಸಿಂಧು, ವಡ್ಡಗೆರೆ ನಾಗರಾಜಯ್ಯ, ಕೆ.ಎಸ್. ವಿಮಲಾ, ಆಯೋಜನೆ: ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣ, ಮಹಾರಾಣಿ ರಸ್ತೆ, ಬೆಳಿಗ್ಗೆ 11.30

ಬೆಂಗಳೂರು ಅಂತರರಾಷ್ಟ್ರೀಯ ಕಲಾ ಮಹೋತ್ಸವ: 100 ಕಲಾವಿದರಿಂದ 'ನಾಡ ವೈಭವ' ಸಂಗೀತ ಕಚೇರಿ, ಕರ್ನಾಟಕ ಕ್ಲಾಸಿಕಲ್ ಮ್ಯೂಸಿಕ್ ಕಾನ್ಫೆಡರೇಷನ್ ಟ್ರಸ್ಟ್ (ಕೆಸಿಎಂಸಿ) ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಮುಖ್ಯ ಅತಿಥಿ: ಎಸ್. ರಂಗಪ್ಪ, ಭರತನಾಟ್ಯ: ಮಿಥುನ್ ಶ್ಯಾಮ್, ಕೂಚಿಪುಡಿ: ಶ್ರೀದೇವಿ ಅಂಗಾರ, ಮೋಹಿನಿಯಟ್ಟಂ: ರೇಖಾ ರಾಜು, ಕಥಕಳಿ: ಪ್ರಬಲ್ ಗುಪ್ತ, ಒಡಿಸ್ಸಿ: ಸರಿತಾ ಮಿಶ್ರಾ, ಕಥಕ್: ಹರಿ, ಚೇತನಾ, ನಿರ್ದೇಶನ: ಸುಮಾ ಸುಧೀಂದ್ರ, ವೀಣಾ ಮೂರ್ತಿ ವಿಜಯ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 5

ಮನೋರಂಗದಲ್ಲಿ ಕನ್ನಡ ನಾಟಕಗಳು: ಮೂವತ್ತೊಂದು ದಿನ ಮೂವತ್ತೊಂದು ಉಪನ್ಯಾಸ, ವಿಷಯ: ಶಾಕುಂತಲ:ಬಸಪ್ಪಶಾಸ್ತ್ರಿ, ಉಪನ್ಯಾಸಕ: ಮ. ರಾಮಕೃಷ್ಣ ಮಂಡ್ಯ, ಆಯೋಜನೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ಸಂಜೆ 5.30 (ಆನ್‌ಲೈನ್ ಕಾರ್ಯಕ್ರಮ)

ಅಭಿಷೇಕ್ ಅಯ್ಯಂಗಾರ್ ಅವರ 'ಬೈ2 ಕಾಫಿ' ಮತ್ತು 'ಮಾಗಡಿ ಡೇಸ್' ಕೃತಿ ಲೋಕಾರ್ಪಣೆ: ಪ್ರಕಾಶ್ ಬೆಳವಾಡಿ, ಉಪಸ್ಥಿತಿ: ಅಭಿರುಚಿ ಚಂದ್ರು, ರೋಹಿತ್ ಚಕ್ರತೀರ್ಥ, ಬಿ.ಎಸ್. ವಿದ್ಯಾರಣ್ಯ, ಆಯೋಜನೆ: ಚಾರುಮತಿ ಪ್ರಕಾಶನ, ಸ್ಥಳ: ಪ್ರಭಾತ್ ಕಲಾಪೂರ್ಣಿಮಾ, ಎನ್. ಆರ್. ಕಾಲೋನಿ, ಸಂಜೆ 6



ಪ್ರಕಾಶ್ ಬೆಳವಾಡಿ



ಸುಮಾ ಸುಧೀಂದ್ರ

ಅಸತ್ಯ, ಹಿಂಸೆಯ ಹಾದಿಯಲ್ಲಿ ಬಿಜೆಪಿಗೆ ನಂಬಿಕೆ: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸತ್ಯ ಮತ್ತು ಅಹಿಂಸೆಯ ಮಾರ್ಗವನ್ನು ಮಹಾತ್ಮ ಗಾಂಧಿ ತೋರಿದ್ದರೆ, ಅಸತ್ಯ ಮತ್ತು ಹಿಂಸೆಯ ಹಾದಿಯಲ್ಲಿ ಬಿಜೆಪಿ ನಂಬಿಕೆ ಇಟ್ಟಿದೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ನಡೆದ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜನ್ಮದಿನದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಪ್ರಧಾನಿ ನರೇಂದ್ರ ಮೋದಿ ಅವರ ಮಾತು ಮತ್ತು ನಡೆ ಎರಡೂ ತದ್ವಿರುದ್ಧ. ಅವರು ಏನು ಹೇಳುತ್ತಾರೋ ಅದಕ್ಕೆ ವಿರುದ್ಧವಾದ ಕೆಲಸ ಮಾಡುತ್ತಾರೆ. ಮೋದಿ ಅವರು ಯಾವುದನ್ನು ಉಳಿಸುತ್ತೇನೆ ಎನ್ನುತ್ತಾರೋ ಅದನ್ನು ನಾಶ ಮಾಡಲು ಹೊರಟಿದ್ದಾರೆ ಎಂದರ್ಥ' ಎಂದರು.

'10 ತಿಂಗಳುಗಳಿಂದ ರೈತರು ದೇಶದಾದ್ಯಂತ ಹೋರಾಟ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರ ಮಾತುಕತೆಯ ಬದಲು, ಕ್ರೌರ್ಯ ಮತ್ತು ಬಲಪ್ರಯೋಗದ ಮೂಲಕ ಹೋರಾಟ ಅಂತ್ಯಗೊಳಿಸಲು ಹೊರಟಿದೆ' ಎಂದು ವಾಗ್ದಾಳಿ ನಡೆಸಿದರು.

'ನಗ್ನಸತ್ಯ' ಹಾಗೂ 'ಲ್ಯಾಂಡ್, ಲಸ್ಟ್ ಆ್ಯಂಡ್ ಆಡಿಯೊಟೇಪ್ಸ್' ಪುಸ್ತಕ ಬಿಡುಗಡೆ

'ಏಕಮುಖಿ ಪ್ರೀತಿಗೆ ಒಳಗಾಗಿ ಡಿ.ಕೆ.ರವಿ ಆತ್ಮಹತ್ಯೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಐಎಎಸ್ ಅಧಿಕಾರಿ ಡಿ.ಕೆ. ರವಿ ಅವರು ದಕ್ಷ ಹಾಗೂ ಪ್ರಾಮಾಣಿಕ ಅಧಿಕಾರಿಯಾಗಿದ್ದರು ಎನ್ನುವುದರಲ್ಲಿ ಎರಡು ಮಾತಿಲ್ಲ. ಆದರೆ, ಅವರು ಪ್ರಚಾರಪ್ರಿಯರೂ ಆಗಿದ್ದರು. ಅನೇಕ ಮಹತ್ವಾಕಾಂಕ್ಷೆಗಳ ನಡುವೆ ತಮ್ಮ ಜೊತೆಗಾರ್ತಿ ಐಎಎಸ್ ಮಹಿಳಾ ಅಧಿಕಾರಿಯ ನಿಕಟ ಒಡನಾಟದಲ್ಲಿ ಏಕಮುಖ ಪ್ರೀತಿಗೆ ಒಳಗಾಗಿ ಆತ್ಮಹತ್ಯೆ ಮಾಡಿಕೊಂಡರು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಹೊಸ ಮಾಹಿತಿ ಬಿಚ್ಚಿಟ್ಟರು.

ಪತ್ರಕರ್ತ ರಾಮಕೃಷ್ಣ ಉಪಾಧ್ಯ ಬರೆದಿರುವ 'ಡಿ.ಕೆ. ರವಿ ದುರಂತ ಕತೆ- ನಗ್ನಸತ್ಯ' ಹಾಗೂ 'ಲ್ಯಾಂಡ್, ಲಸ್ಟ್ ಆ್ಯಂಡ್ ಆಡಿಯೊಟೇಪ್ಸ್' ಪುಸ್ತಕಗಳನ್ನು 'ಅನು ಪ್ರಕಾಶನ' ವತಿಯಿಂದ ನಗರದಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಬಿಡುಗಡೆ ಮಾಡಿ ಅವರು ಮಾತನಾಡಿದರು.


'ಬೆಂಗಳೂರಿನಲ್ಲಿ ವಾಣಿಜ್ಯ ತೆರಿಗೆ ಇಲಾಖೆಯ ಜಾರಿ ನಿರ್ದೇಶನಾಲಯದ ಹೆಚ್ಚುವರಿ ಆಯುಕ್ತರಾಗಿ ಕೆಲಸ ನಿರ್ವಹಿಸುತ್ತಿದ್ದ ರವಿ ಅವರಿಗೆ ತಮ್ಮ ಕೆಲಸ ಅಷ್ಟಾಗಿ ಖುಷಿ ಕೊಟ್ಟಿರಲಿಲ್ಲ. ಕೋಲಾರದಲ್ಲಿ ಜಿಲ್ಲಾಧಿಕಾರಿಯಾಗಿಯೇ ಮುಂದುವರಿಯುವ ಇಚ್ಛೆ ಇತ್ತು. ಆದರೆ, ಅವರ ಮಾವ ಹನುಮಂತರಾಯಪ್ಪ ಮತ್ತು ರಮೇಶ್ ಕುಮಾರ್ ಅವರ ಕೋರಿಕೆಯ ಮೇರೆಗೆ ಅವರನ್ನು ಬೆಂಗಳೂರಿಗೆ ವರ್ಗಾವಣೆ ಮಾಡಿದ್ದೆ. ಆದರೆ, ಅವರು ಕಾನೂನು ರೀತಿಯಲ್ಲಿ ಅಪಾರ ಹಣ ಸಂಪಾದಿಸಿ, ಐಎಎಸ್ ಹುದ್ದೆಗೆ ರಾಜೀನಾಮೆ ಕೊಟ್ಟು, ಉದ್ಯಮಿಯಾಗಿ ಹೆಸರು ಮಾಡುವಾಸೆ ಹೊಂದಿದ್ದರು. ಅದು ಸಾಧ್ಯವಾಗಲಿಲ್ಲ. ಪ್ರಚಾರ ಮತ್ತು ಜನಪ್ರಿಯತೆ ಮಧ್ಯದಲ್ಲೇ ಅವರು ಭೂ-ಮರಳು ಮಾಫಿಯಾ ಮತ್ತು ಏಕಮುಖ ಪ್ರೀತಿಯಲ್ಲಿ ಮುಳುಗಿ ಪ್ರಾಣ ಕಳೆದುಕೊಂಡಿದ್ದು ಮೂರ್ಖತನದ ಪರಮಾವಧಿ' ಎಂದರು.

'ರವಿ ಸಾವು ಆತ್ಮಹತ್ಯೆ ಎಂಬುದನ್ನು ಸಿಬಿಐ ದೃಢಪಡಿಸಿತು. ಅದಕ್ಕೂ ಮೊದಲೇ ಕಾಂಗ್ರೆಸ್ ಸರ್ಕಾರ ಘಟನೆಯನ್ನು ಸಂಪೂರ್ಣ ಪಾರದರ್ಶಕವಾಗಿ ತನಿಖೆ ನಡೆಸಿತ್ತು. ಬಿಜೆಪಿ ಮತ್ತು ಜೆಡಿಎಸ್ ವಿರೋಧ ಪಕ್ಷಗಳಾಗಿ ಸರ್ಕಾರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ಮಾಡಿದವು. ಅಂದಿನ ಗೃಹಮಂತ್ರಿಯಾಗಿದ್ದ ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಕೆ.ಜೆ. ಜಾರ್ಜ್ ಅವರನ್ನು ಇಕ್ಕಟ್ಟಿಗೆ ಸಿಲುಕಿಸಿ ರಾಜೀನಾಮೆ ಕೊಡಿಸುವ ಯತ್ನ ಮಾಡಿದರು.'

'ವಿರೋಧ ಪಕ್ಷದ ನಾಯಕರಾಗಿದ್ದ ಜಗದೀಶ್ ಶೆಟ್ಟರ್, ಅನಂತ ಕುಮಾರ್ ಹಾಗೂ ಸದಾನಂದಗೌಡ ಅವರು ಜಾರ್ಜ್ ರಾಜೀನಾಮೆಗೆ ಆಗ್ರಹಿಸಿದ್ದರು. ಅಂದಿನ ಕೇಂದ್ರ ಗೃಹ ಸಚಿವ ರಾಜನಾಥ್ ಸಿಂಗ್ ಬಳಿ ತೆರಳಿ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಲು ಒತ್ತಡ ಹೇರಿದರು. ಆದರೆ, ನಾನು ಅಂಜದೇ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಿದ್ದೆ. ತನಿಖೆಯ ಎಲ್ಲ ಹಂತಗಳಲ್ಲೂ ಅದು ಆತ್ಮಹತ್ಯೆ ಎಂಬುದು ದೃಢಪಟ್ಟಿತು. ಜಾರ್ಜ್ ಗೃಹಮಂತ್ರಿಯಾಗಿ ಪ್ರಾಮಾಣಿಕ ಕೆಲಸ ಮಾಡಿದವರು. ಸತ್ಯ ಮುಚ್ಚಿ ಹಾಕಲು ಎಷ್ಟೇ ಯತ್ನಿಸಿದರೂ ಅದಕ್ಕೆ ಸಿಗಬೇಕಾದ ನ್ಯಾಯ ಸಿಕ್ಕೇ ಸಿಗುತ್ತದೆ ಎಂಬುದಕ್ಕೆ ಈ ಪ್ರಕರಣವೇ ಸಾಕ್ಷಿ' ಎಂದೂ ಸಿದ್ದರಾಮಯ್ಯ ಹೇಳಿದರು.

'ಇಂದಿನ ವ್ಯವಸ್ಥೆ ಕುಲಗೆಟ್ಟು ಹೋಗಿದೆ. ಈ ಭ್ರಷ್ಟ ಮತ್ತು ಜಾತಿ ವ್ಯವಸ್ಥೆಗೆ ನಾವೇ ಕಾರಣ. ಎಲ್ಲಿಯವರೆಗೆ ಸಮಾಜ ಇಂಥವರನ್ನು ವಿರೋಧಿಸದೆ ಸಹಿಸಿಕೊಳ್ಳುವುದೊ ಅಲ್ಲಿಯವರೆಗೆ ಇದು ಮುಂದುವರಿಯುತ್ತದೆ. ಈ ವ್ಯವಸ್ಥೆಗೆ ಈಗ ಯಾರನ್ನು ದೋಷಿಸಬೇಕು, ಯಾರ ಮೇಲೆ ಆರೋಪ ಹೊರಿಸಬೇಕು ಎಂಬುದೇ ತಿಳಿಯುತ್ತಿಲ್ಲ' ಎಂದು ಅವರು ಹತಾಶೆ ವ್ಯಕ್ತಪಡಿಸಿದರು.

ರಾಜಕಾರಣಿ ಎಂ.ಸಿ. ನಾಣಯ್ಯ, 'ಐಎಎಸ್, ಐಪಿಎಸ್ ಅಧಿಕಾರಿಗಳಲ್ಲಿ ಭ್ರಷ್ಟರು ಹೆಚ್ಚಾಗುತ್ತಿದ್ದಾರೆ. ಪ್ರಾಮಾಣಿಕರು ಹಾಗೂ ಬದ್ಧತೆ ಇರುವ ಅಧಿಕಾರಿಗಳ ಸಂಖ್ಯೆ ಕಡಿಮೆಯಾಗಿದೆ. ಡಿ.ಕೆ. ರವಿ ಅವರಂಥ ಅಧಿಕಾರಿಯ ಸಾವಿಗೆ ಜಮೀನು, ಕಾಮಾಂಧತೆ ಹೇಗೆ ಕಾರಣವಾದವು ಎಂಬುದನ್ನು ವಿವರಿಸುವ ಸಮಗ್ರ ತನಿಖಾ ವರದಿಯ ಕ್ರೋಢೀಕರಣವನ್ನು ಈ ಪುಸ್ತಕ ಒಳಗೊಂಡಿದೆ. ಇದರಲ್ಲಿ, ಡಿ.ಕೆ. ರವಿ ಸಾವಿನ ಸುತ್ತ ಕೇಳಿ ಬಂದ ಮಹಿಳಾ ಅಧಿಕಾರಿಯೊಬ್ಬರ ವಿವರವೂ ಇದೆ' ಎಂದರು.



ಕಾರ್ಯಕ್ರಮದಲ್ಲಿ 'ಡಿ.ಕೆ ರವಿ ದುರಂತ ಕಥೆ ನಗ್ನಸತ್ಯ' ಹಾಗೂ 'ಲ್ಯಾಂಡ್, ಲಸ್ಟ್ ಆ್ಯಂಡ್ ಆಡಿಯೊಟೇಪ್ಸ್' ಪುಸ್ತಕಗಳನ್ನು ಸಿದ್ದರಾಮಯ್ಯ ಬಿಡುಗಡೆ ಮಾಡಿದರು. ಚಿತ್ರದಲ್ಲಿ (ಎಡದಿಂದ) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ರಾಜ್ಯ ಪ್ರಧಾನ ಆಯುಕ್ತ ಪಿ. ಜಿ. ಆರ್ ಸಿಂಧ್ಯಾ, ಎಂ.ಸಿ. ನಾಣಯ್ಯ, ಲೇಖಕ ರಾಮಕೃಷ್ಣ ಉಪಾಧ್ಯಾಯ ಮತ್ತು ಸುರೇಶ್ ಹೆಬ್ಳೀಕರ್ ಇದ್ದಾರೆ – ಪ್ರಜಾವಾಣಿ ಚಿತ್ರ

ಕ್ರೀಡಾ ಇಲಾಖೆಯೊಳಗಿನಿಂದಲೇ ಸುಧಾರಣೆಗೆ ಕ್ರಮ: ಸಚಿವ ನಾರಾಯಣಗೌಡ

ಕ್ರೀಡೆ ಬಲ್ಲ ಅಧಿಕಾರಿಗಳ ನೇಮಕ

● ಗಿರೀಶ ದೊಡ್ಡಮನಿ


ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದಲ್ಲಿ ಹಾಕಿ ತಂಡಗಳ ತರಬೇತಿ

ಬೆಂಗಳೂರು: ದೀಪದ ಕೆಳಗಿನ ಕತ್ತಲಿಗೂ, ಕರ್ನಾಟಕದ ಕ್ರೀಡಾಕ್ಷೇತ್ರಕ್ಕೂ ಸಾಮ್ಯವಿದೆ. ಉನ್ನತದರ್ಜೆಯ ಸೌಲಭ್ಯಗಳ ವಿಷಯದಲ್ಲಿ ಇಲ್ಲಿ ಬಹಳಷ್ಟಿದೆ. ಆದರೆ, ಒಲಿಂಪಿಕ್ಸ್‌ನಂತಹ ಕೂಟಕ್ಕೆ ರಾಜ್ಯದಿಂದ ಸ್ಪರ್ಧಿಸುತ್ತಿರುವವರ ಸಂಖ್ಯೆ ಬೆರಳೆಣಿಕೆಯಷ್ಟೂ ಇಲ್ಲ.

ಇತ್ತೀಚೆಗೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಐತಿಹಾಸಿಕ ಸಾಧನೆ ಮಾಡಿದ ಭಾರತ ಪುರುಷರ ಮತ್ತು ಮಹಿಳಾ ಹಾಕಿ ತಂಡಗಳಿಗೆ ಒಲಿಂಪಿಕ್ ಪೂರ್ವಸಿದ್ಧತಾ ತರಬೇತಿ ದೊರಕಿದ್ದು ಬೆಂಗಳೂರಿನ ಭಾರತೀಯ ಕ್ರೀಡಾ ಪ್ರಾಧಿಕಾರದ ಶ್ರೇಷ್ಠತಾ ಕೇಂದ್ರದಲ್ಲಿ. ಅಷ್ಟೇ ಅಲ್ಲ; ಕೊರೊನಾ ಬಿಕ್ಕಟ್ಟಿನ ಸಂದರ್ಭದ ಬಹುತೇಕ ಸಮಯ ಆಟಗಾರರು ಇಲ್ಲಿಯೇ ಸುರಕ್ಷಿತವಾಗಿದ್ದರು.

ಚಿನ್ನದ ಹುಡುಗ ನೀರಜ್ ಚೋಪ್ರಾ ಸಾಧನೆಯಲ್ಲಿ ಬಳ್ಳಾರಿಯ ಜೆಎಸ್‌ಡಬ್ಲ್ಯು ಇನ್‌ಸ್ಪೈರ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಅವರು ಉನ್ನತ ತರಬೇತಿ ಪಡೆದಿದ್ದಾರೆ. ಇದೇ ಮೊದಲ ಸಲ 'ಎ' ಅರ್ಹತೆ ಪಡೆದು ಒಲಿಂಪಿಕ್ಸ್‌ಗೆ ಆಯ್ಕೆಯಾಗಿದ್ದ ಕನ್ನಡಿಗ ಶ್ರೀಹರಿ ನಟರಾಜ್ ಅವರೂ ಇಲ್ಲಿಯ ಈಜುಕೊಳಗಳಿಂದಲೇ ಪ್ರವರ್ಧಮಾನಕ್ಕೆ ಬಂದವರು. ಇಲ್ಲಿಯ ಎಂಬಸಿ ಸಂಸ್ಥೆಯ ಪ್ರಾಯೋಜಕತ್ವದಿಂದಾಗಿ ಫವಾದ್ ಮಿರ್ಜಾ ಈಕ್ವೆಸ್ಟ್ರಿಯನ್‌ನಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತಿದೆ. ಗಾಲ್ಫ್ ತಾರೆ ಅದಿತಿ ಅಶೋಕ್ ಅವರ ಪ್ರತಿಭೆಗೆ ಪ್ರೋತ್ಸಾಹ ದೊರೆತಿದ್ದು ಕೂಡ ಇಲ್ಲಿಯ ಗಾಲ್ಫ್ ಕೋರ್ಸ್‌ಗಳಲ್ಲಿ.

ಆದರೂ ರಾಜ್ಯದಿಂದ ಏಕೆ ಕ್ರೀಡಾಪಟುಗಳು ಹೆಚ್ಚುತ್ತಿಲ್ಲ? ಬೆಂಗಳೂರೆಂಬ ಸಾಗರಕ್ಕೆ ವಿವಿಧೆಡೆಯಿಂದ ಹರಿದುಬಂದು ಸೇರಬೇಕಾದ ನದಿಗಳಿಗೆ ಸರಿಯಾದ ಮಾರ್ಗ ಕಲ್ಪಿಸುವ ಕೆಲಸವಾಗಿಲ್ಲದಿರುವುದೇ ಇದಕ್ಕೆ ಕಾರಣ. ವಿಜಯಪುರದಲ್ಲಿ ಸೈಕ್ಲಿಂಗ್ ವೆಲೊಡ್ರೋಂ ನಿರ್ಮಾಣ ಕಾಮಗಾರಿ ಆರಂಭವಾಗಿ ದಶಕವೇ ಕಳೆದುಹೋಗಿದೆ. ಹಾಕಿ ಕ್ರೀಡೆಯ ಪ್ರತಿಭೆಗಳಿರುವ ಹುಬ್ಬಳ್ಳಿಯಲ್ಲಿ ಇನ್ನೂ ಆಸ್ಟ್ರೋ ಟರ್ಫ್ ಅಂಕಣದ ಕನಸು ಈಡೇರಿಲ್ಲ. ರಾಜಧಾನಿಯ ಕ್ರೀಡಾಂಗಣಗಳ ಅವ್ಯವಸ್ಥೆಗಳು ಮುಂದುವರಿದಿವೆ. ಬೇರುಮಟ್ಟದ ಸಮಸ್ಯೆಗಳನ್ನು ಪರಿಹರಿಸಿದರೆ ಮಾತ್ರ ದೊಡ್ಡ ಕನಸು ಕಾಣಲು ಸಾಧ್ಯವಲ್ಲವೇ?


ನಾರಾಯಣಗೌಡ

ಈ ಬಗ್ಗೆ ರಾಜ್ಯ ಸರ್ಕಾರ ರೂಪಿಸಿರುವ ಯೋಜನೆಯ ಕುರಿತು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ್ದಾರೆ.

● ಒಲಿಂಪಿಕ್ಸ್‌ಗೆ 75 ಅಥ್ಲೀಟ್‌ಗಳನ್ನು ಸಿದ್ಧಗೊಳಿಸುವ ಯೋಜನೆ ಏನು?

ಕರ್ನಾಟಕದಿಂದ ಹೆಚ್ಚು ಕ್ರೀಡಾಪಟುಗಳು ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಬೇಕು ಎಂಬ ಗುರಿ ನಮ್ಮದು. ಅದಕ್ಕಾಗಿ ಕರ್ನಾಟಕದ 75 ಪ್ರತಿಭಾವಂತರನ್ನು ದತ್ತು ಪಡೆದು ತರಬೇತಿ ಕೊಡುತ್ತೇವೆ. ಅದರಲ್ಲಿ ಒಲಿಂಪಿಕ್ಸ್‌ಗೆ ಅರ್ಹತೆ ಪಡೆದವರನ್ನು ಕಳುಹಿಸಿಕೊಡುತ್ತೇವೆ. ಕ್ರೀಡಾ ಕ್ಷೇತ್ರದ ಅನುಭವಿಗಳು, ತಜ್ಞರನ್ನೊಳಗೊಂಡ ಆಯ್ಕೆ ಸಮಿತಿ ರಚಿಸುತ್ತಿದ್ದೇವೆ. ಅವರೇ ಕ್ರೀಡಾಪಟುಗಳನ್ನು ಆಯ್ಕೆ ಮಾಡುತ್ತಾರೆ. ಪ್ರಧಾನಿ ನರೇಂದ್ರ ಮೋದಿ ಅವರು ಆರಂಭಿಸಿರುವ ಖೇಲೊ ಇಂಡಿಯಾ ಬೆಂಬಲವೂ ಸಿಗುತ್ತಿದೆ. ಮುಂದಿನ ವರ್ಷ ಮಾರ್ಚ್‌ನಲ್ಲಿ ಬೆಂಗಳೂರಿನಲ್ಲಿಯೇ ಖೇಲೊ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟ ನಡೆಯಲಿದೆ. ಸುಮಾರು ಆರು ಸಾವಿರ ಅಥ್ಲೀಟ್‌ಗಳು ಭಾಗವಹಿಸುತ್ತಾರೆ. ಅದಕ್ಕಾಗಿ ಇಲ್ಲಿಯ ವಿದ್ಯಾರ್ಥಿಗಳೂ ಸಿದ್ಧರಾಗುತ್ತಾರೆ.

● ಮೂಲಸೌಲಭ್ಯಗಳ ಅಭಿವೃದ್ಧಿಗೆ ಏನು ಯೋಜನೆ ಇದೆ?

ನಮ್ಮ ರಾಜ್ಯದ 31 ಜಿಲ್ಲೆಗಳಲ್ಲಿಯೂ ಕ್ರೀಡಾ ಸೌಲಭ್ಯಗಳು ಈಗಾಗಲೇ ಇವೆ. ಅಲ್ಲಿರುವ ಕೊರತೆಗಳನ್ನು ನಿವಾರಿಸಿ ಅಭಿವೃದ್ಧಿಪಡಿಸಲಾಗುವುದು. ಕ್ರೀಡಾಂಗಣಗಳು, ಈಜುಕೊಳಗಳು, ವಸತಿನಿಲಯಗಳ ನಿರ್ವಹಣೆಯನ್ನು ಪಿಪಿಪಿ (ಸಾರ್ವಜನಿಕ, ಖಾಸಗಿ ಸಹಭಾಗಿತ್ವ) ಮಾದರಿಯಲ್ಲಿ ಮಾಡಲಾಗುವುದು. ಜಿಲ್ಲಾಮಟ್ಟದಲ್ಲಿ ಸೌಲಭ್ಯಗಳಿದ್ದರೆ ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಹೆಚ್ಚು ಅನುಕೂಲವಾಗುತ್ತದೆ. ತುಮಕೂರಿನಲ್ಲಿಯೂ ಉನ್ನತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

● ಈ ಯೋಜನೆಗೆ ಸಂಪನ್ಮೂಲ ಕ್ರೋಡೀಕರಣ ಹೇಗೆ?

ಬಹುರಾಷ್ಟ್ರೀಯ ಕಂಪನಿಗಳಲ್ಲಿರುವ ಸಿಎಸ್‌ಆರ್ ಫಂಡ್ (ಸಾಮಾಜಿಕ ಹೊಣೆಗಾರಿಕೆ ನಿಧಿ) ಪಡೆಯುವತ್ತಲೂ ಪ್ರಯತ್ನಿಸುತ್ತಿದ್ದೇವೆ. 100 ಕಂಪನಿಗಳಿಗೆ ಪತ್ರ ಬರೆಯಲಾಗಿದೆ. ಅದರಲ್ಲಿ ಜಿಂದಾಲ್ ಸಮೂಹ ಸೇರಿದಂತೆ 30–40 ಕಂಪನಿಗಳು ಆಸಕ್ತಿ ತೋರಿವೆ. ಅವರ ಪಾಲ್ಗೊಳ್ಳುವಿಕೆಯಿಂದ ಕ್ರೀಡೆಗೆ ಒಳ್ಳೆಯದಾಗುತ್ತೆ. ಅವರಿಗೂ ಖ್ಯಾತಿ ಲಭಿಸುತ್ತದೆ.

● ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಆಟೋಟಗಳ ಅರಿವಿಲ್ಲದ ಅಧಿಕಾರಿಗಳಿದ್ದಾರೆ. ಅದರಿಂದ ಹಿನ್ನಡೆಯಾಗುತ್ತಿದೆ ಎಂಬ ದೂರು ಇದೆಯಲ್ಲ?

ಅದಕ್ಕಾಗಿಯೇ ಇಲಾಖೆಯೊಳಗಿನ ತಂಡವನ್ನು ಸಬಲಗೊಳಿಸುತ್ತಿದ್ದೇವೆ. ಕಮಿಷನರ್ ಶಾಲಿನಿ ರಜನೀಶ್ ನೇತೃತ್ವದಲ್ಲಿ ಸುಧಾರಣೆಗಳು ನಡೆಯುತ್ತಿವೆ. ಇನ್ನು ಮುಂದೆ ನೇಮಕವಾಗುವ ಶೇ 50ರಷ್ಟು ಅಧಿಕಾರಿಗಳಿಗೆ ಕ್ರೀಡಾ ಸಾಧನೆಯ ಹಿನ್ನೆಲೆ ಇರುವುದನ್ನು ಕಡ್ಡಾಯಗೊಳಿಸಲಾಗುತ್ತಿದೆ. ಈ ಪ್ರಸ್ತಾವವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಗೆ ಸಲ್ಲಿಸಲಾಗಿದೆ. ಬೇರೆ ಬೇರೆ ಇಲಾಖೆಗಳಲ್ಲಿಯೂ ಕ್ರೀಡಾಪಟುಗಳಿಗೆ ಶೇ 2ರಷ್ಟು ಮೀಸಲಾತಿ ನೀಡಲೂ ನಿರ್ಧರಿಸಲಾಗಿದೆ. ಈಗಾಗಲೇ ಪೊಲೀಸ್ ಇಲಾಖೆಯಲ್ಲಿ ಇದು ಜಾರಿಯಾಗಿದೆ. ಇದು ಬಾಯಿಮಾತಷ್ಟೇ ಅಲ್ಲ. ಸರ್ಕಾರಿ ನಿಯಮಾವಳಿಯನ್ನೇ ರೂಪಿಸಲಾಗುತ್ತಿದೆ. ಯಾವುದೇ ಸರ್ಕಾರ ಬಂದರೂ ಕ್ರೀಡಾಭಿವೃದ್ಧಿ ನಿರಂತರವಾಗಿರುವಂತಹ ಯೋಜನೆ ಇದು.

● ಈ ಯೋಜನೆಯಲ್ಲಿ ಕ್ರೀಡಾ ಸಂಘಟನೆಗಳ ಪಾತ್ರ ಏನು?

ಬಹಳ ಮುಖ್ಯವಾದ ಪಾತ್ರವಿದೆ. ಇದೀಗ 100 ಮಕ್ಕಳನ್ನು ವಿವಿಧ ಕ್ರೀಡೆಗಳಿಗೆ ಆಯ್ಕೆ ಮಾಡುತ್ತಿದ್ದೇವೆ. ಅದಕ್ಕಾಗಿ ಕ್ರೀಡಾ ಸಂಸ್ಥೆಗಳ ನೆರವು ಪಡೆಯುತ್ತಿದ್ದೇವೆ. ಅವರಲ್ಲಿರುವ ಅನುಭವಿಗಳು ಮತ್ತು ಪರಿಣತರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರಿಗೆ ಸರ್ಕಾರದಿಂದ ಬೇಕಾದ ನೆರವನ್ನೂ ನಾವು ನೀಡುತ್ತೇವೆ.

'ಪ್ರೋತ್ಸಾಹ ನೀಡದೇ ಪದಕ ನಿರೀಕ್ಷಿಸುವುದು ಸರಿಯೇ?'

● ಜಿ. ಶಿವಕುಮಾರ


ಶ್ರೀಹರಿ ನಟರಾಜ್

ಬೆಂಗಳೂರು: 'ಸೂಕ್ತ ಪ್ರೋತ್ಸಾಹ ನೀಡದೆ ಒಲಿಂಪಿಕ್ಸ್, ಕಾಮನ್‌ವೆಲ್ತ್, ಏಷ್ಯನ್ ಸೇರಿ ಇತರ ಮಹತ್ವದ ಕೂಟಗಳಲ್ಲಿ ಅಥ್ಲೀಟ್‌ಗಳು ಪದಕ ಗೆದ್ದು ತರಲಿ ಎಂದು ನಿರೀಕ್ಷಿಸುವುದು ಎಷ್ಟು ಸರಿ?...'

ಕರ್ನಾಟಕದ ಈಜುಪಟು ಶ್ರೀಹರಿ ನಟರಾಜ್ ಅವರ ಪ್ರಶ್ನೆ ಇದು.

ಟೋಕಿಯೊ ಒಲಿಂಪಿಕ್ಸ್‌ನ ಪುರುಷರ 100 ಮೀಟರ್ಸ್ ಬ್ಯಾಕ್‌ಸ್ಟ್ರೋಕ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದ ಬೆಂಗಳೂರಿನ ಶ್ರೀಹರಿ, ರಾಜ್ಯದಲ್ಲಿನ ಕ್ರೀಡಾ ಬೆಳವಣಿಗೆ ಕುರಿತು 'ಪ್ರಜಾವಾಣಿ' ಜೊತೆ ಮಾತನಾಡಿದ್ದಾರೆ.

● ರಾಜ್ಯದಲ್ಲಿ ಕ್ರೀಡಾಪಟುಗಳಿಗೆ ಸಿಗುತ್ತಿರುವ ಬೆಂಬಲದ ಬಗ್ಗೆ ಹೇಳಿ?

ಮಹತ್ವದ ಕೂಟಗಳಲ್ಲಿ ಪದಕ ಗೆಲ್ಲುವ ಮಹದಾಸೆ ಎಲ್ಲಾ ಕ್ರೀಡಾಪಟುಗಳಲ್ಲೂ ಇರುತ್ತದೆ. ಅದಕ್ಕೆ ಅಗತ್ಯವಿರುವ ಪ್ರೋತ್ಸಾಹ ಸಿಗಬೇಕಲ್ಲ? ಬೇರೆ ರಾಜ್ಯಗಳಲ್ಲಿ ಪದಕ ಗೆದ್ದ ಕ್ರೀಡಾಪಟುಗಳಿಗೆ ಅಲ್ಲಿನ ಸರ್ಕಾರಗಳು ನಗದು ಬಹುಮಾನ ಪ್ರಕಟಿಸುತ್ತವೆ. ಸರ್ಕಾರಿ ಉದ್ಯೋಗ ನೀಡುವ ಪ್ರತೀತಿಯೂ ಇದೆ. ನಮ್ಮಲ್ಲಿ ಅದಕ್ಕೆ ತದ್ವಿರುದ್ಧ ಪರಿಸ್ಥಿತಿ. ನಾವೇ ಅಂಗಲಾಚಿದರೂ ನೆರವು ನೀಡಲು ಯಾರೂ ಮುಂದೆ ಬರುವುದಿಲ್ಲ.

● ಸರ್ಕಾರದಿಂದ ಅಥ್ಲೀಟ್‌ಗಳು ನಿರೀಕ್ಷಿಸುವುದೇನು?

ಸರ್ಕಾರವು ನಗದು ಪುರಸ್ಕಾರ, ಬೋನಸ್ ಸೇರಿ ವಿವಿಧ ಪ್ರೋತ್ಸಾಹಕ ಕ್ರಮಗಳ ಮೂಲಕ ಕ್ರೀಡಾಪಟುಗಳನ್ನು ಹುರಿದುಂಬಿಸುವ ಕೆಲಸಕ್ಕೆ ಮುಂದಾಗಬೇಕು. ಅಮೆರಿಕದಲ್ಲಿ 20 ಮಂದಿ ಈಜುಪಟುಗಳನ್ನು ಗುರುತಿಸಿ ಅವರ ತರಬೇತಿಗೆ ತಗಲುವ ಸಂಪೂರ್ಣ ವೆಚ್ಚವನ್ನು ಅಲ್ಲಿನ ಫೆಡರೇಷನ್ ಭರಿಸುತ್ತದೆ. ನಮ್ಮಲ್ಲಿ ಆ ವ್ಯವಸ್ಥೆ ಇಲ್ಲ. ಖಾಸಗಿ ಸಂಸ್ಥೆಗಳೂ ಪ್ರಾಯೋಜಕತ್ವ ನೀಡಲು ಹಿಂದೇಟು ಹಾಕುತ್ತವೆ. ಹೀಗಾಗಿ ಬಹುಪಾಲು ಮಂದಿ ಕ್ರೀಡೆಯಿಂದಲೇ ವಿಮುಖರಾಗುತ್ತಿದ್ದಾರೆ.

● ಸರ್ಕಾರದ ಹೊಸ ಯೋಜನೆ ಬಗ್ಗೆ ?

75 ಮಂದಿ ಕ್ರೀಡಾಪಟುಗಳನ್ನು ಗುರುತಿಸಿ ಅವರನ್ನು ಒಲಿಂಪಿಕ್ಸ್‌ಗೆ ಸಜ್ಜುಗೊಳಿಸಲು ಮುಂದಾಗಿರುವುದು ಸ್ವಾಗತಾರ್ಹ ಕ್ರಮ. ಇದರಿಂದ ರಾಜ್ಯದ ಅಥ್ಲೀಟ್‌ಗಳಲ್ಲಿ ಹೊಸ ಭರವಸೆ ಚಿಗುರೊಡೆಯುತ್ತದೆ. ನಾನು ಈಜು ಕಲಿಕೆ ಆರಂಭಿಸಿದ ದಿನಗಳಿಗೆ ಹೋಲಿಸಿದರೆ ಈಗ ಪರಿಸ್ಥಿತಿ ಕೊಂಚ ಸುಧಾರಿಸಿದೆ. ಬೆಂಗಳೂರು ಈಜು ಕ್ರೀಡೆಯ ಶಕ್ತಿಕೇಂದ್ರವಾಗಿ ರೂಪುಗೊಂಡಿದೆ. ಈ ಬಾರಿ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದವರೆಲ್ಲಾ ನಗರದಲ್ಲೇ ತರಬೇತಿ ಪಡೆದಿದ್ದರು. ಆದರೆ ಬೇರೆ ಕ್ರೀಡೆಗಳಿಗೆ ಇನ್ನಷ್ಟು ಪ್ರೋತ್ಸಾಹದ ಅಗತ್ಯವಿದೆ. ಅದರತ್ತ ಸರ್ಕಾರ ಗಮನಹರಿಸಲಿ.

'ಪರಿಸ್ಥಿತಿ ಸುಧಾರಿಸಿದೆ; ಪ್ರೋತ್ಸಾಹ ಸಿಗುತ್ತಿದೆ'


ಪ್ರಿಯಾ ಮೋಹನ್ – ಪ್ರಜಾವಾಣಿ ಚಿತ್ರ

● ಬಸವರಾಜ ದಳವಾಯಿ

'ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ನಾನು ಪದಕ ಗೆದ್ದಿದ್ದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಗೊತ್ತೇ ಇರಲಿಲ್ಲ. ಅವರನ್ನು ಭೇಟಿಯಾದ ವೇಳೆ ಅಭಿನಂದಿಸಿ ಖುಷಿಪಟ್ಟರು. ಈ ಹಿಂದೆ ಸರ್ಕಾರದಿಂದ ಹೆಚ್ಚು ನೆರವು ಸಿಗುತ್ತಿರಲಿಲ್ಲ. ಆದರೆ ಈಗ ಪರಿಸ್ಥಿತಿ ಕೊಂಚ ಬದಲಾಗುತ್ತಿದೆ. ಪ್ರೋತ್ಸಾಹ ದೊರೆಯುತ್ತಿದೆ.'

ಇತ್ತೀಚೆಗೆ ಕೆನ್ಯಾದ ನೈರೋಬಿಯಲ್ಲಿ ನಡೆದ ವಿಶ್ವ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ ಕಂಚಿನ ಪದಕ ಒಲಿಸಿಕೊಂಡ ಯುವ ಅಥ್ಲೀಟ್ ಪ್ರಿಯಾ ಮೋಹನ್ ಅವರ ಮಾತಿದು. ಚಾಂಪಿಯನ್‌ಷಿಪ್‌ನಲ್ಲಿ ಅವರಿದ್ದ ಭಾರತ ತಂಡವು 4X400 ಮೀಟರ್ಸ್ ಮಿಶ್ರ ರಿಲೆಯಲ್ಲಿ ಪದಕ ಗಳಿಸಿತ್ತು.

'2024ರ ಪ್ಯಾರಿಸ್ ಒಲಿಂಪಿಕ್ಸ್ ನನ್ನ ಪ್ರಮುಖ ಗುರಿ. ಅಲ್ಲಿ ಚಿನ್ನ ಗೆಲ್ಲಬೇಕು. ಕೂಟಕ್ಕೆ ಅರ್ಹತೆ ಪಡೆಯಲು ಪ್ರಯತ್ನ ನಡೆದಿದೆ. ಕೋವಿಡ್ ಲಾಕ್‌ಡೌನ್‌ನಲ್ಲೂ ನನ್ನ ತರಬೇತಿ ನಿಂತಿರಲಿಲ್ಲ. ಸರ್ಕಾರದ ವಿಶೇಷ ಅನುಮತಿಯೊಂದಿಗೆ ವಿದ್ಯಾನಗರ ಕ್ರೀಡಾಂಗಣದಲ್ಲಿ ಅಭ್ಯಾಸ ಮುಂದುವರಿಸಿದ್ದೆ' ಎಂದರು ಪ್ರಿಯಾ.

2019ರಲ್ಲಿ ನೇಪಾಳದಲ್ಲಿ ನಡೆದ ದಕ್ಷಿಣ ಏಷ್ಯಾ ಕ್ರೀಡೆಗಳ 400 ಮೀ. ಓಟದಲ್ಲಿ ಬೆಳ್ಳಿ ಮತ್ತು 4X400 ಮೀ. ರಿಲೇಯಲ್ಲಿ ಕಂಚಿನ ಪದಕ ಅವರಿಗೆ ಒಲಿದಿದೆ. ಹಾಂಗ್‌ಕಾಂಗ್‌ನಲ್ಲಿ ನಡೆದ ಯೂತ್ ಏಷ್ಯನ್ ಮೆಡ್ಲೆ ರಿಲೆಯಲ್ಲಿ ಬೆಳ್ಳಿ ಪದಕ ಬಂದಿತ್ತು. ರಾಷ್ಟ್ರಮಟ್ಟದಲ್ಲಿ 18 ಪದಕಗಳು ಅವರ ಮುಡಿಗೇರಿವೆ. ಅದರಲ್ಲಿ 15 ಚಿನ್ನ ಎಂಬುದು ವಿಶೇಷ. ಏಷ್ಯನ್, ಕಾಮನ್‌ವೆಲ್ತ್ ಗೇಮ್ಸ್, ವಿಶ್ವ ಜೂನಿಯರ್ ಮತ್ತು ಸೀನಿಯರ್ ಅಥ್ಲೆಟಿಕ್ಸ್ ಕೂಟಗಳಲ್ಲೂ ಪದಕ ಗೆಲ್ಲುವ ಮಹದಾಸೆ ಅವರದು. ಕೋಚ್ ಅರ್ಜುನ್ ಅಜಯ್ ಮಾರ್ಗದರ್ಶನದಲ್ಲಿ ಪಳಗುತ್ತಿರುವ ಅವರು, ದೊಡ್ಡ ಕನಸುಗಳ ಸಾಕಾರಕ್ಕೆ ಪಣ ತೊಟ್ಟಿದ್ದಾರೆ.

ದೈಹಿಕ ಶಿಕ್ಷಣ ಶಿಕ್ಷಕರಿಗೂ ಬೇಕು ತರಬೇತಿ

● ಪ್ರಮೋದ


ಧಾರವಾಡದ ಬಾಲಮಾರುತಿ ಜಿಮ್ನಾಸ್ಟಿಕ್ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಮಕ್ಕಳು –ಪ್ರಜಾವಾಣಿ ಚಿತ್ರ/ಗೋವಿಂದರಾಜ್ ಜವಳಿ

ಹುಬ್ಬಳ್ಳಿ: 2012ರಲ್ಲಿ ಬೆಂಗಳೂರಿನಲ್ಲಿ ನಡೆದ ದಕ್ಷಿಣ ವಲಯ ಮಟ್ಟದ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನದ ಪದಕ ಗೆದ್ದ ಕ್ರೀಡಾಪಟುವೊಬ್ಬರು 'ಉನ್ನತ ಶಿಕ್ಷಣ ಹಾಗೂ ಉದ್ಯೋಗ ಪಡೆಯಲು ಈ ಪದಕ ಸಾಕು' ಎಂದು ಸಂಭ್ರಮಪಟ್ಟಿದ್ದರು.

ಯಾಕೆ ಎಂದು ಪ್ರಶ್ನಿಸಿದಾಗ, 'ಒಳ್ಳೆಯ ಉದ್ಯೋಗ ಕಂಡುಕೊಂಡು ಜೀವನ ಭದ್ರ ಮಾಡಿಕೊಂಡರೆ ಕ್ರೀಡಾಕ್ಷೇತ್ರಕ್ಕೆ ಬಂದಿದ್ದಕ್ಕೂ ಸಾರ್ಥಕ ಎನಿಸುತ್ತದೆ' ಎಂದಿದ್ದರು. 'ಹೊಟ್ಟೆಪಾಡಿಗಾಗಿ ಆಟ' ಎನ್ನುವುದು ಅವರ ಮಾತುಗಳಲ್ಲಿ ಸ್ಪಷ್ಟವಾಗಿತ್ತು. ಪ್ರಾಥಮಿಕ ಹಂತದಿಂದಲೇ ಕ್ರೀಡಾಪಟುಗಳ ಪ್ರತಿಭಾ ಶೋಧದ ಕೊರತೆ ಹಾಗೂ ಕ್ರೀಡಾ ಮಹತ್ವ ಹೇಳಿಕೊಡುವಲ್ಲಿ ಆಗುತ್ತಿರುವ ಲೋಪದಿಂದ ಇಂಥ ಸಮಸ್ಯೆಗಳು ಹೆಚ್ಚುತ್ತಿವೆ. ಉನ್ನತ ಶಿಕ್ಷಣ ಹಾಗೂ ಉದ್ಯೋಗಕ್ಕೆ ನೆರವಾಗಲು ರಾಷ್ಟ್ರೀಯ ಮಟ್ಟದಲ್ಲಿ ಒಂದು ಪದಕ ಗೆದ್ದರೆ ಸಾಕು ಎನ್ನುವ ಮನೋಭಾವ ಕ್ರೀಡಾಪಟುಗಳಲ್ಲಿ ಬೆಳೆಯುತ್ತಿದೆ.

ಒಂದು ಸರ್ಕಾರಿ ಶಾಲಾ–ಕಾಲೇಜಿನ ನೂರಾರು ವಿದ್ಯಾರ್ಥಿಗಳಿಗೆ ಒಬ್ಬರು ಅಥವಾ ಗರಿಷ್ಠ ಇಬ್ಬರು ದೈಹಿಕ ಶಿಕ್ಷಣ ಶಿಕ್ಷಕರು ಇರುತ್ತಾರೆ. ದಿನದ ಒಂದು ತಾಸು ಮಾತ್ರ 'ಆಟದ ಅವಧಿ'ಗೆ ಇರುತ್ತದೆ. ಈ ಸಮಯದಲ್ಲಿ ಯಾವ ಶಿಕ್ಷಕರಿಗೂ ಗಂಭೀರವಾಗಿ ಮಕ್ಕಳಿಗೆ ಕ್ರೀಡಾ ಕೌಶಲಗಳನ್ನು ಹೇಳಿಕೊಡಲು ಸಾಧ್ಯವಾಗುತ್ತಿಲ್ಲ.

ಮುಖ್ಯವಾಗಿ ಬಹುತೇಕ ದೈಹಿಕ ಶಿಕ್ಷಣ ಶಿಕ್ಷಕರಿಗೆ ಈಗಿನ ಸ್ಪರ್ಧಾತ್ಮಕತೆಗೆ ಬೇಕಾದ ಕೌಶಲಗಳು ಗೊತ್ತಿಲ್ಲ. ಶಿಕ್ಷಣ ಸಂಸ್ಥೆಗಳು, ಸರ್ಕಾರಗಳು ತರಬೇತಿ ಕೊಡಿಸುತ್ತಿಲ್ಲ.ಶಿಕ್ಷಕರಿಗೇ ಹೊಸ ಕ್ರೀಡಾ ಕೌಶಲಗಳು ತಿಳಿದಿಲ್ಲವಾದರೆ ಮಕ್ಕಳಿಗೆ ಹೇಳಿ ಕೊಡುವುದಾದರೂ ಏನು? ಯುವಪ್ರತಿಭೆಗಳ ಕೌಶಲ ಶೋಧ ಹೇಗೆ ಸಾಧ್ಯ?


ಶ್ರೀಪಾಲ್ ಕುರಕುರಿ

ಧಾರವಾಡ ಜಿಲ್ಲೆ ಅಳ್ನಾವರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ದೈಹಿಕ ಶಿಕ್ಷಣ ನಿರ್ದೇಶಕ ಶ್ರೀಪಾಲ್ ಕುರಕುರಿ, 'ಶಾಲಾ–ಕಾಲೇಜುಗಳಲ್ಲಿ ಎಲ್ಲರ ಪ್ರತಿಭೆಯನ್ನೂ ಒಬ್ಬ ಶಿಕ್ಷಕ ಶೋಧಿಸುವುದು ಕಷ್ಟ. ಪ್ರಾದೇಶಿಕತೆಗೆ ಅನುಗುಣವಾಗಿ ಕ್ರೀಡೆಗಳನ್ನು ವಿಭಜಿಸಿ ಶಿಬಿರ ನಡೆಸಬೇಕು. ಕ್ರೀಡೆಗೆ ಹೆಚ್ಚು ಸಮಯ ಮೀಸಲಿಡಬೇಕು. ಪ್ರತಿಭಾನ್ವಿತ ಮಕ್ಕಳಿಗೆ ಆರ್ಥಿಕ ನೆರವು ನೀಡಬೇಕು' ಎಂದು ಅಭಿಪ್ರಾಯಪಟ್ಟರು.

ಕಾಡುವ ಕಾಲ; ಅಭ್ಯಾಸಕ್ಕಿಲ್ಲ ಸಕಾಲ

● ವಿಕ್ರಂ ಕಾಂತಿಕೆರೆ


ಕಲಬುರ್ಗಿ ಜಿಲ್ಲಾ ಕ್ರೀಡಾಂಗಣ –ಪ್ರಜಾವಾಣಿ ಚಿತ್ರ

ಉತ್ತರ ಕರ್ನಾಟಕದಲ್ಲಿ ಬೇಸಿಗೆಯಲ್ಲಿ ಸುಡುಬಿಸಿಲು, ಮಳೆಗಾಲದಲ್ಲಿ ಕೆಲವೊಮ್ಮೆ ಮುಸಲಧಾರೆ. ಚಳಿಗಾಲದಲ್ಲೂ ಕೆಲವೆಡೆ ಮಂಜಿನ ಪರದೆ. ಅತ್ತ ಕರಾವಳಿಯಲ್ಲಿ ಬೇಸಿಗೆಯಲ್ಲಿ ಬೆವರು ಒರೆಸಿಕೊಳ್ಳುವುದಕ್ಕೇ ಬೇಕು ಒಂದಷ್ಟು ಹೊತ್ತು. ಮಳೆಗಾಲದಲ್ಲಿ ಎಲ್ಲೆಲ್ಲೂ ಹೊಳೆ. ಮಲೆನಾಡಂತೂ ಕೆಲವು ತಿಂಗಳು 'ಮಳೆನಾಡು' ಆಗಿಬಿಡುತ್ತದೆ.

'ಕಾಲ'ದ ಈ ವಿಷಮ ಸ್ಥಿತಿಗೆ ತೊಂದರೆಗೆ ಒಳಗಾಗುವವರು ಕ್ರೀಡಾಪಟುಗಳು. ಅದರ ಭಾರವೆಲ್ಲ ಕೋಚ್‌ಗಳ ಹೆಗಲ ಮೇಲೆ. ಬಿಸಿಲು ಮತ್ತು ಮಳೆ ರಾಜ್ಯದ ಕ್ರೀಡಾಪಟುಗಳ ಅಭ್ಯಾಸಕ್ಕೆ ಪೆಟ್ಟು ನೀಡುತ್ತಿದೆ. ಇದನ್ನು ಮೀರಿ ನಿಲ್ಲಲು ಒಂದೊಂದು ಭಾಗದಲ್ಲಿ ಒಂದೊಂದು ತಂತ್ರಗಳನ್ನು ಅನುಸರಿಸಲಾಗುತ್ತಿದೆಯಾದರೂ ಒಟ್ಟಾರೆಯಾಗಿ ವೈಜ್ಞಾನಿಕ ಪರಿಹಾರ ಮಾರ್ಗವೊಂದನ್ನು ಕಂಡುಕೊಳ್ಳಲು ಕ್ರೀಡಾ ಇಲಾಖೆಗಾಗಲಿ, ತಜ್ಞರಿಗಾಗಲಿ ಸಾಧ್ಯವಾಗಲಿಲ್ಲ.

ಮಳೆ ಮತ್ತು ಬಿಸಿಲಿನಿಂದ ಒಳಾಂಗಣ ಕ್ರೀಡೆಗಳ ಅಭ್ಯಾಸಕ್ಕೆ ಹೆಚ್ಚು ತೊಂದರೆ ಆಗುವುದಿಲ್ಲ. ಆದರೆ ಹೊರಾಂಗಣ ಕ್ರೀಡೆಗಳಿಗೆ ಈ ವೈಪರೀತ್ಯ ಪೆಟ್ಟು ನೀಡುತ್ತದೆ. ಟ್ರ್ಯಾಕ್ ಮತ್ತು ಫೀಲ್ಡ್ ಕ್ರೀಡಾಪಟುಗಳಿಗಂತೂ ಹೆಚ್ಚು ಸಮಸ್ಯೆಯಾಗುತ್ತದೆ. ಮಳೆಗಾಲದಲ್ಲಿ ಅಭ್ಯಾಸ ಮಾಡುವುದೇ ಸವಾಲು. ಅದನ್ನು ಲೆಕ್ಕಿಸದೇ ಮುಂದೆ ನುಗ್ಗಿ ನೋವು–ಗಾಯವಾದರೆ, ಚಿಕಿತ್ಸೆಗೆ ವೈಜ್ಞಾನಿಕ ವಿಧಾನಗಳೂ ಇಲ್ಲ. ಇದೆಲ್ಲದರ ನಡುವೆ 'ಬೆಂಗಳೂರಿನಲ್ಲಿ ಎಲ್ಲವೂ ಇದೆ, ನಮಗೆ ನಿತ್ಯವೂ ಸಂಕಷ್ಟ' ಎಂಬ ಕೊರಗೂ ಕೇಳಿಬರುತ್ತಿದೆ.

ರಾಜ್ಯದ ಕೆಲವೆಡೆ ಗುಣಮಟ್ಟದ ಕ್ರೀಡಾಂಗಣ, ಟ್ರ್ಯಾಕ್ ಇತ್ಯಾದಿ ಇದ್ದರೂ ನಿರ್ವಹಣೆಯ ಸಮಸ್ಯೆಯಿಂದ ಇದ್ದೂ ಇಲ್ಲದ ಪರಿಸ್ಥಿತಿ. ಉದಾಹರಣೆಗೆ ಗದಗ ಜಿಲ್ಲಾ ಕ್ರೀಡಾಂಗಣದಲ್ಲಿ ಸಿಂಥೆಟಿಕ್ ಟ್ರ್ಯಾಕ್‌ಗೆ 'ವಾಟರಿಂಗ್' ಸರಿಯಾಗಿ ಆಗದ ಕಾರಣ ಹಾಳಾಗುತ್ತಿದೆ ಎಂಬ ಆರೋಪವಿದೆ. 'ಕೋಟಿಗಟ್ಟಲೆ ಹಣ ವೆಚ್ಚ ಮಾಡಿ ಸಿಂಥೆಟಿಕ್ ಟ್ರ್ಯಾಕ್ ಸೌಲಭ್ಯ ಒದಗಿಸಲಾಗಿದೆ. ಆದರೆ ನಿರ್ವಹಣೆ ಇಲ್ಲ. ಈ ಟ್ರ್ಯಾಕ್‌ಗಳು ಈಗ ವಾಕರ್ಸ್ ಟ್ರ್ಯಾಕ್ ಆಗಿದೆ. ಇದನ್ನು ತಡೆಯಲು ಸಾಧ್ಯವೇ ಇಲ್ಲ ಎಂದು ಅಧಿಕಾರಿಗಳು ಕೈಚೆಲ್ಲಿ ಕುಳಿತಿದ್ದಾರೆ' ಎನ್ನುತ್ತಾರೆ ಗದಗ ಜಿಲ್ಲಾ ಅಥ್ಲೆಟಿಕ್ಸ್ ಸಂಸ್ಥೆಯ ಕಾರ್ಯದರ್ಶಿ ಪ್ರಭು ಪಾಟೀಲ. 'ಮಲೆನಾಡಿನಲ್ಲಿ ಜೂನ್‌ನಿಂದ ಕೆಲವು ತಿಂಗಳು ಅಭ್ಯಾಸ ಮಾಡುವುದು ತೀರಾ ಕಷ್ಟ. ರಿಸ್ಕ್ ತೆಗೆದುಕೊಳ್ಳಲು ಯಾರೂ ಮುಂದಾಗುವುದಿಲ್ಲ. ಬೆಂಗಳೂರಿನಲ್ಲಿರುವಂತೆ, ಗಾಯದ ನಿರ್ವಹಣೆಗೆ ವಿಭಾಗೀಯ ಮಟ್ಟಕ್ಕೆ ಒಂದು ಕೇಂದ್ರ ಆರಂಭಿಸಿದ್ದರೆ ನಿರಾತಂಕವಾಗಿ ಅಭ್ಯಾಸ ಮಾಡಬಹುದಾಗಿತ್ತು' ಎಂಬುದು ಮಲೆನಾಡಿನ ಜಿಲ್ಲೆಯೊಂದರ ಡಿವೈಇಎಸ್ ಕೋಚ್ ಅಭಿಪ್ರಾಯ.

ಮಳೆಗಾಲ, ಪರೀಕ್ಷೆಗಳು ಮತ್ತು ಕ್ರೀಡಾಕೂಟಗಳ ವಾರ್ಷಿಕ ಕ್ಯಾಲೆಂಡರ್ ನಡುವೆ ತಾಳೆಯಾಗದೇ ಇರುವುದು ಕೂಡ ಕ್ರೀಡಾಪಟುಗಳ ಪ್ರತಿಭೆ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ.

'ಅಂತರರಾಷ್ಟ್ರೀಯ ಕ್ಯಾಲೆಂಡರ್ ಪ್ರಕಾರ ಆಗಸ್ಟ್‌ನಿಂದ ಅಕ್ಟೋಬರ್ ವರೆಗೆ ಪ್ರಮುಖ ಕೂಟಗಳು ನಡೆಯುತ್ತವೆ. ಇದಕ್ಕಾಗಿ ಆಯ್ಕೆ ಪ್ರಕ್ರಿಯೆ ಕೆಲವು ತಿಂಗಳ ಹಿಂದೆ ನಡೆಯುತ್ತದೆ. ಮಳೆ-ಬಿಸಿಲು ಕಾಡುತ್ತಿರುವಾಗ ಇದಕ್ಕೆ ಸಮಯ ಹೊಂದಿಸುವುದು ಸವಾಲಾಗುತ್ತದೆ' ಎನ್ನುತ್ತಾರೆ ಅಂತರರಾಷ್ಟ್ರೀಯ ಅಥ್ಲೀಟ್, ಹುಬ್ಬಳ್ಳಿಯಲ್ಲಿ ಕೋಚಿಂಗ್ ಮಾಡುತ್ತಿರುವ ವಿಲಾಸ ನೀಲಗುಂದ.

ಥಳುಕಿನ ಅಡಿಯ ಹುಳುಕು

ಈ ಬಾರಿಯ ಬಜೆಟ್‌ನಲ್ಲಿ ಕ್ರೀಡಾ ಇಲಾಖೆಗೆ ಹಂಚಿಕೆಯಾಗಿರುವ ಅನುದಾನ (ಕೋಟಿಗಳಲ್ಲಿ)

₹161.75	ಬಿಡುಗಡೆಯಾದ ಒಟ್ಟು ಅನುದಾನ
₹119.36	ಇಲಾಖೆಯ ರಾಜ್ಯ ವಲಯಕ್ಕೆ ಹಂಚಿಕೆಯಾದ ಅನುದಾನ
₹33.71	ಇಲಾಖೆಯ ಜಿಲ್ಲಾ ಪಂಚಾಯತ್ ವಲಯಕ್ಕೆ ಹಂಚಿಕೆಯಾದ ಮೊತ್ತ
₹4.78	ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮಗಳಿಗೆ ಮೀಸಲಿಟ್ಟ ಮೊತ್ತ
₹3.89	ಸರ್ಕಾರಿ ವಿಮಾನ ಶಿಕ್ಷಣ ಶಾಲೆಗೆ ಬಿಡುಗಡೆಗೊಂಡಿರುವ ಮೊತ್ತ
₹2	ಕ್ರೀಡಾ ವಿಜ್ಞಾನ ಕೇಂದ್ರಕ್ಕೆ ಮೀಸಲಿಟ್ಟ ಅನುದಾನ
₹10	ಮಂಡ್ಯ ನಗರ ಕ್ರೀಡಾಂಗಣ ಉನ್ನತೀಕರಣಕ್ಕೆ ಬಿಡುಗಡೆಯಾಗಿರುವ ಮೊತ್ತ
₹2	ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯಲ್ಲಿ ಮೂಲ ಸೌಲಭ್ಯ ಅಭಿವೃದ್ಧಿಗೆ ಮೀಸಲಿಟ್ಟ ಮೊತ್ತ

ಪ್ರಮುಖ ಘೋಷಣೆ

- **ದೇವನಹಳ್ಳಿಯಲ್ಲಿ ಒಲಿಂಪಿಕ್ ಸಿದ್ಧತಾ ಕೇಂದ್ರ ಸ್ಥಾಪನೆ**
- **ಬೆಂಗಳೂರಿನಲ್ಲಿ ರಾಷ್ಟ್ರೀಯ ವಿಶ್ವವಿದ್ಯಾಲಯ ಕ್ರೀಡಾಕೂಟ ಆಯೋಜನೆ**

ಒಂದನೇ ಪುಟದಿಂದ...

ಟೆನಿಸ್‌ನಲ್ಲಿ ದೊಡ್ಡದನ್ನು ಸಾಧಿಸಬೇಕೆಂಬ ಕನಸು ಕಾಣುತ್ತಿರುವ ದಾವಣಗೆರೆಯ ಅಲೋಕ್, ಬೆಂಗಳೂರಿನ ಮಹೇಶ್ ಭೂಪತಿ ಅಕಾಡೆಮಿಯಲ್ಲಿ ತಿಂಗಳಿಗೆ ₹80 ಸಾವಿರದಷ್ಟು ಅಂದಾಜು ವೆಚ್ಚದಲ್ಲಿ ತರಬೇತಿ ಪಡೆದ ಅನುಭವವನ್ನು ಹಿಂದೊಮ್ಮೆ ಹಂಚಿಕೊಂಡಿದ್ದರು. ಕ್ರೀಡೆಯ ಕನಸು ಕಾಣುವ ಎಷ್ಟು ಹಳ್ಳಿಗರಿಗೆ ಇಷ್ಟೊಂದು ಹಣ ಭರಿಸುವ ಶಕ್ತಿ ಇದ್ದೀತು?

ಬಳ್ಳಾರಿಯ ಜೆಎಸ್‌ಡಬ್ಲ್ಯು ಇನ್‌ಸ್ಪೈರ್ ಸ್ಪೋರ್ಟ್ಸ್ ಅಕಾಡೆಮಿಯಲ್ಲಿ ಕೌಶಲ ಹೆಚ್ಚಿಸಿ ಕೊಂಡು, ಒಲಿಂಪಿಕ್ಸ್ ಜಾವೆಲಿನ್ ಥ್ರೋನಲ್ಲಿ ಚಿನ್ನದ ಪದಕ ಗೆದ್ದುಬಂದ ನೀರಜ್ ಚೋಪ್ರಾ ಈ ಕದಡಿದ ವಾತಾವರಣದಲ್ಲೂ ಆಮ್ಲಜನಕ ಇದೆ ಎನ್ನುವುದನ್ನು ಸಾಬೀತುಪಡಿಸಿದರು. ರಾಷ್ಟ್ರೀಯ ಶಿಬಿರದಲ್ಲಿ ಅವರು ತೋರಿದ ಬದ್ಧತೆಯಿಂದಲೇ ಇಷ್ಟು ಎತ್ತರಕ್ಕೆ ಬೆಳೆಯಲು ಅವರಿಗೆ ಸಾಧ್ಯವಾದದ್ದು. ಜೆಎಸ್‌ಡಬ್ಲ್ಯುನಲ್ಲಿ ತರಬೇತಿ ನೀಡುವ ವಿದೇಶಿ ಕೋಚ್‌ಗೆ ಏನಿಲ್ಲವೆಂದರೂ ತಿಂಗಳಿಗೆ ₹ 6 ಲಕ್ಷ ನೀಡುತ್ತಾರೆ. ಇಂತಹ ಕಡೆ ತರಬೇತಿ ಪಡೆಯುವ ಆರ್ಥಿಕ ಚೈತನ್ಯ ಬಡ ಅಥ್ಲೀಟ್‌ಗಳಿಗೆ ಇಲ್ಲವೆನ್ನುವುದೂ ಸತ್ಯ.

ನಾಲ್ಕೂವರೆ ದಶಕ ಅಥ್ಲೀಟ್‌ಗಳಿಗೆ ತರಬೇತಿ ನೀಡಿರುವ, ದ್ರೋಣಾಚಾರ್ಯ ಪ್ರಶಸ್ತಿಗೆ ಭಾಜನರಾದ ಬೀಡು ಇಲ್ಲಿನ ಏಳುಬೀಳುಗಳನ್ನು ಕಂಡಿದ್ದಾರೆ. ಅವರ ಪ್ರಕಾರ 1970–80ರ ದಶಕದಲ್ಲಿಯೇ ಕರ್ನಾಟಕದ ಕ್ರೀಡಾಕ್ಷೇತ್ರ ಉತ್ತಮವಾಗಿತ್ತು. ಈಗಿನಂತೆ ಲೆವೆಲ್ ಒನ್, ಲೆವೆಲ್ ಟು ಎಂಬ ಕೋಚ್‌ಗಳಿಗೆ ಇರುವ ತರಬೇತಿ ಆಗ ಇರಲಿಲ್ಲ. ಒಂದು ವರ್ಷ ಸ್ಪರ್ಧೆಗೆ ಅಣಿಗೊಳಿಸುವ ಸೂಕ್ಷ್ಮಗಳನ್ನೆಲ್ಲ ಕೋಚ್‌ಗಳಿಗೆ ಕಲಿಸಲಾಗುತ್ತಿತ್ತು. ಈಗ ಕ್ರೀಡಾ ಮತ್ತು ಯುವಜನ ಇಲಾಖೆಯ ಆಯಕಟ್ಟಿನಲ್ಲಿರುವ ಎಷ್ಟೋ ಅಧಿಕಾರಿಗಳಿಗೆ ಸ್ಪರ್ಧೆಗಳನ್ನು ನೋಡುವ ಆಸಕ್ತಿಯೂ ಇಲ್ಲ.

ಐಪಿಎಸ್ ಅಧಿಕಾರಿಯಾಗಿದ್ದ ಎ.ಜೆ.ಆನಂದನ್ 1970–80ರ ದಶಕದಲ್ಲಿ ಕ್ರೀಡಾ ಮತ್ತು ಯುವಜನ ಇಲಾಖೆಯಲ್ಲಿ ಮಾಡಿದ ಕೆಲಸಗಳನ್ನು ಬೀಡು ಸ್ಮರಿಸುತ್ತಾರೆ. ಎಲ್ಲ ಕೋಚ್‌ಗಳ ಹೆಸರನ್ನು ಬಾಯಲ್ಲಿಟ್ಟುಕೊಂಡಿದ್ದ ಆನಂದನ್, ಪ್ರಮುಖ ಕ್ರೀಡಾಕೂಟಗಳನ್ನು ಆಸಕ್ತಿಯಿಂದ ನೋಡುತ್ತಿದ್ದರಂತೆ. 1982ರಲ್ಲಿ ದೆಹಲಿಯಲ್ಲಿ ಏಷ್ಯನ್ ಗೇಮ್ಸ್ ಯಶಸ್ವಿಯಾಗಿ ನಡೆದಿದ್ದರಲ್ಲಿ ಅವರ ಪಾಲೂ ಇತ್ತೆನ್ನುವುದನ್ನು ನೆನೆಯುತ್ತಾರೆ. ಇಂತಹ ಅಧಿಕಾರಿಗಳ ಅಗತ್ಯ ಕರ್ನಾಟಕಕ್ಕೆ ಇದೆ ಎನ್ನುವ ಅವರ ಅನುಭವ ಮಾತು ಬರೀ ಹಳಹಳಿಕೆಯಷ್ಟೆ ಅಲ್ಲ.

ಹರಿಯಾಣದಲ್ಲಿ ಅಥ್ಲೆಟಿಕ್ಸ್‌ನ ಎಲ್ಲ ಸ್ಪರ್ಧೆಗಳಲ್ಲಿ ನುರಿತವರನ್ನು ಅಣಿಗೊಳಿಸಲು ಕೋಚ್ ಗಳಿದ್ದಾರೆ. ಇಲ್ಲಿ ಜಿಮ್ನಾಸ್ಟಿಕ್ಸ್ ಕಲಿಸಲು ಯಾರೂ ಇಲ್ಲ. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಅಂತಿಮ ಹಂತ ಪ್ರವೇಶಿಸಿದ್ದ ಶ್ರೀಹರಿ ನಟರಾಜ್, ಈಜು ಕಲಿಕೆಯಲ್ಲಿನ ಲೋಪಗಳ ಕುರಿತು ಈಗಲೂ ಮುಕ್ತವಾಗಿ ವಿಶ್ಲೇಷಿಸುತ್ತಿದ್ದಾರೆ.

ಕರ್ನಾಟಕದಲ್ಲಿ ಮುಂದಿನ ಒಲಿಂಪಿಕ್ಸ್‌ಗೆ 75 ಅರ್ಹರನ್ನು ಹೆಕ್ಕಿ, ಅಣಿಗೊಳಿಸುವ ಯೋಜನೆಯೊಂದನ್ನು ಕ್ರೀಡಾ ಸಚಿವರು ಪ್ರಕಟಿಸಿದ್ದಾರಷ್ಟೆ. ಅದು ಸಾಕಾರಗೊಳ್ಳಬೇಕಿದ್ದರೆ, ಮೂಲಸೌಕರ್ಯದ ಹುಳುಕುಗಳನ್ನೆಲ್ಲ ಮುಚ್ಚಬೇಕು. ಗ್ರಾಮೀಣ ಪ್ರತಿಭೆಗಳಿಗೆ ನೀರೆರೆಯಬೇಕು.

ಮಾಜಿ ಕ್ರೀಡಾ ಸಚಿವರ ಸಾಧನೆ https://www.prajavani.net/karnataka-news/achievement-of-the-former-sports-minister-872037.html

25 ವರ್ಷಗಳ ಹಿಂದೆ — ಗುರುವಾರ, 3-10-1996

● ನ್ಯಾಷನಲ್ ಕಾನ್ಫರೆನ್ಸ್‌ಗೆ ಬಹುಮತ

ಶ್ರೀನಗರ, ಅ. 2 (ಯುಎನ್‌ಐ, ಪಿಟಿಐ)– ಡಾ. ಫಾರೂಖ್ ಅಬ್ದುಲ್ಲಾ ಅವರ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷವು ಜಮ್ಮು– ಕಾಶ್ಮೀರ ರಾಜ್ಯ ವಿಧಾನಸಭೆಯ ಚುನಾವಣೆಯಲ್ಲಿ 54 ಸ್ಥಾನಗಳನ್ನು ಗೆದ್ದು ಸ್ಪಷ್ಟ ಬಹುಮತ ಗಳಿಸಿದ್ದು, ಆರು ವರ್ಷಗಳ ಬಳಿಕ ಮತ್ತೆ ಅಧಿಕಾರದ ಚುಕ್ಕಾಣಿ ಹಿಡಿದಿದೆ.

ಮತಎಣಿಕೆ ನಡೆದ 81 ಕ್ಷೇತ್ರಗಳ ಪೈಕಿ ನ್ಯಾಷನಲ್ ಕಾನ್ಫರೆನ್ಸ್ 54 ಸ್ಥಾನಗಳನ್ನು ಗೆದ್ದು ಪ್ರಾಬಲ್ಯ ಮೆರೆದರೆ, ಕಾಂಗ್ರೆಸ್ ಮತ್ತು ಬಿಜೆಪಿ ತಲಾ ಏಳು ಸ್ಥಾನಗಳನ್ನು ಗಳಿಸಿತು. ಸಿಪಿಎಂ, ಪ್ಯಾಂಥರ್ಸ್ ಪಾರ್ಟಿ ಹಾಗೂ ತಿವಾರಿ ಕಾಂಗ್ರೆಸ್ ತಲಾ ಒಂದು ಸ್ಥಾನ ಗಳಿಸಿದ್ದು, ಪಕ್ಷೇತರರು ಎರಡು ಸ್ಥಾನಗಳನ್ನು ಗೆದಿದ್ದಾರೆ.

50 ವರ್ಷಗಳ ಹಿಂದೆ — ಭಾನುವಾರ, 3-10-1971

● ಗಾಂಧೀಜಿ ಕನಸಿನ ಮಾನವೀಯ ವಿಶ್ವ ನಿರ್ಮಾಣಕ್ಕೆ ಗಿರಿ ಕರೆ

ನವದೆಹಲಿ, ಅ. 2– ಗಾಂಧೀಜಿ ಕನಸು ಕಂಡಿದ್ದ ದಯಾರ್ದ್ರ ವಿಶ್ವ ನಿರ್ಮಾಣ ಅಥವಾ ಭಯಾನಕವಾದ ಪರಸ್ಪರ ಕಚ್ಚಾಟದಿಂದ ಅಂತಿಮವಾಗಿ ವಿಶ್ವ ವಿನಾಶ. ಇವೆರಡರಲ್ಲಿ ಒಂದನ್ನು ಮಾನವ ಜನಾಂಗ ಈಗ ಆರಿಸಿಕೊಳ್ಳಬೇಕಾಗಿದೆ ಎಂದು ರಾಷ್ಟ್ರಪತಿ ವಿ.ವಿ. ಗಿರಿ ಇಂದು ಸೂಚಿಸಿದರು.

ಜನಜೀವನದಲ್ಲಿ ಆಧ್ಯಾತ್ಮಿಕವನ್ನು ತುಂಬುವ ಆದರ್ಶ ಕಷ್ಟಸಾಧ್ಯವಾಗಿ ಗೋಚರಿಸಬಹುದಾದರೂ, ದೀರ್ಘಾವಧಿ ನೈತಿಕ ಮೌಲ್ಯಗಳ ಆಯ್ಕೆಯ ಮೇಲೆ ವಿಶ್ವದ ಭವಿಷ್ಯ ಅವಲಂಬಿಸಿದೆ. ಕಳೆದ ಆರು ತಿಂಗಳ ಅವಧಿಯಲ್ಲಿ ಭಾರಿ ಪ್ರಚೋದನೆ ಇದ್ದರೂ, ಜನತೆ ಮತ್ತು ಸರ್ಕಾರವು ತೋರಿದ ಅಪೂರ್ವ ಸಂಯಮಕ್ಕೆ ಗಾಂಧೀಜಿ ಬೋಧಿಸಿದ ಮಾನವೀಯತೆಯೇ ಕಾರಣ ಎಂದರು.

ಗುಂಡಣ್ಣ




ಪದಬಂಧ 4737

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ಹಾಡಿನ ಧಾಟಿಯಲ್ಲೇ ಮೂಡಿದ ಒಲವು (2)
5.ಭೇದ ಭಾವವಿಲ್ಲದಿರುವಿಕೆ (5)
6.ದೂರವೇನಲ್ಲಬಿಡಿ,ಬಹಳ ಹತ್ತಿರ! (3)
7.ವಿಳಂಬವಿಲ್ಲದೆ ಸವಿದ ಮಾವಿನ ಮುರಬ್ಬ! (3)
8.ಸಂಸ್ಥೆಗಳ ಹಕ್ಕಿನ ಮೇಲೆ ಸರ್ಕಾರವು ಸ್ವಾಮ್ಯವನ್ನು ಸ್ಥಾಪಿಸುವುದು (5)
9.ಮಾಸ ದಲ್ಲೇ ಕಟ್ಟಿರುವ ಗೋರಿ (3)
10.ಕಕ್ಷದೊಳಗಿರುವ ಕೃಪಾ ದೃಷ್ಟಿ ಕಾಣುತ್ತಿದೆಯೇ? (3)
13.ಹಲ್ಲುಗಳನ್ನು ತೊಳೆಯುವುದು (5)
14.ಬಲಾತ್ಕಾರವಾಗಿ ವಶಪಡಿಸಿಕೊಳ್ಳುವುದು (2)

ಮೇಲಿಂದ ಕೆಳಕ್ಕೆ
1.ಮುಗುಳು ನಗೆಯಿದು (4)
2.ಓದು ಬರಹ ಕಲಿತವನು (3)
4.ನೇಣಿಗೇರಿಸುವ ಕಂಬವಿದು (4)
5.ಯಾವುದೇ ಅಪರಾಧ ಮಾಡದಿರುವವನು (4)
7.ಸ್ವಭಾವವನ್ನು ಹೊಗಳಿ ಹೇಳುವುದು (5)
9.ಒಳ್ಳೆಯ ಕುಲದಲ್ಲಿ ಹುಟ್ಟಿದವನು (4)
11.ನಡುವೆ ಪಣ ಒಡ್ಡಿರುವ ಜೈನ ಸನ್ಯಾಸಿ (4)
12.ಅಧೀನ ರಾಜನಿಲ್ಲಿದ್ದಾನೆ (3)



4736ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಮಧುಮಾಸ 3.ತ್ರೆಮಾ
5.ಬಡತನ 7.ಪುಸ್ತಕ
8.ವನಪಾಲಕ 11.ಉದಕ
12.ನವರಂಗ 14.ಸರಿ
15.ಪರಿಚಿತ

ಮೇಲಿಂದ ಕೆಳಕ್ಕೆ:
1.ಮನೋಬಲ 2.ಮಾವುತ
4.ಮಾದಕ 6.ನವೀನ 7.ಪುಳಕ
8.ವರ್ತಕ 9.ಲಶುನ 10.ಅಂಗಜಾತ
11.ಉಲ್ಲಾಸ 13.ವೈಯಾರಿ

ಸುಡೊಕು 5123

	6			7			9	3
	8		5	2		1	6	
1		5					8	
4			2		5			1
	9						2	
		9	3		2		4	
7			9		8	5		2
	5			4			3	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5122 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಕನ್ಹಯ್ಯ ಸೇರ್ಪಡೆ ಕಾಂಗ್ರೆಸ್‌ನಲ್ಲಿ ಬದಲಾವಣೆಗೆ ನಾಂದಿ ಹಾಡೀತೆ?’

ಬೆಂಗಳೂರು: ಸಿಪಿಐ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರೂ ಆಗಿದ್ದ ಯುವ ನಾಯಕ ಕನ್ಹಯ್ಯ ಕುಮಾರ್ ಕಾಂಗ್ರೆಸ್ ಸೇರಿರುವುದು ರಾಷ್ಟ್ರದಾದ್ಯಂತ ಚರ್ಚೆಗೆ ಗ್ರಾಸವಾಗಿದೆ. ಈ ಬೆಳವಣಿಗೆ ಕುರಿತು ‘ಕನ್ಹಯ್ಯ ಕುಮಾರ್ ಪಕ್ಷಾಂತರ: ಸಿದ್ಧಾಂತಕ್ಕೆ ಸಂದ ಸೋಲೇ?’ ಎನ್ನುವ ವಿಷಯದ ಮೇಲೆ ‘ಪ್ರಜಾವಾಣಿ’ ಶನಿವಾರ ನಡೆಸಿದ ಫೇಸ್ ಬುಕ್ ಲೈವ್ ಸಂವಾದದ ಸಂಕ್ಷಿಪ್ತ ರೂಪ ಇಲ್ಲಿದೆ.

ಸಂವಾದ ವೀಕ್ಷಣೆಗೆ: *facebook.com/prajavani.net/videos*

‘ಮೊದಲು ನಾಯಕತ್ವದ ಪ್ರಶ್ನೆ ಇತ್ಯರ್ಥವಾಗಬೇಕು’



ಎಡ ಸಿದ್ಧಾಂತದ ನಾಯಕರು ಕಾಂಗ್ರೆಸ್ ಸೇರುವುದು ಹೊಸತಲ್ಲ. ಮೋಹನ ಕುಮಾರಮಂಗಲಂ ಅವರಂಥ ಹಲವರು ಸೇರಿದ್ದಾರೆ. ಇದು ತತ್ವ, ಸಿದ್ಧಾಂತದ ಪ್ರಶ್ನೆ ಅಲ್ಲ. ಅಧಿಕಾರದ ಪ್ರಶ್ನೆ ಮಾತ್ರ. ತನ್ನ ರಾಜಕೀಯ ಭವಿಷ್ಯ ಯಾವ ಪಕ್ಷದಿಂದ ಗಟ್ಟಿಯಾಗಬಹುದು ಎಂಬುದನ್ನು ಆಧರಿಸಿ ನಿರ್ಧರಿಸುತ್ತಾರೆ. ಕನ್ಹಯ್ಯ ಕಾಂಗ್ರೆಸ್ ಸೇರುವ ಸಮಯದಲ್ಲೇ ಪಂಜಾಬ್, ಛತ್ತೀಸಗಢ, ರಾಜಸ್ಥಾನ ಕಾಂಗ್ರೆಸ್‌ನಲ್ಲಿ ಋಣಾತ್ಮಕ ಬೆಳವಣಿಗೆ ಆಗಿದೆ. ಜಿ-23 ನಾಯಕರೂ ಅಪಸ್ವರ ಎತ್ತಿದ್ದಾರೆ. ಇದೆಲ್ಲದರಿಂದಾಗಿ ಕನ್ಹಯ್ಯ ಸೇರ್ಪಡೆ ನಿರೀಕ್ಷಿತಷ್ಟು ಸಂಚಲನ ಮೂಡಿಸಿಲ್ಲ.

ಕಾಂಗ್ರೆಸ್‌ನಲ್ಲಿ ರಾಷ್ಟ್ರೀಯ ನಾಯಕತ್ವದ ಸಮಸ್ಯೆ ಇದೆ. ಅದು ತೀರ್ಮಾನ ಆಗುವವರೆಗೂ ಉಳಿದ ಎಲ್ಲ ಸಮಸ್ಯೆಗಳೂ ಮುಂದುವರಿಯುತ್ತವೆ. ಪಕ್ಷದ ಹೈಕಮಾಂಡ್ ಸಾಮರ್ಥ್ಯದ ಕುರಿತೂ ಪ್ರಶ್ನೆ ಹುಟ್ಟಿದೆ. ಕಾಂಗ್ರೆಸ್ ಅನೇಕ ರಾಜ್ಯಗಳಲ್ಲಿ ಇದರಿಂದಾಗಿಯೇ ಅವಕಾಶ ಕಳೆದುಕೊಂಡಿದೆ.

ನಾಯಕರನ್ನು ಆಮದು ಮಾಡಿಕೊಳ್ಳಬೇಕೇ? ಪಕ್ಷದೊಳಗೆ ನಾಯಕತ್ವ ಸೃಷ್ಟಿ ಅಸಾಧ್ಯವೇ? ಆಂತರಿಕ ಸಂಘರ್ಷಕ್ಕೆ ಅಂತ್ಯ ಹಾಡಲು ಸಾಧ್ಯವಿಲ್ಲವೆ ಎಂಬ ಪ್ರಶ್ನೆಗಳಿಗೆ ಕಾಂಗ್ರೆಸ್ ಉತ್ತರ ಕಂಡುಕೊಳ್ಳಬೇಕಿದೆ.

ಸಂದೀಪ್ ಶಾಸ್ತ್ರಿ, ರಾಜಕೀಯ ವಿಶ್ಲೇಷಕ

‘ಕಾಂಗ್ರೆಸ್, ಕನ್ಹಯ್ಯ ಇಬ್ಬರಿಗೂ ನಷ್ಟವೆ’



ಕನ್ಹಯ್ಯ ಕಾಂಗ್ರೆಸ್ ಸೇರಿರುವುದನ್ನು ಕಾಂಗ್ರೆಸ್ ಅಥವಾ ಬಿಜೆಪಿ ನಾಯಕರ ಪಕ್ಷಾಂತರದಂತೆ ಗುರುತಿಸಲು ಆಗುವುದಿಲ್ಲ. ಬಂಡವಾಳಶಾಹಿ ವಿರುದ್ಧ ಇದ್ದವರು ಎಂದು ಗುರುತಿಸಿಕೊಂಡಿದ್ದವರು ಕನ್ಹಯ್ಯ. ಈಗ ಅವರು ಸೈದ್ಧಾಂತಿಕ ಬದ್ಧತೆಯಿಂದ ದೂರ ಸರಿದು ಕಾಂಗ್ರೆಸ್ ಎಂಬ ಅನುಕೂಲಕರ ಜಾಗಕ್ಕೆ ಹೋಗಿದ್ದಾರೆ.

ಕನ್ಹಯ್ಯ ಈಗ ಮಾತನಾಡುತ್ತಿರುವುದನ್ನು ನೋಡಿದರೆ ಅವರು ತನ್ನ ರಾಜಕೀಯ ಮಹತ್ವವನ್ನು ಕಳೆದುಕೊಳ್ಳುತ್ತಾರೆ. ಇಂತಹ ರಾಜಕೀಯ ಬೆಳವಣಿಗೆಯಿಂದ ಐಕ್ಯ ಹೋರಾಟಕ್ಕೆ ಹೊಡೆತ ಬೀಳುತ್ತದೆ. ಇದಕ್ಕೆ ರಾಹುಲ್ ಗಾಂಧಿ ಮತ್ತು ಕನ್ಹಯ್ಯ ಕುಮಾರ್ ಇಬ್ಬರೂ ಇದಕ್ಕೆ ಕಾರಣರಾಗುತ್ತಾರೆ. ಕನ್ಹಯ್ಯಗೆ ಬದ್ಧತೆ ಇದ್ದರೆ ರಾಹುಲ್ ಜತೆಗಿನ ಗೆಳೆತನ ಬಳಸಿಕೊಂಡು ಐಕ್ಯ ಹೋರಾಟವನ್ನು ಬಲಪಡಿಸಬಹುದಿತ್ತು. ಎಡ ಪಕ್ಷಗಳು ವಿಚಲಿತರಾಗುವುದಿಲ್ಲ. ಕನ್ಹಯ್ಯ ಮಾಡಿದ ತಪ್ಪಿಗೆ ಅವರೇ ಉತ್ತರಿಸಬೇಕಾದ ಕಾಲ ಬರಬಹುದು.

ಭ್ರಷ್ಟರು, ಜಾತಿವಾದಿಗಳು ಸಾಲು, ಸಾಲಾಗಿ ಬಿಜೆಪಿ ಸೇರುತ್ತಿದ್ದಾರೆ. ಅವರ ಜತೆಯಲ್ಲೇ ಕನ್ಹಯ್ಯ ಅವರಂತಹ ಯುವ ನಾಯಕರೂ ಸೇರಿದ್ದಾರೆ. ಇದರಿಂದ ಯಾವ ಲಾಭವೂ ಆಗುವುದಿಲ್ಲ. ಕಾಂಗ್ರೆಸ್ ಮತ್ತು ಕನ್ಹಯ್ಯ ಇಬ್ಬರಿಗೂ ನಷ್ಟವೇ ಆಗಲಿದೆ.

– **ಮುನೀರ್ ಕಾಟಿಪಳ್ಳ,** ಡಿವೈಎಫ್ಐ ರಾಜ್ಯ ಘಟಕದ ಅಧ್ಯಕ್ಷ

ಪ್ರಜಾವಾಣಿ ಸಂವಾದ

‘ಕಾಂಗ್ರೆಸ್ ಕೂಡ ಬದಲಾವಣೆಗೆ ಸಜ್ಜಾಗುತ್ತಿದೆ’



ಕನ್ಹಯ್ಯ ಸಿದ್ಧಾಂತದ ಆಧಾರದ ಮೇಲೆಯೇ ಕಾಂಗ್ರೆಸ್‌ಗೆ ಬಂದಿದ್ದಾರೆ. ಕಾಂಗ್ರೆಸ್ ಯಾವತ್ತೂ ಬಂಡವಾಳಶಾಹಿಗಳ ಪರವಾಗಿ ಇರಲಿಲ್ಲ. ಬಡವರನ್ನು ಮೇಲೆತ್ತುವುದಕ್ಕೆ ನಿರಂತರವಾಗಿ ಕೆಲಸ ಮಾಡುತ್ತಾ ಬಂದಿದೆ. ಸಾಮಾಜಿಕ ನ್ಯಾಯದ ಪರ ಹೋರಾಡುತ್ತಿರುವುದ ಪಕ್ಷ. ನಮ್ಮ ಪಕ್ಷ ಈಗ ದೇಶಕ್ಕೆ ಅನಿವಾರ್ಯವಾಗಿದೆ.

ಎಲ್ಲ ಪಕ್ಷಗಳಲ್ಲೂ ಆಂತರಿಕವಾದ ಸಮಸ್ಯೆಗಳಿವೆ. ಯಾವ ಪಕ್ಷವೂ ಅದಕ್ಕೆ ಹೊರತಾಗಿಲ್ಲ. ಕಾಂಗ್ರೆಸ್‌ನಲ್ಲಿ ಕೆಲವು ನಾಯಕರು ಆರ್‌ಎಸ್‌ಎಸ್, ಬಿಜೆಪಿ ಬಗ್ಗೆ ಮೃದು ಧೋರಣೆ ಹೊಂದಿರಬಹುದು. ಆದರೆ, ಕಾಂಗ್ರೆಸ್‌ನಲ್ಲೂ ಒಂದು ಬದಲಾವಣೆ ಆಗಬಹುದು.

ಕಾಂಗ್ರೆಸ್ ತನ್ನ ಸಿದ್ಧಾಂತಕ್ಕೆ ಗಟ್ಟಿಯಾಗಿ ಅಂಟಿಕೊಂಡಿದೆ. ಕಾಂಗ್ರೆಸ್ ಈಗಲೂ ವಿರೋಧ ಪಕ್ಷಗಳ ಸಾಲಿನಲ್ಲಿ ಮುಂಚೂಣಿಯಲ್ಲಿದೆ. ದೂರದಲ್ಲಿ ನಿಂತು ನೋಡುವುದೇ ಒಂದು ನಿಲುವು ಆಗಬಾರದು. ಕನ್ಹಯ್ಯ ಕಾಂಗ್ರೆಸ್ ತನ್ನ ಆಯ್ಕೆ ಎಂಬುದನ್ನು ನಿರ್ಧರಿಸಿದ್ದಾರೆ. ಅವರನ್ನು ಬಿಹಾರಕ್ಕೆ ಸೀಮಿತಗೊಳಿಸಿ ನೋಡುವುದು ಸರಿಯಲ್ಲ. ಕನ್ಹಯ್ಯ ಸೇರಿದಂತೆ ಯುವ ನಾಯಕರ ಸೇರ್ಪಡೆಯಿಂದ ಕಾಂಗ್ರೆಸ್ ಮತ್ತು ದೇಶ ಇಬ್ಬರಿಗೂ ಒಳಿತಾಗಲಿದೆ.

– **ಆರ್. ಮಂಜುಳಾ ನಾಯ್ಡು,** ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ

‘ಮುಕ್ತವಾಗಿ ಕೆಲಸ ಮಾಡಲು ಸಾಧ್ಯವೆ?’



ಸೈದ್ಧಾಂತಿಕ ದೃಷ್ಟಿಯಿಂದ ಇದು ದೊಡ್ಡ ಬದಲಾವಣೆ. ಕಾಂಗ್ರೆಸ್ ಬಂಡವಾಳಶಾಹಿ ವರ್ಗಲಕ್ಷಣ ಹೊಂದಿರುವ ಪಕ್ಷ. ಸ್ವಾತಂತ್ರ್ಯಕ್ಕೂ ಮೊದಲೇ ಅದು ಬಂಡವಾಳಶಾಹಿಗಳ ಕೈವಶ ಆಗಿತ್ತು. ಕನ್ಹಯ್ಯ ವಿರೋಧಿಸಿಕೊಂಡು ಬಂದ ಉದಾರೀಕರಣ, ಖಾಸಗೀಕರಣದ ರೂವಾರಿಯೇ ಕಾಂಗ್ರೆಸ್. ಇದು ಸಿಪಿಐ ಅಥವಾ ಮಾರ್ಕ್ಸ್‌ವಾದದ ಸೋಲು ಎಂದು ವ್ಯಾಖ್ಯಾನಿಸಲಾಗದು. ಈಗ ಉತ್ಸಾಹದಲ್ಲಿ ಕನ್ಹಯ್ಯ ಕಾಂಗ್ರೆಸ್ ಸೇರಿದ್ದಾರೆ. ಅಲ್ಲಿ ಬಿಜೆಪಿ ವಿರುದ್ಧ ಕೆಲಸ ಮಾಡಲು ಅವರಿಗೆ ಅವಕಾಶ ಸಿಗುತ್ತಾ? ಕಾಂಗ್ರೆಸ್‌ನ ಒಳಗಿರುವ ಗುಂಪುಗಳು ಮುಕ್ತವಾಗಿ ಕೆಲಸ ಮಾಡಲು ಅವರಿಗೆ ಅವಕಾಶ ನೀಡುತ್ತವೆಯೆ ಎಂಬ ಪ್ರಶ್ನೆ ಇದೆ.


ಸ್ವಾತಂತ್ರ್ಯದ ನಂತರದಲ್ಲಿ ಹೋರಾಟ ನಡೆಸಿದ ಅನುಭವ ಕಾಂಗ್ರೆಸ್‌ಗೆ ಇಲ್ಲ. ಬಿಜೆಪಿಯ ಜನವಿರೋಧಿ ನಿಲುವುಗಳನ್ನು ಬಿಡಿ, ಬಿಡಿ ಹೋರಾಟಗಾರರು, ರೈತ ಸಂಘಟನೆಗಳು ವಿರೋಧಿಸುತ್ತಿವೆ. ಕಾಂಗ್ರೆಸ್ ತನ್ನ ಕಾರ್ಯಸೂಚಿಯನ್ನು ಸ್ಪಷ್ಟವಾಗಿ ನಿರ್ಧರಿಸಿಕೊಳ್ಳಬೇಕು. ಸಂವಿಧಾನಾತ್ಮಕ ಸಂಸ್ಥೆಗಳ ಉಳಿವು, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಹೋರಾಡಲೇಬೇಕು. ಕಾಂಗ್ರೆಸ್ ತನ್ನ ಸಿದ್ಧ ಮಾದರಿಗಳನ್ನು ಬದಿಗಿರಿಸಿ ಮುನ್ನಡೆಯಬೇಕು. ಎರಡೂವರೆ ವರ್ಷದಲ್ಲಿ ಅಂತಹ ಹೋರಾಟ ಕಟ್ಟಬೇಕು.

– **ಬಿ.ಆರ್. ಮಂಜುನಾಥ್,** ಸಾಮಾಜಿಕ ಕಾರ್ಯಕರ್ತ

ಮೈಸೂರು ಮೃಗಾಲಯಕ್ಕೆ ಹೊಸ ‘ಅತಿಥಿ’!

ಪ್ರಜಾವಾಣಿ ವಾರ್ತೆ





ಒರಾಂಗುಟಾನ್, ಗೊರಿಲ್ಲಾ

ಮೈಸೂರು: ಇಲ್ಲಿನ ಚಾಮರಾಜೇಂದ್ರ ಮೃಗಾಲಯಕ್ಕೆ ಜರ್ಮನಿ, ಮಲೇಷ್ಯಾ ಹಾಗೂ ಸಿಂಗಪುರದಿಂದ ಹೊಸ ‘ಅತಿಥಿ’ಗಳಾಗಿ ಎರಡು ಗೊರಿಲ್ಲಾ (ಗಂಡು) ಹಾಗೂ ನಾಲ್ಕು ಒರಾಂಗುಟಾನ್ (2 ಹೆಣ್ಣು-2 ಗಂಡು) ಸೇರ್ಪಡೆಗೊಂಡಿವೆ.

ಜರ್ಮನಿಯಿಂದ ಎರಡು ಗೊರಿಲ್ಲಾ (ತಾಬೊ–14 ವರ್ಷ, ಡೆಂಬ–8 ವರ್ಷ), ಮಲೇಷ್ಯಾದಿಂದ ಒರಾಂಗುಟಾನ್ (ಅಫಾ–5 ವರ್ಷ, ಮಿನ್ನಿ–7 ವರ್ಷ) ಹಾಗೂ ಸಿಂಗಪುರದಿಂದ ಒರಾಂಗುಟಾನ್ (ಮೆರ್ಲಿನ್–17 ವರ್ಷ, ಅಟಿನ–13 ವರ್ಷ) ತರಲಾಗಿದೆ. ಅತಿ ಬುದ್ಧಿವಂತ, ಅಪರೂಪದ ಒರಾಂಗುಟಾನ್ ಕೋತಿ ಪ್ರಭೇದಕ್ಕೆ ಸೇರಿದ್ದು, ಚಿಂಪಾಂಜಿ, ಗೊರಿಲ್ಲಾ ಹೋಲುತ್ತವೆ. 50 ವರ್ಷಗಳ ಹಿಂದೆ ಒಂದು ಜೋಡಿ ಇಲ್ಲಿತ್ತು.

‘ವಿನಿಮಯ ಯೋಜನೆ ಅಡಿಯಲ್ಲಿ ಎರಡು ಜಿರಾಫೆ ನೀಡಿ, ಒರಾಂಗುಟಾನ್ ತರಲಾಗಿದೆ. ಗೊರಿಲ್ಲಾ ಬದಲಿಗೆ ಪ್ರಾಣಿ ನೀಡಿಲ್ಲ’ ಎಂದು ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಎಲ್.ಆರ್. ಮಹದೇವ ಸ್ವಾಮಿ ‘ಪ್ರಜಾವಾಣಿ’ಗೆ ತಿಳಿಸಿದರು.

ಒರಾಂಗುಟಾನ್‌ಗಾಗಿ ವಿಶೇಷ ಮನೆ ನಿರ್ಮಿಸಲಾಗಿದೆ. ತಿಂಗಳಾಂತ್ಯದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ ಎಂದು ಅವರು ತಿಳಿಸಿದರು.

ದೇಣಿಗೆ: ‘ಇನ್ಫೊಸಿಸ್ ಫೌಂಡೇಷನ್‌ನ ಸುಧಾಮೂರ್ತಿ ₹ 20 ಲಕ್ಷ ದೇಣಿಗೆ ನೀಡಿದ್ದಾರೆ’ ಎಂದು ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಅಜಿತ್ ಕುಲಕರ್ಣಿ ತಿಳಿಸಿದ್ದಾರೆ.

ದಿನ ಭವಿಷ್ಯ

ಭಾನುವಾರ ಅಕ್ಟೋಬರ್ 3, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಹಸ್ತೆ ದ್ವಾದಶೀ ಗಂ. 33-6 (ರಾ. 7-29) ಭಾನುವಾರ ನಿತ್ಯ ನಕ್ಷತ್ರ ಮಖೆ ಗಂ. 49-10 (ರಾ. 1-55) ಸಾಧ್ಯ ನಾಮ ಯೋಗ ಗಂ. 23-17 ಕೌಲವ ಕರಣ ಗಂ. 2-59 ವಿಷ ಗಂ. 18-9 ಅಮೃತ ಗಂ 42-33 : ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00 ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30: ಸೂರ್ಯೋದಯ: 6-12 ಸೂರ್ಯಾಸ್ತ: 6-06 ಅದೃಷ್ಟ ಸಂಖ್ಯೆ 27

ಮೇಷ: ಹೊಸ ಉದ್ಯಮದ ಕೆಲಸಗಳು ಪೂರ್ಣಗೊಂಡು ನೆಮ್ಮದಿ. ಮಕ್ಕಳಿಗೆ ವಿವಾಹ ವಿಷಯದಲ್ಲಿ ನೆಂಟರಿಂದ ಒತ್ತಾಯ ಪೂರ್ವಕ ಪ್ರಸ್ತಾಪಗಳು ಬರಲಿದೆ. ಸಾಲದಿಂದ ಮುಕ್ತಿ ಹೊಂದಿ ನಿರಾಳತೆ.

ವೃಷಭ: ತರಕಾರಿ ಹಣ್ಣುಗಳ ವ್ಯಾಪಾರಸ್ಥರಿಗೆ ಬಹು ಬೇಡಿಕೆಯಿಂದಾಗಿ ಅಧಿಕ ಲಾಭ. ಪತ್ನಿ ವರ್ಗದವರ ಮನೆಗಳಿಗೆ ಕುಟುಂಬ ಸಮೇತರಾಗಿ ಭೇಟಿ ನೀಡುವ ಸಾಧ್ಯತೆ. ಧಾನ್ಯ ವ್ಯವಹಾರದಲ್ಲಿ ಸ್ವಲ್ಪಮಟ್ಟಿನ ಹಿನ್ನಡೆ.

ಮಿಥುನ: ಹಂತಹಂತವಾಗಿ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಬಂಧುಗಳ ಆಗಮನದಿಂದ ಸಂತೋಷದ ವಾತಾವರಣ. ಸಂಬಂಧಿಕರೊಂದಿಗೆ ಸುದೀರ್ಘ ಆಪ್ತ ಸಮಾಲೋಚನೆಯಿಂದಾಗಿ ಬಾಂಧವ್ಯದಲ್ಲಿ ವೃದ್ಧಿ.

ಕರ್ಕಾಟಕ: ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸಂಪನ್ಮೂಲಗಳ ಕ್ರೋಢೀಕರಣಕ್ಕಾಗಿ ಬ್ಯಾಂಕ್ ಮುಂತಾದ ಹಣಕಾಸು ಸಂಸ್ಥೆಗಳ ಮೊರಹೋಗಬೇಕಾದೀತು. ದೂರದ ಪ್ರಯಾಣ ಮಾಡಬೇಕಾದೀತು.

ಸಿಂಹ: ಪ್ರಾಪ್ತ ವಯಸ್ಕರು ವೈವಾಹಿಕ ಜೀವನಕ್ಕೆ ಕಾಲಿಡಲು ಮಾಡಿದ ಪ್ರಯತ್ನಗಳು ಫಲ ನೀಡಲಿವೆ. ಗಣ್ಯರೊಂದಿಗೆ ಸಮಾರಂಭದಲ್ಲಿ ಭಾಗಿ. ನಿಮ್ಮ ಸಹಾಯ ಸಲಹೆ ಕೋರಿ ಬರುವವರಿಗೆ ಸಹಾಯ ನೀಡಿ.

ಕನ್ಯಾ: ಮನೆಯವರ ಅಸಮ್ಮತಿಯ ನಡುವೆಯೂ ಉದ್ಯೋಗದ ಸಲುವಾಗಿ ದೂರದ ಪ್ರಯಾಣ ಮಾಡಬೇಕಾದೀತು. ಪತ್ನಿವರ್ಗದವರಿಂದ ಸಹಾಯ ದೊರಕಲಿದೆ.

ತುಲಾ: ಚಿನ್ನಾಭರಣಗಳ ವ್ಯವಹಾರ ಪ್ರಾರಂಭಿಸಲು ಉತ್ತಮ ದಿನವಾಗಲಿದೆ. ಲೆಕ್ಕಪತ್ರ ಪರಿಶೀಲನೆಯಲ್ಲಿ ಹೆಚ್ಚಿನ ಕಾಲ ಕಳೆಯಬೇಕಾದೀತು. ಉತ್ತಮ ಆದಾಯವನ್ನು ಹೊಂದುವಿರಿ.

ವೃಶ್ಚಿಕ: ತಂದೆ ತಾಯಿಗಳಿಗೆ ಮಕ್ಕಳ ಸಲುವಾಗಿ ವಿದೇಶ ಪ್ರಯಾಣ ಯೋಗ. ಸತ್ಪುರುಷರ ಸಂದರ್ಶನ ಮಾಡುವ ಸಾಧ್ಯತೆ. ಅಧ್ಯಯನದಲ್ಲಿಯ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣಕ್ಕೆ ಮಾರ್ಗವಾಗಲಿದೆ.

ಧನು: ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ ಬೆಳೆಸಿಕೊಳ್ಳುವಿರಿ. ಲೋಕೋಪಯೋಗಿ ಇಲಾಖೆ, ತಾಂತ್ರಿಕ ಇಲಾಖೆಯ ಕಂಪ್ಯೂಟರ್ ವಿಭಾಗದವರಿಗೆ ಭತ್ಯೆಯಲ್ಲಿ ಹೆಚ್ಚಳ.

ಮಕರ: ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಹರಿಸಬೇಕಾದೀತು. ನೆರೆಯವರೊಂದಿಗೆ ಸ್ನೇಹ ಸಂಬಂಧಗಳ ವೃದ್ಧಿ. ಮನೆ ಬದಲಾವಣೆ ವಿಚಾರ ಚರ್ಚೆಗೆ ಬರಲಿದೆ. ಅತಿಯಾದ ಪ್ರಯಾಣದಿಂದಾಗಿ ದೇಹಾಯಾಸ.

ಕುಂಭ: ಜಮೀನಿನ ಕೆಲಸ ಕಾರ್ಯಗಳು ಭರದಿಂದ ಸಾಗುವುದರ ಜೊತೆಗೆ ಕಾಮಗಾರಿಗಳು ಹೆಚ್ಚಳಗೊಳ್ಳುವವು. ಹಣಕಾಸು ಸಂಸ್ಥೆಗಳಿಂದ ಸಹಾಯ ಪಡೆಯುವ ಅವಶ್ಯಕತೆ ನೀಗಲಿದೆ.

ಮೀನ: ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾದೀತು. ಸಂಸಾರದಲ್ಲಿ ನೆಮ್ಮದಿ. ಅನಗತ್ಯ ಸುತ್ತಾಟದಿಂದಾಗಿ ದೇಹಾಲಾಸ್ಯ. ಗುರುದೇವತಾ ದರ್ಶನ ಮಾಡುವ ಸಾಧ್ಯತೆ.

ನಿಮ್ಮ ಜನ್ಮದಿನ 3-ಅಕ್ಟೋಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಅಸಾಮಾನ್ಯ ಬುದ್ಧಿಮತ್ತೆ ಹೊಂದಿರುವವರು ನೀವಾಗಿದ್ದು, ಅನೇಕರು ನಿಮ್ಮ ಸಲಹೆ ಸಹಕಾರಗಳಿಗಾಗಿ ಕಾದು ನಿಲ್ಲುವರು. ನಿಮ್ಮ ಸಜ್ಜನಿಕೆಯಿಂದ ಘನ ವ್ಯಕ್ತಿತ್ವವು ರೂಪುಗೊಂಡು ಉತ್ತಮ ನಾಯಕರಾಗುವ ಲಕ್ಷಣಗಳು ಕಂಡುಬರುತ್ತಿದೆ.

7ರಿಂದ ‘ಮಂಗಳೂರು ದಸರಾ’

ಪ್ರಜಾವಾಣಿ ವಾರ್ತೆ

ಮಂಗಳೂರು: ನಗರದ ಕುದ್ರೋಳಿ ಗೋಕರ್ಣನಾಥ ಕ್ಷೇತ್ರದ ವತಿಯಿಂದ ನಡೆಯುವ ‘ಮಂಗಳೂರು ದಸರಾ’ವನ್ನು ಈ ಬಾರಿಯೂ ಕೋವಿಡ್ ಮಾರ್ಗಸೂಚಿ ಪಾಲನೆಯೊಂದಿಗೆ ಅ.7ರಿಂದ ಅ.16ರವರೆಗೆ ನಡೆಸಲು ಸಿದ್ಧತೆ ನಡೆಸಲಾಗಿದೆ.

‘ನಮ್ಮ ದಸರಾ ನಮ್ಮ ಸುರಕ್ಷೆ’ ಎಂಬ ಘೋಷವಾಕ್ಯದಡಿ ದಸರಾ ಕಾರ್ಯಕ್ರಮ ನಡೆಯಲಿದೆ. ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರತಿದಿನ ನಡೆಯಲಿವೆ. ಅ. 15ರಂದು ರಾಜಬೀದಿ ಮೆರವಣಿಗೆ ಇಲ್ಲದೆ, ಶಾರದಾ ಮೂರ್ತಿಯ ವಿಸರ್ಜನೆಯನ್ನು ಕಳೆದ ವರ್ಷದಂತೆ ಈ ವರ್ಷವೂ, ಕ್ಷೇತ್ರದ ಆವರಣದಲ್ಲೇ ನಡೆಸಲು ನಿರ್ಧರಿಸಲಾಗಿದೆ ಎಂದು ಕ್ಷೇತ್ರಾಡಳಿತ ಮಂಡಳಿಯ ಅಧ್ಯಕ್ಷ ಎಚ್.ಎಸ್. ಸಾಯಿರಾಂ ಸುದ್ದಿಗೋಷ್ಠಿಯಲ್ಲಿ ಶನಿವಾರ ತಿಳಿಸಿದರು.

1ನೇ ವರ್ಷದ ಪುಣ್ಯ ಸ್ಮರಣೆ



ಡಿ. ವಿಶ್ವನಾಥ್
(ನಿವೃತ್ತ ಬೆಸ್ಕಾಂ ನೌಕರರು)
ನಿಧನ : 03.10.2021

ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರು, ನಿಮ್ಮ ಸವಿನೆನಪು ನಮ್ಮ ಹೃದಯದಲ್ಲಿ ಹಚ್ಚ ಹಸಿರಾಗಿ ಉಳಿದಿದೆ.
ನಿಮ್ಮ ಆತ್ಮಕ್ಕೆ ಚಿರಶಾಂತಿ ಕರುಣಿಸಲೆಂದು ಭಗವಂತನಲ್ಲಿ ಸದಾ ಪ್ರಾರ್ಥಿಸುವ ಸದಾ ನಿಮ್ಮನ್ನು ನೆನೆದು ದುಃಖ ಭರಿತರಾಗಿರುವ ಪತ್ನಿ: ಭಾಗ್ಯಲಕ್ಷ್ಮಿ, ಮಕ್ಕಳು: ಮಾನಸ, ಅಕ್ಷಯ, ಆಕರ್ಷ್ ಮೊಮ್ಮಕ್ಕಳು: ಚಿನ್ನು ಸೋನು ಮತ್ತು ಕುಟುಂಬ ವರ್ಗದವರು.

ಭಾವಪೂರ್ಣ ಶ್ರದ್ಧಾಂಜಲಿ



ಜನನ : 29–12–1933
ನಿಧನ : 02–10–2021

ಶ್ರೀಮತಿ ಎ.ಬಿ. ಗೌರಮ್ಮನವರು

ದಿವಂಗತ ಎ.ಎಂ. ಬಸವೇಗೌಡರವರ ಧರ್ಮಪತ್ನಿ (ಮಾಜಿ ಶಾಸಕರು)
ತಿಪ್ಪನಹಳ್ಳಿ ಎಸ್ಟೇಟ್, ಚಿಕ್ಕಮಗಳೂರು

ಶ್ರೀಯುತರು ಶಿವೈಕ್ಯರಾದರೆಂದು ನಾವು ತೀವ್ರ ದುಃಖದಿಂದ ತಿಳಿಸುತ್ತಿದ್ದೇವೆ

ಇಂತಿ ದುಃಖತಪ್ತರು
ಕುಟುಂಬ ವರ್ಗದವರು

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮ ಮನೆ, ಕಛೇರಿಯ ಮೇಲ್ಛಾವಣಿ, ಸಂಪ್, ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ರಿಯಲ್ ಎಸ್ಟೇಟ್ ಬೈಯಿಂಗ್

Commerical

Multiple Locations

ರೆಡಿಮೇಡ್, ನಾನ್ ವೆಜ್, ಸೂಪರ್ ಮಾರ್ಕೆಟ್, ಕೆಫೆ ಇತ್ಯಾದಿಗಳಿಗೆ ಚಿಲ್ಲರೆ ಸ್ಥಳಗಳು ಬೇಕಾಗಿದೆ. 500 ರಿಂದ 2500 ಅಡಿ ಬೆಂಗಳೂರಿನ ಎಲ್ಲಾ ಪ್ರದೇಶಗಳು. multicityconsultants.com ನಲ್ಲಿ ವಿವರಗಳನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿ ಅಥವಾ +917619311666 +919945711666 +918040930707ಗೆ ಕರೆಮಾಡಿ

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

Mysore

ಹೆಚ್.ಡಿ. ಕೋಟೆ ರಸ್ತೆ ಮತ್ತು ಗದ್ದಿಗೆ ನಡುವಿನ ರಾಷ್ಟ್ರೀಯ ಹೆದ್ದಾರಿಯ ಪಕ್ಕದಲ್ಲಿರುವ 4ಎಕರೆ ವಿಸ್ತೀರ್ಣದ ಫಾರ್ಮ್ ಹೌಸ್ ಸರ್ವೆಂಟ್ ಮನೆ, ಶೆಡ್, 2ಬೋರ್‌ವೆಲ್‌ಗಳು ಪ್ರತ್ಯೇಕ ಟ್ರಾನ್ಸ್ ಫಾರ್ಮರ್ ಹಾಗೂ ಎಲ್ಲ ಸೌಕರ್ಯಗಳನ್ನು ಹೊಂದಿದ್ದು ಮಾರಾಟಕ್ಕಿದೆ, ಸಂಪರ್ಕಿಸಿ: 9731051965

Out-Station

ಹೂಡಿಕೆದಾರರಿಗೆ ಶುಭಸುದ್ದಿ 600ಎಕರೆ ಮೆಗಾ ಗೇಟೆಡ್ ಫಾರಂ ಲ್ಯಾಂಡ್ ಪ್ರಾಜೆಕ್ಟ್@ ನಾರಾಯಣಖೇಡ್ (ಸಂಗಾರೆಡ್ಡಿ,ತೆಲಂಗಾಣ ರಾಜ್ಯ) ನಾಗಪುರ ಹೈವೆ, ಬೀದರ್ ವಿಮಾನ ನಿಲ್ದಾಣದಿಂದ 30 ಕಿ.ಮಿ. ಪ್ರತಿ ಯೂನಿಟ್ 605 ಚ.ಯಾ ಜೊತೆಗೆ 30 ರಕ್ತಚಂದನ, 20ವಿವಿಧ ಹಣ್ಣುಗಳ ಮರಗಳು ದರ 771/- ಪ್ರತಿ ಚ.ಯಾ ಫೋನ್: 9553404329

ಉದ್ಯೋಗಾವಕಾಶ

Call Centre

ಮಹಿಳಾ ಟೆಲಿಕಾಲರ್ಸ್ ಬೇಕಾಗಿದ್ದಾರೆ. ಮನೆಯಿಂದಲೇ ಕೆಲಸ. ಸಂಬಳ: ರೂ. 7,000 ದಿಂದ 10,000/- +ಇನ್ಸೆಂಟಿವ್. +91 9159922477

Domestic Helpers / Housekeeping

JOIN NOW in India's Largest House Keeping Company and earn 30,000 to 40,000 per month. For more details give a missed call at this number: 08045686600

Drivers

ಕವಿ ಲಾಜಿಸ್ಟಿಕ್ಸ್ : ಬೆಂಗಳೂರು ಲೋಕಲ್ ನಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು21: 9738421001, 9886683188

General

✓ ಕರ್ನಾಟಕದಾದ್ಯಂತ ಹೆಸರಾಂತ 450 ಕಂಪನಿ ಹಾಗೂ Office ಕೆಲಸಕ್ಕೆ ಯುವಕ ಯುವತಿಯರು ಬೇಕಾಗಿದ್ದಾರೆ ನೇರನೇಮಕಾತಿ, ವಸತಿಯೂಟದೊಂದಿಗೆ 16,200-65,000/- 7022366461, 8904049301

✓ ತಕ್ಷಣ ಬೇಕಾಗಿದ್ದಾರೆ ಮಾರ್ಕೆಟಿಂಗ್ ಅಲ್ಲ MNC, TVS, TOYOTA, BRITANIYA ಕಂಪನಿಗಳಿಗೆ 7th,SSLC, PUC, Degree, DIPLOMA ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಊಟದೊಂದಿಗೆ ESI/PFನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 7829400441, 7829416611

✓ ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC, PUC,Degree ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಊಟದೊಂದಿಗೆ ESI/PF ನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 8884486100, 7829919947

✓ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟರ್ಸ್, ಹೊಂಡ ಆನ್‌ಲೈನ್ ಕಂಪನಿಗಳಿಗೆ 10ನೇ, ಪಿಯುಸಿ, ಡಿಗ್ರಿ, ಐಟಿಐ, ಡಿಪ್ಲೊಮಾದವರು 16,600-62000/-. ವಸತಿಯೂಟದೊಂದಿಗೆ 8123884588, 8123884788

ಪುರುಷರು / ಮಹಿಳೆಯರು ಸಾಮಾನ್ಯ ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆನ್ ಲೈನ್‌ನಲ್ಲಿ ಕೆಲಸಮಾಡಿ ಆದಾಯಗಳಿಸಲು ಕರೆಮಾಡಿ : 8762024160 .

Marketing & Sales

LOOKING FOR Sales Staff in Bangalore Showroom with 6 to 8 years experience in Jewellery. Salary starting from 25000 up to 35000. Food and Accommodation shall be provided by the Company. Contact B.B. Jewellers 9986577790

Teachers/ Professors

ಮಾತೃ ಶ್ರವಣದೋಷವುಳ್ಳ ಮಕ್ಕಳ ಶಾಲೆಗೆ ಬೇಕಾಗಿದ್ದಾರೆ.ವಿಶೇಷ ಶಿಕ್ಷಕರು (ಶ್ರವಣದೋಷ) ವಿದ್ಯಾರ್ಹತೆ: ಎಂ.ಎಸ್ಸಿ.ಸ್ಪೆಷಲ್ ಬಿ.ಎಡ್. ಡಿಪ್ಲೋಮಾ (ಶ್ರವಣದೋಷ) ಮತ್ತು ಸಿ.ಬಿ.ಆರ್.ವರ್ಕರ್, ಮಹಿಳಾ ವಾರ್ಡನ್. ಮಾಹಿತಿಗೆ: 9686097335

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ, ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು ಉಚಿತ ಊಟ ವಸತಿ ಸಂಬಳ 10,000 ರಿಂದ 15,000/- ESI & PF ಸೌಲಭ್ಯವಿರುತ್ತದೆ. ಬೆಂಗಳೂರು -56 ಸಂಪರ್ಕಿಸಿ : 9606523337, 9606385001

ವ್ಯಾಪಾರ

Business Offers

Finance

LOANS UPTO Rs.700cr for Property, Projects, Business, Cheques Old Loans Cleared Easy Process Good Commission for Agents 9092692403

FLEXI LOAN Avail from 6CR- 60CR @ 3-6% P.A Against LAP, Projects, Business, Cost less process. Ct 7200418844 Mail: marcusgroups@yahoo.com

Franchise

START ODROO Delivery outlet and earn fixed income every month contact 9288001671

Business For Sale

SUCCESSFULLY RUNNING Provision Stores for Sale, located at Mahalaxmipuram layout ,WOC Road .Contact . 91 96204 34263

Machinery & Tools

PVC CABLES Manufacturing Machines for Sale. Contact. No. 9845707084.

ಭವಿಷ್ಯ

Astrology

★॥ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು॥★ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ_ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಶ್ರೀಚಕ್ರ ಜ್ಯೋತಿಷ್ಯ ಪೀಠಂ ಕಠಿಣ ನಿಗೂಡ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127 .

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

“ವಶೀಕರಣಯಂತ್ರ” ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ ಗುರೂಜಿ ಮಹೇಶ್9686999517

ವೈವಾಹಿಕ

Brides Wanted

Telugu

54 KAPU/BALIJA telugu 6 feet seeking alliance caste language no bar Whatsappp details 9963554089

Matrimonial Bureaus

ವಧುವರ ಬೇಕಾಗಿದ್ದಾರೆ. ಲಿಂಗಾಯತ BE MTech/27/ ಕನ್ಯೆಗೆ ವರ, ವಾಲ್ಮೀಕಿ BE (cs)/28/ವಧುವಿಗೆ ವರ, ಕುರುಬ MSC bed/30/ಸುಂದರ ಕನ್ಯೆಗೆ ವರ, ಬ್ರಾಹ್ಮಣ BCA/40/ಕೇಂದ್ರ ಸರ್ಕಾರಿ ನೌಕರಿ ವರನಿಗೆ ಜಾತಿ ಅಭ್ಯಂತರ ಇಲ್ಲದೇ ಸಸ್ಯಾಹಾರಿ ವಧು. 9880912690, 7349450871.

ಪ್ರವಾಸ

Travel


ಶ್ರೀ ರಾಜರಾಜೇಶ್ವರಿ ಟೂರ್, 9743895346/ 9739618243. 11-11-2021, 7ದಿನ ಪ್ರವಾಸ ವೈಷ್ಣೋದೇವಿ, ಶಿವಕೋರಿ, ಜಮ್ಮು ಡಾಲ್ ಹೌಸಿ, ಧರ್ಮಶಾಲ, ದೆಹಲಿ

28/10/21ರಿಂದ ವಿಮಾನದಲ್ಲಿ ನೇಪಾಳ ಪಶುಪತಿನಾಥ್ ಮುಕ್ತಿನಾಥ್ ಲುಂಬಿನಿ ಮತ್ತು ಕಾಶಿ ಶ್ರೀ ರಾಮ್ ಟೂರ್: 9036060610 / 9108933383

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 3 ಅಕ್ಟೋಬರ್ 2021



ರೋಮ್ ನಗರದ ಟ್ರೆವಿ ಕಾರಂಜಿ 9



ದರ್ಬಾರಿನಲ್ಲಿ ಚಾಂದಬಿಯ ಆಟ 10




'ಅನಿಶ್ಚಿತತೆ'ಯ ನಿಶ್ಚಿತ ಮುದ್ರಕಗಳು 11

ಮದುವೆಯ ಈ ಬಂಧ

ಆನ್‌ಲೈನ್ ಅನುಬಂಧ

ಕೋವಿಡ್ ಹೊಡೆತದಿಂದ ಮೂರು ಮದುವೆ ಸೀಸನ್‌ಗಳು ನೆಲಕಚ್ಚಿವೆ. ಈ ಮಧ್ಯೆ ಆನ್‌ಲೈನ್‌ನಲ್ಲಿ ವಧೂವರರ ಹುಡುಕಾಟ ತೀವ್ರ ಏರಿಕೆ ಕಂಡಿದೆ. ಜೊತೆಗೆ ಮದುವೆಗಳ ಸ್ವರೂಪವೂ ಬದಲಾಗತೊಡಗಿದೆ. ಸರಳ ಮದುವೆಗಳು ಅನಿವಾರ್ಯವಾಗಿ ಹೆಚ್ಚುತ್ತಿವೆ.

ಬಿ.ಎಂ.ಹನೀಫ್



ಕಲೆ: ಭಾವು ಪತ್ತಾರ್

'ಮದುವೆಗಳು ಸ್ವರ್ಗದಲ್ಲಿ ನಿಗದಿಯಾಗುತ್ತವೆ' ಎಂದು ನಾಟಕಕಾರ ಜಾನ್ ಲೈಲಿ ಹೇಳಿದ್ದು 15ನೇ ಶತಮಾನದಲ್ಲಿ. ಆತ ಕಾದಂಬರಿಕಾರನೂ ಲಂಡನ್ನಿನಲ್ಲಿ ಸಂಸತ್ ಸದಸ್ಯನೂ ಆಗಿದ್ದವನು. ಆದರೆ, ಆತ ಹೇಳಿದ ವಾಕ್ಯದ ಉತ್ತರಾರ್ಧ ಬಹಳ ಜನರಿಗೆ ನೆನಪಿಲ್ಲ. 'ಮದುವೆಗಳು ಸ್ವರ್ಗದಲ್ಲಿ ನಿಗದಿಯಾಗುತ್ತವೆ, ಭೂಮಿಯಲ್ಲಿ ಪೂರ್ಣಗೊಳ್ಳುತ್ತವೆ' ಎನ್ನುವುದು ಆತ ಹೇಳಿದ ಮಾತು. ಈಗ ಈ ಮಾತಿನ ಉತ್ತರಾರ್ಧ ಪೂರ್ತಿ ಕಣ್ಮರೆಯಾಗುವ ಪರಿಸ್ಥಿತಿ ಬಂದಿದೆ. ಅದ್ದೂರಿ ಮದುವೆಯೇ ಬೇಡ ಎನ್ನುವವರ ಸಂಖ್ಯೆ ಹೆಚ್ಚಾಗುತ್ತಿದೆ. ಅದಕ್ಕೆ ಒಂದು ಕಾರಣ ಕೋವಿಡ್; ಇನ್ನೊಂದು ಕಾರಣ ತೀವ್ರವಾಗಿ ಬದಲಾಗುತ್ತಿರುವ ಜನರ ಜೀವನಶೈಲಿ.

ಕೊರೊನಾ ಕಾಲವು ಒಟ್ಟು ಮೂರು ಮದುವೆ ಸೀಸನ್‌ಗಳನ್ನು ನುಂಗಿ ನೀರು ಕುಡಿದಿದೆ. ಇನ್ನೇನು ದೀಪಾವಳಿ ಸಮೀಪಿಸುತ್ತಿದೆ. ತುಳಸಿ ವಿವಾಹದ ಬಳಿಕ ಮದುವೆಯ ಸೀಸನ್ ಶುರು. ನವೆಂಬರ್ ಹೊತ್ತಿಗೆ ಮದುವೆ ಹಾಲ್‌ಗಳೆಲ್ಲ ಮತ್ತೆ ಮೈತುಂಬಿ ಎದ್ದು ನಿಲ್ಲಬಹುದೇ? ಕಲ್ಯಾಣ ಮಂಟಪಗಳೆಲ್ಲ ಬೆಳಕಿನಿಂದ ಜಗಮಗಿಸಬಹುದೇ? ಬರುತ್ತಿರುವ ಸೀಸನ್ ಆದರೂ 'ಮದುವೆ ಉದ್ಯಮ'ದ ಕೈ ಹಿಡಿಯಬಹುದೇ? ಹೂವು- ಹಣ್ಣು ಮಾರುವವರು, ಪ್ರಿಂಟಿಂಗ್ ಪ್ರೆಸ್‌ನವರು, ಫ್ಲೆಕ್ಸ್ ಮಾಡುವವರು, ಮದುವೆ ಕಾರ್ಡ್ ಮುದ್ರಿಸುವವರು, ವಾಲಗದವರು, ಬ್ಯಾಂಡ್‌ಸೆಟ್‌ನವರು, ಸೀರೆ ಅಂಗಡಿಯವರು, ಆಭರಣದ ಮಳಿಗೆಯವರು, ಕೇಟರಿಂಗ್‌ನವರು, ಬಾಡಿಗೆ ಕಾರಿನವರು, ಹೋಟೆಲ್‌ನವರು- ಎಲ್ಲರೂ ಕೇಳುತ್ತಿರುವ ಪ್ರಶ್ನೆಯಿದು.

ಭಾರತದಲ್ಲಿ ಮದುವೆ ಎಂದರೆ ಗಂಡು-ಹೆಣ್ಣು ಅಥವಾ ಎರಡು ಕುಟುಂಬಗಳ ನಡುವಣ ವೈಯಕ್ತಿಕ ವಿಷಯ ಮಾತ್ರವಲ್ಲ; ಅದು ಇಡೀ ಸಮಾಜದ ಆರ್ಥಿಕತೆಯನ್ನು ಎತ್ತಿ ಹಿಡಿಯುವ ಒಂದು ಸಂಭ್ರಮದ ವಿದ್ಯಮಾನ. ಅರಮನೆಗಳಲ್ಲಿ, ರೆಸಾರ್ಟ್‌ಗಳಲ್ಲಿ, ಪಂಚತಾರಾ ಹೋಟೆಲ್‌ಗಳಲ್ಲಿ ನಡೆಯುವ ಮದುವೆಗಳು ಮಾತ್ರವಲ್ಲ, ಹಳ್ಳಿ-ಪಟ್ಟಣ-ನಗರ- ಮಹಾನಗರಗಳಲ್ಲಿ ನಡೆಯುವ ಪ್ರತಿಯೊಂದು ಸಣ್ಣ ಪುಟ್ಟ ಮದುವೆಯೂ ಜನರ ಆರ್ಥಿಕತೆಗೆ ತಮ್ಮದೇ ಆದ ಕೊಡುಗೆಗಳನ್ನು ನೀಡುತ್ತಿದೆ. ಮದುವೆ ಎನ್ನುವುದೇ ನಮ್ಮಲ್ಲಿ ಒಂದು ಬಲುದೊಡ್ಡ ಉದ್ಯಮ. ಪ್ರತಿವರ್ಷವೂ ಕೋಟ್ಯಂತರ ರೂಪಾಯಿ ಕೈಬದಲಾಯಿಸುವ ವಹಿವಾಟು.

ಕೋವಿಡ್ ಮಹಾಮಾರಿ ಮೊದಲ ಅಲೆಯ ರೂಪದಲ್ಲಿ ಕೊಟ್ಟ ಹೊಡೆತಕ್ಕೆ ಲಾಕ್‌ಡೌನ್ ಬಿಟ್ಟು ಬೇರೆ ದಾರಿ ಕಾಣಲೇ ಇಲ್ಲ. ಜನರು ದಿನನಿತ್ಯದ ವ್ಯಾಪಾರ ವಹಿವಾಟುಗಳನ್ನು ನಡೆಸುವುದೇ ದುಸ್ತರ ಎನ್ನುವ ಪರಿಸ್ಥಿತಿ ಉಂಟಾಯಿತು. ಇನ್ನು ಮದುವೆ-ಮುಂಜಿಗಳನ್ನು ನಡೆಸುವುದಾದರೂ ಹೇಗೆ? ಮದುವೆಗಳನ್ನು ಮುಂದೂಡುವುದು ಅನಿವಾರ್ಯವಾಯಿತು. ಆರಂಭದಲ್ಲಿ ಜನರು 'ಇದು ಒಂದಾರು ತಿಂಗಳು ಇರಬಹುದು' ಎಂದುಕೊಂಡಿದ್ದು ಸುಳ್ಳಲ್ಲ. ಆದರೆ ಮೊದಲ ಅಲೆ ಸ್ವಲ್ಪ ಕುಗ್ಗಿ ಜನರೆಲ್ಲ ಖುಷಿಯಿಂದ ಹೊರಬಂದರು ಎನ್ನುವುದರೊಳಗೆ ಎರಡನೇ ಅಲೆ ಬಂದು ಸಾಲು ಸಾಲು ಜನ ಮಸಣದ ಹಾದಿ ಹಿಡಿದಾಗ, ಜನ ಮದುವೆಗಳನ್ನು ಮರೆತೇ ಹೋಗುವಂತಹ ಪರಿಸ್ಥಿತಿ ಬಂತು. ಲಾಕ್‌ಡೌನ್, ವ್ಯಾಕ್ಸಿನ್, ಮಾಸ್ಕ್ ಮುಂತಾಗಿ ಮುನ್ನೆಚ್ಚರಿಕೆಯ ಕ್ರಮಗಳು ದಿನನಿತ್ಯದ ಕರ್ಮಗಳಾದವು. ಮದುವೆಯ ಮೂರು ಸೀಸನ್‌ಗಳು ಕೋವಿಡ್ ಮಹಾಪೂರದಲ್ಲಿ ಕೊಚ್ಚಿ ಹೋದವು.

ಮೊದಲ ಹೊಡೆತ ಬಿದ್ದದ್ದು ಕಲ್ಯಾಣ ಮಂಟಪಗಳ ಮೇಲೆ. 'ರಾಜ್ಯದಾದ್ಯಂತ ಸುಮಾರು 2,200 ಕಲ್ಯಾಣ ಮಂಟಪಗಳಿವೆ. ಒಂದು ಕಲ್ಯಾಣ ಮಂಟಪದಲ್ಲಿ ಏನಿಲ್ಲವೆಂದರೂ 150 ಜನರಿಗೆ ಕಾಯಂ ಉದ್ಯೋಗವಿತ್ತು. ಮೂರು ಸೀಸನ್‌ಗಳಲ್ಲಿ ಎಲ್ಲವೂ ಕೊಚ್ಚಿಕೊಂಡು ಹೋಯಿತು. ಕಲ್ಯಾಣ ಮಂಟಪಗಳು ಬಂದ್ ಆಗಿವೆ ಎಂದು ಕೆಲಸ ಬಿಟ್ಟು ಹೋದ ಅಡುಗೆಯವರು ಮರಳಿ ಬರಲೇ ಇಲ್ಲ. ಕೆಲವು ಕಲ್ಯಾಣ ಮಂಟಪಗಳನ್ನು ಮತ್ತೆ ತೆರೆಯುವುದೂ ಕಷ್ಟ' ಎನ್ನುತ್ತಾರೆ ರಾಜ್ಯ ಕಲ್ಯಾಣ ಮಂಟಪಗಳ ಅಸೋಸಿಯೇಷನ್ನಿನ ಅಧ್ಯಕ್ಷ ರಮೇಶ್ ರೆಡ್ಡಿ.

ಹೋಟೆಲ್‌ಗಳವರದ್ದಂತೂ ಗೋಳು ಕೇಳುವವರಿಲ್ಲ. 'ಕೋವಿಡ್ ಹೊಡೆತ ಅಂದರೆ ಅಂತಿಂತಹದ್ದಲ್ಲ ಮಾರಾಯ್ರೆ. ಸ್ಟಾರ್ ಹೋಟೆಲ್‌ಗಳ ಸಹಿತ ಎಲ್ಲೆಡೆ ಶೇಕಡ 90ರಷ್ಟು ವಹಿವಾಟು ಬಿದ್ದುಹೋಯಿತು. ಹೋಟೆಲ್‌ಗಳದ್ದು ವರ್ಷಕ್ಕೆ ಅಂದಾಜು ಸಾವಿರ ಕೋಟಿ ರೂಪಾಯಿ ವಹಿವಾಟು. ಬೆಂಗಳೂರು ಅರಮನೆಯಲ್ಲಿ ಮದುವೆಯಾಗುವವರದ್ದೇ ಒಂದು ಮದುವೆಗೆ ಸುಮಾರು 50 ಲಕ್ಷ ರೂಪಾಯಿ ವಹಿವಾಟು ಆಗುತ್ತಿತ್ತು. ಮಾರ್ಚ್-ಮೇ ತಿಂಗಳಲ್ಲಿ ಅಮೆರಿಕ, ಆಸ್ಟ್ರೇಲಿಯಾ, ನ್ಯೂಜಿಲೆಂಡ್‌ಗಳಿಂದೆಲ್ಲ ಮದುವೆಗೆಂದು ಬರುವವರು! ಎರಡು ವರ್ಷಗಳಿಂದ ಅವರ ಪತ್ತೆಯೇ ಇಲ್ಲ' ಎನ್ನುತ್ತಾರೆ ಕರ್ನಾಟಕ ಹೋಟೆಲ್ ಅಸೋಸಿಯೇಷನ್ ಅಧ್ಯಕ್ಷ ಪಿ.ಸಿ.ರಾವ್.

ಇದು ಬರೀ ಬೆಂಗಳೂರು ಒಂದರ ಕಥೆಯಲ್ಲ. ಕರಾವಳಿ, ಮುಂಬೈ ಕರ್ನಾಟಕ, ಕಲ್ಯಾಣ ಕರ್ನಾಟಕ ಎಲ್ಲೆಡೆಯೂ ಮದುವೆ ಉದ್ಯಮ ಮಕಾಡೆ ಮಲಗಿದೆ. ಏಪ್ರಿಲ್-ಮೇ ತಿಂಗಳಲ್ಲಿ ಹೂವು-ಹಣ್ಣು-ತರಕಾರಿಗಳೆಲ್ಲದರ ಬೆಲೆ ಕುಸಿದು ಹುಲುಸಾಗಿ ಬೆಳೆದ ರೈತರು ತಲೆ ಮೇಲೆ ಕೈಹೊತ್ತರು. ಹೊಲಗಳಲ್ಲೇ ಬೆಳೆಯನ್ನು ನಾಶ ಮಾಡಿದವರು ಸಾವಿರಾರು ಜನ. ಮೊದಲ ಅಲೆಯ ಹೊಡೆತಕ್ಕೆ ಸರ್ಕಾರ ಪುಷ್ಪೋದ್ಯಮಕ್ಕೆ ಹೆಕ್ಟೇರ್‌ಗೆ 25 ಸಾವಿರ ರೂಪಾಯಿ ಪರಿಹಾರ ಘೋಷಿಸಿತ್ತು. ಎರಡನೇ ಅಲೆಯಲ್ಲಿ ಈ ಪರಿಹಾರವೂ ಹತ್ತು ಸಾವಿರ ರೂಪಾಯಿಗೆ ಇಳಿಯಿತು.

ಮದುವೆಯೆಂದರೆ ನೂರಾರು ಉದ್ಯೋಗಗಳ ಸೃಷ್ಟಿ. 'ವಿಜಯಪುರ ಸಿಟಿಯಲ್ಲೇ ಸುಮಾರು 50 ಜನ ಫೋಟೊಗ್ರಾಫರ್‌ಗಳಿದ್ದರು ಸರಾ. ಇದು ಬಾರ್ಡರ್ ಆದ್ದರಿಂದ ದೂರದ ಸೊಲ್ಲಾಪುರ, ಜತ್ತ, ಕೊಲ್ಹಾಪುರ ಅಂತೆಲ್ಲ ಮದುವೆ ಫೋಟೊ ತೆಗೆಯಾಕ್ ಹೋಕ್ತಿದ್ವಿ. ಬಹಳಷ್ಟು ಫೋಟೊಗ್ರಾಫರ್ಸ್ ಈಗ ವಾಷೌಟ್ ಆಗ್ಯಾರೆ' ಎನ್ನುವುದು ಛಾಯಾಗ್ರಾಹಕ ಸಂಜು ಅಕ್ಕಿ ಅಳಲು.

ಮದುವೆ ದಲ್ಲಾಳಿಗಳದ್ದೇ ಒಂದು ದೊಡ್ಡ ಉದ್ಯೋಗವರ್ಗವಿದೆ. ಅವರೂ ಈಗ ಕಣ್ಮರೆಯಾಗಿದ್ದಾರೆ. ಆನ್‌ಲೈನ್‌ನಲ್ಲಿ ವಧೂವರರ ಹುಡುಕಾಟ ಹೆಚ್ಚಾಗಿದೆ. ಕೋವಿಡ್ ಬರುವ ಮುಂಚೆಯೂ ಆನ್‌ಲೈನ್ ಮೂಲಕ ವಧೂವರರ ಫಿಕ್ಸಿಂಗ್ ನಡೆದಿತ್ತು. ಆದರೆ ಕೋವಿಡ್ ಬಳಿಕ ಈ ವಹಿವಾಟು ಒಮ್ಮಿಂದೊಮ್ಮೆಲೆ ಏರಿಕೆ ಕಂಡಿದೆ. ಜಗತ್ತಿನಾದ್ಯಂತ ಗ್ರಾಹಕ ಸಂಪರ್ಕ ಹೊಂದಿರುವ ಕನ್ನಡ ಮ್ಯಾಟ್ರಿಮೊನಿ ಡಾಟ್ ಕಾಮ್‌ನ ಮುಖ್ಯ ಮಾರುಕಟ್ಟೆ ಅಧಿಕಾರಿ ಅರ್ಜುನ್ ಭಾಟಿಯಾ ಅವರ ಪ್ರಕಾರ, ವಧೂವರರ ನೋಂದಣಿ ಈ ವರ್ಷ ಶೇಕಡ 30ರಷ್ಟು ಏರಿಕೆ ಕಂಡಿದೆ.

ಸರಿಸುಮಾರು ಎರಡು ವರ್ಷ! ಮದುವೆಯ ಕುರಿತು ಜನರ ಆಲೋಚನಾ ಕ್ರಮವೇ ಬದಲಾಗಿದೆ. ಊರು ತುಂಬಾ ಜನ ಸೇರಿಸಿ ಮದುವೆಯಾಗುವುದು ಶ್ರೇಯಸ್ಕರವಲ್ಲ ಎನ್ನುವುದು ಎಲ್ಲರಿಗೂ ಮನದಟ್ಟಾಗಿದೆ. ಇದುವರೆಗೆ ಕೆಲವೇ ಕುಟುಂಬಗಳಲ್ಲಿ ಆದರ್ಶವಾಗಿ ನಡೆಯಲ್ಪಡುತ್ತಿದ್ದ 'ಸರಳ ಮದುವೆ'ಗಳು, ಈಗ ಬಹುತೇಕರಿಗೆ ಅನಿವಾರ್ಯವೇ ಆಗಿವೆ. ಸರ್ಕಾರಿ ಆದೇಶದಂತೆಯೇ 50 ಜನ ಅಥವಾ ನೂರು ಜನ ಸೇರಿ ಮದುವೆ 'ಮುಗಿಸುವುದು'! 50 ಜನರಿಗೆ ಕಲ್ಯಾಣ ಮಂಟಪಗಳೇಕೆ ಬೇಕು? ಮನೆಯಲ್ಲೇ ಮಾಡಿದರಾಯ್ತು ಎನ್ನುವುದು ಬಹುತೇಕರ ಅಂಬೋಣ. ಭೂರಿ ಭೋಜನಕ್ಕೆ ಲಕ್ಷಾಂತರ ರೂಪಾಯಿ ಖರ್ಚು ಮಾಡುವ ಮನೋಭಾವವೂ ದೂರವಾಯಿತು. ಏನಿದ್ದರೂ ಚಿಕ್ಕ ಚೊಕ್ಕ ಊಟ. ಮದುವೆಗೆ ಕರೆಯಲು ಮೊಬೈಲ್ ಇದೆ, ಇನ್ವಿಟೇಷನ್ನು ವಾಟ್ಸ್‌ಆ್ಯಪ್‌ನಲ್ಲಿ ಹಾಕಿದ್ದೇವೆ ನೋಡಿ! ಕೆಲವು ವಾಟ್ಸ್‌ಆ್ಯಪ್ ಆಹ್ವಾನ ಪತ್ರಿಕೆಗಳಂತೂ ಬಹಳ ಸ್ಪಷ್ಟವಾಗಿಯೇ ಸಾರಿದವು- 'ಕೋವಿಡ್ ಪ್ರಯುಕ್ತ ಸರಳವಾಗಿ ಮದುವೆ ಇಟ್ಟುಕೊಂಡಿದ್ದೇವೆ. ವಧೂವರರಿಗೆ ನಿಮ್ಮ ಆಶೀರ್ವಾದ ಅಲ್ಲಿಂದಲೇ ಬೇಕು'. ಸರಿ, ವಾಟ್ಸ್ ಆ್ಯಪ್‌ನಲ್ಲೇ ಆಶೀರ್ವಾದ!


ಈ ಬದಲಾವಣೆಗಳು ಎಲ್ಲ ಧರ್ಮ, ಜಾತಿಗಳಲ್ಲೂ ನಡೆದಿವೆ. ವಿಜಯಪುರದ ಹಿರಿಯ ಪತ್ರಕರ್ತ ರಫಿ ಭಂಡಾರಿ ಇದನ್ನು ಸ್ಪಷ್ಟವಾಗಿ ಗುರುತಿಸುತ್ತಾರೆ. 'ಕಳೆದ ವರ್ಷ ಕೋವಿಡ್‌ನ ಮೊದಲ ಹೊಡೆತದಲ್ಲಿ ಸಾವಿರಾರು ಮುಸ್ಲಿಮರು ಮದುವೆಗಳನ್ನು ಮುಂದೂಡಿದ್ದಾರೆ. ಆದರೆ ಎರಡನೆಯ ಅಲೆಯ ಬಳಿಕ ನಿರ್ಬಂಧದ ಮಧ್ಯೆಯೂ ಸರಳ ಮದುವೆಗಳು ಹೆಚ್ಚಾಗಿವೆ. ಮಸೀದಿಯಲ್ಲಿ 20-30 ಜನರು ಸೇರಿ ನಿಖಾಹ್ ಮಾಡುವುದು, ಮನೆಯ ಹೊರಗೆ ಸಣ್ಣದೊಂದು ಶಾಮಿಯಾನ ಹಾಕಿ ಊಟ ಮುಗಿಸುವುದು ಈಗ ಮಾಮೂಲಾಗಿದೆ' ಎನ್ನುತ್ತಾರೆ ಅವರು.

ದಾವಣಗೆರೆಯ ಎಂ.ಟಿ.ಸುಭಾಷ್‌ಚಂದ್ರ -ವಸಂತಾ ದಂಪತಿ ತಮ್ಮ ಮಗನ ನಿಶ್ಚಿತಾರ್ಥಕ್ಕೂ ಹೋಗಲಾಗಲಿಲ್ಲ. ಏಕೆಂದರೆ ಮಗ ಋತ್ವಿಕ್ ಚಂದ್ರ ಇರುವುದು ದೂರದ ಅಮೆರಿಕದ ಡಲ್ಲಾಸ್‌ನಲ್ಲಿ. ಎಂಎಸ್ ಮುಗಿಸಿ ಅಲ್ಲೇ ಕೆಲಸ ಹಿಡಿದಿದ್ದನಾತ. ಹುಡುಗಿ ಮತ್ತು ಆಕೆಯ ಕುಟುಂಬ ಅಲ್ಲೇ ಇತ್ತು. 'ಬೇರೆ ದಾರಿಯಿಲ್ಲ ಸಾರ್. ಅವರು ಅಲ್ಲಿ ನಿಶ್ಚಿತಾರ್ಥದ ಸಮಾರಂಭ ಮಾಡಿದರು. ನಾವು ಇಲ್ಲಿ ಕುಳಿತುಕೊಂಡು ಟೀವಿಯಲ್ಲಿ ಸಿನಿಮಾ ನೋಡಿದಂತೆ, ಲೈವ್ ವಿಡಿಯೊ ನೋಡಿದೆವು. ಇಲ್ಲಿಂದಲೇ ಆಶೀರ್ವಾದ ಮಾಡಿದೆವು. ಈಗ ನವೆಂಬರ್ 21ಕ್ಕೆ ಮದುವೆ ನಿಶ್ಚಯವಾಗಿದೆ. ಕೊರೊನಾ ನಿಯಮಗಳು ಬಹುತೇಕ ಸಡಿಲವಾಗಿಲ್ಲವಾದ್ದರಿಂದ ವೀಸಾ ಸಿಗುತ್ತಿಲ್ಲ. ಅಮೆರಿಕನ್ ರಾಯಭಾರ ಕಚೇರಿ ಇನ್ನೂ ಓಪನ್ ಆಗಿಲ್ಲ. ಇಲ್ಲಿಂದಲೇ ಟೀವಿ ಮುಂದೆ ಕುಳಿತು ಮದುವೆಗೂ ಆಶೀರ್ವಾದ ಮಾಡಬೇಕಾಗಿ ಬಂದಿದೆ' ಎನ್ನುತ್ತಾರೆ ಸುಭಾಷ್‌ಚಂದ್ರ.

11ನೇ ಪುಟಕ್ಕೆ...

ಮೃಣ್ಮಯಿಗೆ ಮೀನಿನ ನೈವೇದ್ಯ!

ಡಾ. ಕೆ.ಎಸ್.ಚೈತ್ರಾ



ಅಲಂಕಾರ ಭೂಷಿತ ದುರ್ಗೆ

ಕಟಕ್‌ನ ಈ ದುರ್ಗೆಗೆ ಮೀನಿನ ನೈವೇದ್ಯವೇ ಆಗಬೇಕು. ಅಲಂಕಾರಕ್ಕೆ ಕ್ವಿಂಟಲ್‌ಗಟ್ಟಲೆ ಬೆಳ್ಳಿಯ ಆಭರಣಗಳೂ ಬೇಕು. ಮೃಣ್ಮಯಿಗೆ ಏಕೆ ಇಷ್ಟೊಂದು ವೈಭೋಗ?

ನವರಾತ್ರಿ ಎಂದರೆ ಶಕ್ತಿಯ ಆರಾಧನೆ, ಭಾರತದೆಲ್ಲೆಡೆ ಸಡಗರ-ಸಂಭ್ರಮದಿಂದ ಆಚರಿಸುವ ಹಬ್ಬ. ಒಡಿಶಾದ ಕಟಕ್‌ನಲ್ಲಿ ನವರಾತ್ರಿಯನ್ನು ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಹದಿನಾರನೇ ಶತಮಾನದಲ್ಲಿ ಶ್ರೀ ಚೈತನ್ಯ ಮಹಾಪ್ರಭು, ಪಶ್ಚಿಮ ಬಂಗಾಳದಿಂದ ಇಲ್ಲಿಗೆ ಬಂದಾಗ ಈ ದೇವಿಪೂಜೆಯ ಸಂಪ್ರದಾಯ ಆರಂಭವಾಯಿತು ಎಂಬುದು ಇತಿಹಾಸಕಾರರ ಅಭಿಪ್ರಾಯ. ಪೂರ್ವ ಭಾರತದೆಲ್ಲೆಡೆ ದೇವಿಪೂಜೆ ಪ್ರಮುಖವಾದರೂ ಕಟಕ್‌ನಲ್ಲಿ ಬಹಳ ವಿಶಿಷ್ಟ. ಇಲ್ಲಿನ ದೇವಿ ಸಕಲಾಭರಣಭೂಷಿತೆ ಮತ್ತು ಮೀನು ಪ್ರಿಯೆ!

ಮಸಾಲೆ ಮೀನು

ಸಾಮಾನ್ಯವಾಗಿ ದೇವಿಗೆ ಸಿಹಿತಿಂಡಿ, ಹೂವು, ಹಣ್ಣುಗಳನ್ನು ನೈವೇದ್ಯವಾಗಿ ಇಡುವುದು ರೂಢಿ. ಆದರಿಲ್ಲಿ ಭೋಗ್ ಆಗಿ ದೇವಿಗೆ ಮೀನನ್ನು ಅರ್ಪಿಸಲಾಗುತ್ತದೆ. ಈ ಪದ್ಧತಿ 1817ರಿಂದ ಜಾರಿಯಲ್ಲಿದೆ ಎನ್ನುತ್ತಾರೆ ಸ್ಥಳೀಯರು. ಹತ್ತೊಂಬತ್ತನೇ ಶತಮಾನದ ಆರಂಭದಲ್ಲಿ ಕಟಕ್‌ನಲ್ಲಿರುವ ಅಷ್ಟ ಶಂಭು ದೇಗುಲದ ಹತ್ತಿರ ಪುಟ್ಟ ಗುಡಿಸಿಲಿನಲ್ಲಿ ದತ್ತ ಎಂಬ ಬೆಂಗಾಲಿ ಕುಟುಂಬದವರು ವಾಸವಾಗಿದ್ದರು. ಅವರ ಬಳಿಯಿದ್ದ ದೇವಿಯ ಮಣ್ಣಿನ ಮೂರ್ತಿಗೆ ದಸರೆಯಂದು ವಿಶೇಷ ಪೂಜೆ ಸಲ್ಲುತ್ತಿತ್ತು. ಬೆಂಗಾಲಿಗಳಿಗೆ ಮೀನೆಂದರೆ ಎಲ್ಲಿಲ್ಲದ ಪ್ರೀತಿ. ತಮಗಿಷ್ಟವಾದ ಹುರಿದ ಮೀನು, ಬೇಳೆ, ತರಕಾರಿಯನ್ನು ಮಸಾಲೆಯೊಂದಿಗೆ ಬೆರೆಸಿ ದೇವಿಗೂ ನೈವೇದ್ಯವಾಗಿ ಇಟ್ಟರು. ಸುತ್ತಮುತ್ತಲಿನ ಜನ ಪೂಜೆಗೆ ಬಂದವರು ಇದನ್ನು ನೈವೇದ್ಯವಾಗಿ ಸ್ವೀಕರಿಸಿದರು. ದೇವಿಪೂಜೆಯ ಜತೆ ಅದೇ ಇಂದಿಗೂ ಮುಂದುವರಿದಿದೆ!

ಹತ್ತೊಂಬತ್ತನೇ ಶತಮಾನದವರೆಗೆ ದೇಗುಲದ ಆವರಣದಲ್ಲಿ ದೇವಿಯ ಮೆರವಣಿಗೆಯ ಜವಾಬ್ದಾರಿ ದರ್ಪಾನಿ ರಾಜವಂಶಸ್ಥರಿಗೆ ಸೇರಿತ್ತು. ತದನಂತರ ಜನಸಾಮಾನ್ಯರೆಲ್ಲರೂ ಸೇರಿ ಆಚರಿಸುವ ಸಾಮೂಹಿಕ ಪೂಜೆಯಾಗಿ ಬದಲಾಗಿ ಅತ್ಯಂತ ಜನಪ್ರಿಯವಾಗಿದೆ. ಇಲ್ಲಿನ ಪೆಂಡಾಲ್‌ಗಳಲ್ಲಿ ಕೂರಿಸುವ ದೇವಿ, ಬಂಗಾಳದ ದೇವಿಗಿಂತ ಭಿನ್ನ. ಅಗಲ ಮುಖ, ದೊಡ್ಡ ನಗು, ಸೌಮ್ಯ ಕಳೆಯ ದೇವಿಯರು. ಕಣ್ಣುಗಳಲ್ಲೂ ರೌದ್ರತೆ ಇಲ್ಲ, ಪ್ರಸನ್ನತೆಯೇ ಹೆಚ್ಚು!

ಮಚ್ಛ ಭೋಗ್

ದಶಮಿಯಂದು ದಹಿ ಪಖಾಲ್ (ಜೀರಿಗೆ, ಪುದಿನಾ, ಈರುಳ್ಳಿ ಹಾಕಿದ ಮೊಸರನ್ನ) ನೈವೇದ್ಯವಾದರೆ ನವಮಿಯಂದು ಮಚ್ಛ ಭೋಗ್! ಕಟಕ್‌ನ ಚಾಂದಿನಿ ಚೌಕ್ ಮತ್ತು ಅಲಿಶಾ ಬಜಾರ್‌ನಲ್ಲಿ ಸಾವಿರಾರು ಭಕ್ತಾದಿಗಳಿಗೆ ಈ ಪ್ರಸಾದವನ್ನು ಹಂಚಲಾಗುತ್ತದೆ. ರೋಹಿ ಮತ್ತು ಭಕುರಾ ಎಂಬ ಪ್ರಭೇದಗಳ ಮೀನುಗಳನ್ನು ಪ್ರಸಾದಕ್ಕಾಗಿ ಬಳಸಲಾಗುತ್ತದೆ. ಜನರ ಸಂಖ್ಯೆ ಕಡಿಮೆ ಇದ್ದಾಗ ಕಟಕ್‌ನ ಹತ್ತಿರದಲ್ಲಿರುವ ನರಾಜ್ ಹಳ್ಳಿಯಿಂದ ಮೀನುಗಾರರು ಮೀನುಗಳನ್ನು ಪೂರೈಸುತ್ತಿದ್ದರು. ಅಷ್ಟಮಿಯಂದು ದೇವಿಯ ಸಿಂಧೂರವನ್ನು ತೆಗೆದುಕೊಂಡು ತಮ್ಮ ದೋಣಿಗೆ ಹಾಕಿ ಪೂಜಿಸಿದರೆ ಅದೃಷ್ಟ ಒಲಿಯುತ್ತದೆ, ತಾಯಿ ರಕ್ಷಣೆ ನೀಡುತ್ತಾಳೆ ಎಂಬ ನಂಬಿಕೆ ಅವರಲ್ಲಿದೆ. ಈಗ ಹೆಚ್ಚಿದ ಬೇಡಿಕೆಯಿಂದ (ಮೂರರಿಂದ ನಾಲ್ಕು ಕ್ವಿಂಟಲ್ ಮೀನು) ಸಾಂಕೇತಿಕವಾಗಿ ಇಪ್ಪತ್ತೈದು ಕೆ.ಜಿ. ಮೀನು, ಸಾವಿರದೊಂದು ರೂಪಾಯಿ ಕಾಣಿಕೆ ನೀಡಿ ಸಿಂಧೂರವನ್ನು ಆಶೀರ್ವಾದವಾಗಿ ಪಡೆಯುತ್ತಾರೆ. ಪ್ರಸಾದಕ್ಕೆ ಬೇಕಾದ ಮೀನನ್ನು ಭಕ್ತಾದಿಗಳಿಂದ ಕಾಣಿಕೆಯ ರೂಪದಲ್ಲಿ ಸಂಗ್ರಹಿಸಲಾಗುತ್ತದೆ.



ಮೀನಿನ ಖಾದ್ಯ

ಈ ಪ್ರಸಾದವನ್ನು ಮಾಡುವಾಗ ಕಟ್ಟುನಿಟ್ಟಾದ ನಿಯಮಗಳನ್ನು ಅನುಸರಿಸಲಾಗುತ್ತದೆ. ಏಳು ಜನ ಬ್ರಾಹ್ಮಣರು ಸ್ನಾನ ಮಾಡಿ, ಹೊಸ ಧೋತಿ ಚದ್ದರ್ ತೊಟ್ಟು, ಕೆಂಪು/ ಬಿಳಿ ವಸ್ತ್ರದಿಂದ ತಮ್ಮ ಮುಖವನ್ನು ಮರೆಮಾಡಿ (ದೇವಿಗೆ ಅಪಚಾರವಾಗದಂತೆ) ಪ್ರಸಾದ ತಯಾರಿಸುತ್ತಾರೆ. ಸಂಜೆ ದೇವಿಗೆ ನೈವೇದ್ಯ ಅರ್ಪಣೆಯಾಗುವವರೆಗೆ ಹೀಗೆ ಇದ್ದು ನಂತರ ಪ್ರಸಾದ ಸೇವನೆಯ ಕಾರ್ಯಕ್ರಮ. ಹಿಂದಿನ ವರ್ಷ ಕೋವಿಡ್‌ನಿಂದಾಗಿ ಈ ಪ್ರಸಾದ ನಿಲ್ಲಿಸಲಾಗಿತ್ತು. ದೇವಿಯ ದರ್ಶನಕ್ಕೆ ಆನ್‌ಲೈನ್ ವ್ಯವಸ್ಥೆ ಮಾಡಲಾಗಿತ್ತು. ಈ ಬಾರಿ ಸುರಕ್ಷಾ ಕ್ರಮಗಳನ್ನು ಅನುಸರಿಸಿ ದೇವಿಯ ಪೂಜೆಗೆ ಸಿದ್ಧತೆ ನಡೆದಿದೆ.

ತರಕಾಸಿ


ಬೆಳ್ಳಿಯ ನಗರ ಎಂದೇ ಪ್ರಸಿದ್ಧವಾದ ಒಡಿಶಾದ ರಾಜಧಾನಿ ಕಟಕ್‌ನಲ್ಲಿ ಬೆಳ್ಳಿಯ ಸೂಕ್ಷ್ಮ ತಂತಿಗಳನ್ನು ಬಳಸಿ ನಾಜೂಕಾದ ಆಕರ್ಷಕ ಆಭರಣ ತಯಾರಿಸುವ ವಿಶಿಷ್ಟ ಕಲೆ ತರಕಾಸಿ. ಲೋಹದ ಎಳೆಗಳನ್ನು ವಿವಿಧ ವಿನ್ಯಾಸಗಳಲ್ಲಿ ಬಲೆಯಂತೆ ಹರಡಿ ತಯಾರಾಗುವ ಈ ಆಭರಣಗಳು ನೋಡಲು ಸುಂದರ ಮತ್ತು ಧರಿಸಲು ಹಗುರ. ಒಂದು ಪೆಂಡಾಲ್‌ನಲ್ಲಿ ಬೆಳ್ಳಿಯ ಕಿರೀಟ, ಪ್ರಭಾವಳಿ, ಅಲಂಕಾರ ಮಾಡಲು ಸುಮಾರು ಇಪ್ಪತ್ತರಿಂದ ಮೂವತ್ತು ಕಲಾವಿದರಿಗೆ ಸುಮಾರು ಒಂದು ವರ್ಷ ದಿನಕ್ಕೆಂಟು ತಾಸಿನ ಕೆಲಸ ಬೇಕು. ದೇವಿಯ ಕಿರೀಟ ಇಪ್ಪತ್ತು ಕೆ.ಜಿ. ತೂಕವಿದ್ದರೆ, ಧರಿಸಿರುವ ಆಭರಣ (ಕಿರೀಟ, ಹಾರ, ಬಾಜುಬಂದಿ, ಸೊಂಟದ ಪಟ್ಟಿ, ಬಳೆ ಇತ್ಯಾದಿ) ಐವತ್ತು ಕೆ.ಜಿ., ಸುತ್ತಲಿನ ಪ್ರಭಾವಳಿ ಮೂನ್ನೂರರಿಂದ ನಾನೂರು ಕೆ.ಜಿ.!

10ನೇ ಪುಟಕ್ಕೆ...

ಗಾಂಧೀಜಿ ಒಡನಾಟದಲ್ಲಿ

ಲಂಡನ್ & ಬೆಂಗಳೂರು

ಸುರೇಶ್ ಮೂನ



ಡಾ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ವಿದ್ಯಾರ್ಥಿಯಾಗಿದ್ದಾಗ, ಅಲ್ಲಿ ಇಂಗ್ಲಿಷ್ ಭಾಷಾ ಉಪನ್ಯಾಸಕರಾಗಿದ್ದ ಪ್ರೊ. ಜೆ.ಜಿ.ಟೇಟ್ ಅವರು ಮಾಸ್ತಿ ಅವರ ಚಿಂತನೆಗಳ ಮೇಲೆ ಗಾಢಪ್ರಭಾವ ಬೀರಿದ್ದರ ಬಗ್ಗೆ ನಾನು ತಿಳಿದಿದ್ದೆ. ಈ ಹಿನ್ನೆಲೆಯಲ್ಲಿ ಟೇಟ್ ಅವರ ಜೀವನ ಮತ್ತು ಚಿಂತನೆಗಳ ಬಗ್ಗೆ ನಾನು ನಡೆಸುತ್ತಿದ್ದ ಅಧ್ಯಯನದ ವಿಷಯ ಅರಿತ ಮಾಸ್ತಿ ಅವರ ಮೊಮ್ಮಗಳು ಡಾ. ವಸಂತಶ್ರೀ, ನನ್ನನ್ನು ಈ ವಿಷಯದ ಅಧ್ಯಯನಕ್ಕೆ ಹಾಗೆಯೇ ಲಂಡನ್ ಮತ್ತು ಬೆಂಗಳೂರಿನ ಒಂದು ತುಲನಾತ್ಮಕ ಅಧ್ಯಯನಕ್ಕೆಂದು ಪ್ರಾಯೋಜಿಸಿ, 2014ರ ಆಗಸ್ಟ್‌ನಲ್ಲಿ ಲಂಡನ್‌ಗೆ ಕಳುಹಿಸಿಕೊಟ್ಟರು. ವೆಸ್ಟ್‌ಕೆನ್ಸಿಂಗ್‌ಟನ್‌ನಲ್ಲಿನ ಭಾರತೀಯ ವಿದ್ಯಾಭವನದಲ್ಲಿ 45 ದಿನಗಳ ಕಾಲ ವಾಸ್ತವ್ಯ ಹೂಡಿ, ಆ ನಗರದ ಬಹುತೇಕ ಸ್ಥಳಗಳಿಗೆ ಹೋಗಿ ಅಧ್ಯಯನ ನಡೆಸಿದ್ದೆ.

ಎರಡನೇ ದಿನ ಮುಂಜಾನೆ, ಭಾರತೀಯ ವಿದ್ಯಾಭವನಕ್ಕೆ ಅನತಿ ದೂರದಲ್ಲೇ ಪಾರಂಪರಿಕ ಶೈಲಿಯ ಕಟ್ಟಡವೊಂದರ ಮುಂಬಾಗಿಲ ಬದಿಗೆ ಇದ್ದ ಫಲಕ ನನ್ನನ್ನು ಆಕರ್ಷಿಸಿತು. ಅದರಲ್ಲಿ GREATER LONDON COUNCIL, MAHATMA GANDHI (1869-1948) lived here as a law student. ಎಂದು ಬರೆಯಲಾಗಿತ್ತು. ಗಾಂಧೀಜಿ ವಾಸವಿದ್ದ ಮನೆಗೆ ಅಷ್ಟೊಂದು ಸನಿಹದಲ್ಲೇ ಉಳಿದುಕೊಂಡಿದ್ದೇನಲ್ಲ ಎಂದು ಪುಳಕಿತಗೊಂಡೆ.

9ನೇ ಪುಟಕ್ಕೆ...

ನೀವು ಎಂದಾದರೂ ಯುರೋಪ್ ಪ್ರವಾಸ ಕೈಗೊಂಡಿದ್ದೀರಾ? ರೋಮ್ ನಗರದ ಈ ಟ್ರೆವಿ ಕಾರಂಜಿಯನ್ನು ಕಣ್ತುಂಬಿಕೊಂಡಿಲ್ಲವೇ? ಹಾಗಾದರೆ ನಿಮ್ಮ ಪ್ರವಾಸ ಅಪೂರ್ಣ ಬಿಡಿ!



ರೋಮ್ ನಗರದ ಫೈಜಾ ದಿ ಟ್ರೆವಿ ಕಾರಂಜಿ

ರೋಮ್ ನಗರದ ಟ್ರೆವಿ ಕಾರಂಜಿ

ಕೆ.ಪಿ.ಸತ್ಯನಾರಾಯಣ

ಇಟಲಿಯ ರೋಮ್ ನಗರದ ಸುತ್ತಾಟದಲ್ಲಿ ನೋಡಲು ಅನೇಕ ವಿಶೇಷಗಳಿವೆಯಾದರೂ, ಮುಖ್ಯವಾಗಿ ಪುರಾತನ ರಂಗಮಂದಿರ ಕೊಲೋಸಿಯಂ, ಸೈಂಟ್ ಪೀಟರ್ ಚೌಕವನ್ನು ಹೆಸರಿಸಲಾಗುತ್ತದೆ. ಆದರೆ ರೋಮ್ ನಗರದ ನಡುಭಾಗದಲ್ಲಿಯೇ ಇರುವ ವಿಶ್ವವಿಖ್ಯಾತ ಟ್ರೆವಿ ಕಾರಂಜಿಯನ್ನು (Trevi Fountain- ಇಟಾಲಿಯನ್‌ನಲ್ಲಿ Fontana Di Trevi) ನೋಡದಿದ್ದರೆ ನಮ್ಮ ರೋಮ್ ಪ್ರವಾಸ ಪೂರ್ಣವಾದಂತಾಗುವುದಿಲ್ಲ. ವಾಸ್ತು ಮತ್ತು ಶಿಲ್ಪಕಲೆ ಮೇಳೈಸಿದ ಈ ಅದ್ಭುತ ಕಲಾಕೃತಿಯು ಸೇಂಟ್ ಪೀಟರ್ ಚೌಕ ಮತ್ತು ವ್ಯಾಟಿಕನ್ ನಗರಕ್ಕೆ ಕೇವಲ ಎರಡು ಕಿ.ಮೀ ಮತ್ತು ರೋಮ್ ನಗರದ ಹೃದಯ ಭಾಗಕ್ಕೆ ಐದೂವರೆ ಕಿ.ಮೀ ದೂರದಲ್ಲಿದೆ.

ಕ್ರಿಸ್ತ ಪೂರ್ವದಲ್ಲಿಯೇ ನಗರದ ನೀರಿನ ಅಗತ್ಯವನ್ನು ಪೂರೈಸಲು ರೋಮ್‌ನ ತಂತ್ರಜ್ಞರು ಕನ್ಯೆಯೊಬ್ಬಳ ಸಹಾಯದಿಂದ ನಗರದ ಹೊರವಲಯದಲ್ಲಿ ಶುದ್ಧ ನೀರಿನ ಸೆಲೆಯನ್ನು ಕಂಡುಹಿಡಿದರಂತೆ. ಆ ಕನ್ಯೆಯ ಹೆಸರಿನ ಕಾಲುವೆಯ (Aqua Virgo) ಮೂಲಕ ನಗರಕ್ಕೆ ನೀರಿನ ಸರಬರಾಜಾಗುತ್ತಿತ್ತು. ಆ ಕಾಲುವೆಯು ನಗರದ ನಡುಭಾಗದಲ್ಲಿ ಕೊನೆಗೊಳ್ಳುತ್ತಲಿದ್ದು ಅಲ್ಲೊಂದು ಕೊಳವನ್ನು ನಿರ್ಮಿಸಲಾಗಿತ್ತು. ಆ ಸ್ಥಳದಲ್ಲಿಯೇ ಈಗ ಟ್ರೆವಿ ಕಾರಂಜಿ ಇದೆ.

ಕ್ರಿಸ್ತಶಕ ಹದಿನೇಳನೇ ಶತಮಾನದವರೆಗೂ ಈ ಕಾಲುವೆ ಮತ್ತು ಕೊಳ, ನಿರ್ವಹಣೆಯ ಕೊರತೆಯಿಂದ ಪಾಳುಬಿದ್ದಿದ್ದವು. 1730ರಲ್ಲಿ ಹನ್ನೆರಡನೆಯ ಪೋಪ್ ಕ್ಲೆಮೆಂಟ್ ಕಾಲುವೆಯ ಜೀರ್ಣೋದ್ಧಾರ ಮತ್ತು ಕೊಳದ ಮರುನಿರ್ಮಾಣಕ್ಕೆಂದು ಸ್ಪರ್ಧೆಯೊಂದನ್ನು ಏರ್ಪಡಿಸಿದನು. ಆ ಸ್ಪರ್ಧೆಯಲ್ಲಿ ಗೆದ್ದ ಇಟಲಿಯ ವಾಸ್ತುಶಿಲ್ಪಿ ನಿಕೋಲಾ ಸಾಲ್ವಿ ಈ ವಿಶಿಷ್ಟ ಕಾರಂಜಿಯನ್ನು (Baroque fountain) ವಿನ್ಯಾಸಗೊಳಿಸಿದನು.



ಟ್ರೆವಿ ಕಾರಂಜಿಯ ಕೊಳಕ್ಕೆ ನಾಣ್ಯ ಎಸೆಯುವ ಪದ್ಧತಿಯಿದೆ

1732ರಲ್ಲಿ ಇದರ ಕೆಲಸ ಆರಂಭವಾಯಿತು. ಕೆಲಸ ಅರ್ಧ ಭಾಗದಷ್ಟು ನಡೆದಿದ್ದಾಗ ಸಾಲ್ವಿ ನಿಧನನಾದನು. ಆ ನಂತರ ವಿವಿಧ ಶಿಲ್ಪಿಗಳಿಗೆ ಈ ಕಾರ್ಯವನ್ನು ಪೂರ್ಣಗೊಳಿಸುವ ಹೊಣೆಯನ್ನು ವಹಿಸಲಾಯಿತು. ಮುಖ್ಯ ವಾಸ್ತುಶಿಲ್ಪಿಯಾಗಿ ಗುಸೆಪ್ ಪಾಣಿನಿಯನ್ನು ನೇಮಿಸಲಾಯ್ತು. 1762ರ ಮೇ ತಿಂಗಳ 22ರಂದು ಹದಿಮೂರನೆಯ ಪೋಪ್ ಕ್ಲೆಮೆಂಟ್ ಈ ಕಲಾಕೃತಿಯನ್ನು ಉದ್ಘಾಟಿಸಿದರು.

ಈ ಬಹುಮಾಧ್ಯಮ ಕಲಾಕೃತಿ 26.3 ಮೀಟರ್ - 86 ಅಡಿ ಎತ್ತರ ಹಾಗೂ 49.15 ಮೀಟರ್ - 161 ಅಡಿ ಅಗಲವಿದ್ದು, ರೋಮ್ ನಗರದ ಅತಿ ದೊಡ್ಡ ಕಾರಂಜಿ ಎನಿಸಿಕೊಂಡಿದೆ. ಮೂರು ದಾರಿಗಳು ಸೇರುವ ಸ್ಥಳದಲ್ಲಿರುವುದರಿಂದಾಗಿ ಇದಕ್ಕೆ ಟ್ರೆವಿ ಎಂಬ ಹೆಸರು ಬಂದಿದೆ. ರೋಮ್ ನಗರದಿಂದ 22 ಮೈಲಿಗಳ ದೂರದ ಸ್ಥಳದಲ್ಲಿ ದೊರಕುವ ಒಂದು ಬಗೆಯ ಸುಣ್ಣದ ಕಲ್ಲಿನಲ್ಲಿ (Travertine stone) ಈ ಶಿಲ್ಪ ಕಲಾಕೃತಿಯನ್ನು ನಿರ್ಮಿಸಲಾಗಿದೆ. ಕಾರಂಜಿಯ ಹಿನ್ನೆಲೆಯಲ್ಲಿ ಶಿಲ್ಪಗಳ ಮೂಲಕ ಈ ನೀರಿನ ಕಾಲುವೆಯ ಕಥೆಯನ್ನು ನಿರೂಪಿಸಲಾಗಿರುವುದು ವಿಶೇಷವಾಗಿದೆ.

1988ರಲ್ಲೊಮ್ಮೆ ಹಾಗೂ 1998ರಲ್ಲಿ ನುರಿತ ಶಿಲ್ಪಿಗಳು ಬಿರುಕುಗಳನ್ನು ಮುಚ್ಚಿ, ಬಣ್ಣಗೆಟ್ಟಿದ್ದ ಕಲ್ಲುಗಳನ್ನು ಸ್ವಚ್ಛಗೊಳಿಸಿ, ಕಲಾಕೃತಿಗಳ ಮೇಲೆ ಕುಳಿತಿದ್ದ ಖನಿಜಾಂಶಗಳನ್ನು ಕೆರೆದು ತೆಗೆದು, ಶಿಲ್ಪಗಳಿಗೆ ಹೊಸ ರೂಪು ಕೊಟ್ಟರು. ಕೊಳದ ಜೀರ್ಣೋದ್ಧಾರವನ್ನೂ ಮಾಡಲಾಯಿತು. ನೀರಿನ ಪುನರ್ಬಳಕೆಗಾಗಿ ನೀರೆತ್ತುವ ಹೊಸ ಯಂತ್ರಗಳನ್ನು ಅಳವಡಿಸಲಾಯ್ತು. ಪುನಃ 2015ರಲ್ಲಿ ಒಂದಷ್ಟು ರಿಪೇರಿಯ ಕಾರ್ಯಗಳನ್ನು ಕೈಗೊಳ್ಳಲಾಯಿತು. ಪ್ರಮುಖವಾಗಿ ರಾತ್ರಿ ಹೊತ್ತಿನಲ್ಲಿ ಕಾರಂಜಿಯ ಅಪೂರ್ವ ನೋಟದ ಅನುಭವ ದೊರಕಿಸುವುದಕ್ಕಾಗಿ ಎಲ್‌ಇಡಿ ಬಲ್ಬುಗಳನ್ನು ಅಳವಡಿಸಲಾಯ್ತು.

ಈ ನೀರಿನ ಕಾರಂಜಿಯೊಳಕ್ಕೆ ನಾಣ್ಯಗಳನ್ನು ಎಸೆಯುವ ಪದ್ಧತಿ ಬಹಳ ಕಾಲದಿಂದ ರೂಢಿಯಲ್ಲಿದೆ. ಬಲಗೈಯಲ್ಲಿ ನಾಣ್ಯಗಳನ್ನು ಹಿಡಿದು ಎಡ ಭುಜದ ಮೇಲಿನಿಂದ ನೀರಿಗೆ ಎಸೆಯಬೇಕೆಂದು ಹೇಳಲಾಗುತ್ತದೆ. ಪ್ರತಿನಿತ್ಯ ಸುಮಾರು ಮೂರು ಸಾವಿರ ಯೂರೋಗಳಷ್ಟು ನಾಣ್ಯಗಳು ಇಲ್ಲಿನ ಕೊಳದಲ್ಲಿ ಸಂಗ್ರಹವಾಗಿರುತ್ತವೆ. 2016ರಲ್ಲಿ ಸುಮಾರು 15 ಲಕ್ಷ ಡಾಲರ್‌ಗಳಷ್ಟು ಹಣ ಕಾರಂಜಿಯಲ್ಲಿ ದೊರಕಿತ್ತು. ಈ ಹಣವನ್ನು ಬಡವರ ಕಲ್ಯಾಣಕ್ಕಾಗಿ ಬಳಸಲಾಗುತ್ತದೆ. ಎಷ್ಟೇ ಕಾವಲು ಇದ್ದರೂ ಕೊಳದಲ್ಲಿನ ನಾಣ್ಯಗಳನ್ನು ಕದಿಯಲು ಪ್ರಯತ್ನಿಸುವವರ ಸಂಖ್ಯೆಯೇನೂ ಕಡಿಮೆ ಇಲ್ಲ. ಕಾನೂನಿಗೆ ವಿರುದ್ಧವೆಂದು ಗೊತ್ತಿದ್ದರೂ, ಅಂತಹ ಪ್ರಯತ್ನಗಳು ಆಗಾಗ್ಗೆ ನಡೆಯುತ್ತಲೇ ಇರುತ್ತವೆ.

ಟ್ರೆವಿ ಕಾರಂಜಿ ಕುರಿತ ಅಂಚೆ ಚೀಟಿಯೊಂದನ್ನು 1972ರಲ್ಲಿ ಇಟಲಿಯ ಅಂಚೆ ಇಲಾಖೆ ಹೊರ ತಂದಿದೆ. 1953ರಲ್ಲಿ ತೆರೆಕಂಡ 'ರೋಮನ್ ಹಾಲಿಡೆ', 1954ರಲ್ಲಿ ಬಿಡುಗಡೆಯಾದ 'ತ್ರೀ ಕಾಯಿನ್ಸ್ ಇನ್ ದಿ ಫೌಂಟನ್' ಸೇರಿದಂತೆ ಹಲವು ಚಲನಚಿತ್ರಗಳಲ್ಲಿಯೂ ಈ ಕಾರಂಜಿ ಕಾಣಿಸಿಕೊಂಡಿದೆ.

ಯುರೋಪಿಯನ್ನರು ತಮ್ಮ ಸಂಸ್ಕೃತಿ, ಪರಂಪರೆಯ ಉಳಿವಿಗಾಗಿ ಸಾಕಷ್ಟು ಕಾಳಜಿ ವಹಿಸುತ್ತಾರೆ. ಅವುಗಳಿಂದಲೇ ತಮ್ಮ ಪ್ರವಾಸೋದ್ಯಮವನ್ನು ಬೆಳೆಸಿಕೊಳ್ಳುತ್ತಾರೆ. ಅಂತಹ ಪ್ರಯತ್ನಕ್ಕೊಂದು ಉದಾಹರಣೆ ಈ ಟ್ರೆವಿ ಕಾರಂಜಿ. ನೋಡಿ, ಫೋಟೊ ತೆಗೆದುಕೊಂಡು ಸಂಭ್ರಮಿಸಿ ಹಿಂತಿರುಗಿದ ಮೇಲೂ ನಮ್ಮ ನೆನಪಿನಲ್ಲಿ ತಾಜಾ ಆಗಿ ಉಳಿಯುತ್ತವೆ ಈ ಮನಮೋಹಕ ಸ್ಮಾರಕಗಳು.

ಗಾಂಧೀಜಿ ಒಡನಾಟದಲ್ಲಿ...

8ನೇ ಪುಟದಿಂದ...

ಗಾಂಧೀಜಿಗೆ ಬೆಂಗಳೂರಿನೊಂದಿಗಿದ್ದ ಅವಿನಾಭಾವ ಸಂಬಂಧದ ಬಗ್ಗೆ 'ಡೆಕ್ಕನ್ ಹೆರಾಲ್ಡ್'ನಲ್ಲಿ 1995ರಲ್ಲಿ ನನ್ನ ಸುದೀರ್ಘ ಲೇಖನ ಪ್ರಕಟಗೊಂಡಿತ್ತು. ಲಂಡನ್‌ನಲ್ಲಿಯೂ ಅವರ ಒಡನಾಟದ ಬಗ್ಗೆ ನಡೆಸಿದ ಅಧ್ಯಯನದಿಂದ, ಒಂದು ಪುಸ್ತಕವನ್ನೇ ರಚಿಸುವಷ್ಟು ಕುತೂಹಲಕಾರಿ ಮಾಹಿತಿಗಳು ಮತ್ತು ಅಪರೂಪದ ಚಿತ್ರಗಳು ಸಂಗ್ರಹವಾದವು.

ಗಾಂಧೀಜಿ ಲಂಡನ್ ನಗರಕ್ಕೆ ಐದು ಬಾರಿ (1888ರಿಂದ 1891, 1906, 1909, 1914, 1931) ಆಗಮಿಸಿದ್ದಾರೆ. ಹಾಗೆಯೇ ಬೆಂಗಳೂರಿಗೂ ಐದು ಬಾರಿ (1915, 1920, 1927, 1934 ಮತ್ತು 1936) ಬಂದಿದ್ದಾರೆ. ಅವರ ಬೆಂಗಳೂರು ಭೇಟಿಗಳ ಬಗ್ಗೆ ಇತಿಹಾಸ ಸಂಶೋಧಕ ವೇಮಗಲ್ ಸೋಮಶೇಖರ್ ವಿವರವಾದ ಅಧ್ಯಯನ ನಡೆಸಿ, 'ಬೆಂಗಳೂರಿನಲ್ಲಿ ಗಾಂಧೀಜಿ' ಎಂಬ ಪುಸ್ತಕವನ್ನು ಬರೆದಿರುವಂತೆಯೇ ಅವರ ಲಂಡನ್ ಭೇಟಿಗಳ ಬಗ್ಗೆ ಜೇಮ್ಸ್ ಹಂಟ್ ಎಂಬ ಲೇಖಕ 'ಗಾಂಧಿ ಇನ್ ಲಂಡನ್' ಎಂಬ ಆಕರ್ಷಕ ಕೃತಿಯನ್ನು 1978ರಲ್ಲೇ ರಚಿಸಿದ್ದಾರೆ. ಇದಲ್ಲದೆ ಭಾರತದ ಅರವತ್ತನೆಯ ಗಣರಾಜ್ಯೋತ್ಸವದ ಶುಭ ಸಂದರ್ಭಕ್ಕಾಗಿ ಲಂಡನ್‌ನ ಹೈ ಕಮಿಷನ್ ಆಫ್ ಇಂಡಿಯಾ 'ಮಹಾತ್ಮ ಗಾಂಧಿ ಇನ್ ಲಂಡನ್' ಎಂಬ ಹೊತ್ತಿಗೆಯನ್ನು ಪ್ರಕಟಿಸಿದೆ. ಬೆಂಗಳೂರಿನ ಅಪರಾಧಗಳ ಪತ್ತೆಗೆ ಸಂಬಂಧಿಸಿದಂತೆ ಮೂರು ಸರಣಿ ಕೃತಿಗಳನ್ನು ಬರೆದಿರುವ ಜ್ಯಾಕ್ ಓಯ, ಲಂಡನ್‌ನಲ್ಲಿ ಗಾಂಧೀಜಿ ಓಡಾಡಿದ ಎಲ್ಲ ಸ್ಥಳಗಳನ್ನೂ ಪತ್ತೆ ಹಚ್ಚಿ ದಾಖಲಿಸಿದ್ದಾರೆ. ಇನ್ನು, ಗಾಂಧೀಜಿ ಅವರೇ ತಾವು ಕಂಡ ಲಂಡನ್ ನಗರದ ಬಗ್ಗೆ 'ಎ ಗೈಡ್ ಟು ಲಂಡನ್' ಎಂಬ ಕಿರುಹೊತ್ತಿಗೆಯನ್ನು ಬರೆದಿದ್ದು, ಅದು ಅವರ ಕೃತಿಗಳ ಸಂಪುಟದಲ್ಲಿ ಪ್ರಕಟಗೊಂಡಿದೆ.


ವಿದ್ಯಾಭ್ಯಾಸಕ್ಕೆಂದು 1888ರ ಅಕ್ಟೋಬರ್ 27ರಂದು ಹಡಗಿನ ಮೂಲಕ ಲಂಡನ್‌ಗೆ ಬರುವ ಗಾಂಧೀಜಿ, 'ದಿ ವಿಕ್ಟೋರಿಯ' ಎಂಬ ಲಕ್ಷುರಿ ಹೋಟೆಲ್‌ನಲ್ಲಿ ಉಳಿದುಕೊಳ್ಳುತ್ತಾರೆ. ಆದರೆ, ಅಲ್ಲಿನ ದುಬಾರಿ ವೆಚ್ಚವನ್ನು ನಿಭಾಯಿಸಲಾಗದೆ ಈಗಿನ ಭಾರತೀಯ ವಿದ್ಯಾಭವನದ ಬಳಿ, ನಾನು ಆಗಲೇ ಉಲ್ಲೇಖಿಸಿದ ಮನೆಯಲ್ಲಿ ಸುಮಾರು ಒಂಬತ್ತು ತಿಂಗಳ ಕಾಲ ಉಳಿಯುತ್ತಾರೆ. ಊಟ, ವಸತಿ ಸೇರಿ ವಾರಕ್ಕೆ ಮೂವತ್ತು ಶಿಲ್ಲಿಂಗ್ ಪಡೆಯುತ್ತಿದ್ದ ಆ ಮನೆಯ ಒಡತಿ ಇವರಿಗೆ ಬೇಯಿಸಿ ಹಾಕುತ್ತಿದ್ದ ಸಸ್ಯಾಹಾರ ರುಚಿಕರವಾಗಿ ಇರುತ್ತಿರಲಿಲ್ಲ. ಆದರೂ ಅದಕ್ಕೆ ಒಗ್ಗಿಕೊಳ್ಳುವ ಗಾಂಧೀಜಿ, ಕಾನೂನು ಕ್ಷೇತ್ರದಲ್ಲಿ ಪದವಿ ಶಿಕ್ಷಣ ಪಡೆಯಲು ಇನ್ನರ್ ಟೆಂಪಲ್ ಕಾಲೇಜಿಗೆ ಸೇರುತ್ತಾರೆ.

ಮೊದಲ ಬಾರಿಗೆ ಅವರು ಹೊರಗೆ ಆಹಾರ ಸೇವಿಸಲು ಪ್ರಯತ್ನ ಮಾಡಿದ್ದು ಹಾಲ್ಬರ್ನ್ ರೆಸ್ಟೋರೆಂಟ್‌ನಲ್ಲಿ. ಅಲ್ಲಿ ಊಟಕ್ಕೆ ಮೊದಲು ನೀಡಿದ ಸ್ಟಾರ್ಟರ್‌ನಲ್ಲಿ ಮಾಂಸಾಹಾರ ಇದೆಯೇ ಎಂದು ಸ್ನೇಹಿತರನ್ನು ಕೇಳಿ ಮುಜುಗರಕ್ಕೆ ಈಡಾಗಿ, ಅಲ್ಲಿಂದ ಹೊರನಡೆದು ಬಿಡುತ್ತಾರೆ. ಆದರೆ, ಮೂರು ವರ್ಷಗಳ ನಂತರ ಗಾಂಧೀಜಿ ಅದೇ ಹೋಟೆಲ್‌ನಲ್ಲಿ ಸ್ನೇಹಿತರಿಗೆ ಭರ್ಜರಿಯಾದ ಬೀಳ್ಕೊಡುಗೆ ಸಮಾರಂಭವನ್ನು ಆಯೋಜಿಸುತ್ತಾರೆ. ನಂತರದ ವರ್ಷಗಳಲ್ಲಿ ಈ ನಗರಕ್ಕೆ ಬಂದಾಗಲೆಲ್ಲ ಈ ರೆಸ್ಟೋರೆಂಟ್‌ಗೆ ಅವರು ತಪ್ಪದೇ ಬರುತ್ತಿದ್ದರು. 1950ರ ದಶಕದಲ್ಲಿ ಹಾಲ್ಬರ್ನ್ ಅನ್ನು ಕೆಡವಿ, ಆ ಜಾಗದಲ್ಲಿ ಸೂಪರ್ ಮಾರ್ಕೆಟ್ ನಿರ್ಮಿಸಲಾಯಿತು.

ಗಾಂಧೀಜಿ ಭೇಟಿ ನೀಡುತ್ತಿದ್ದ ಎರಡನೇ ಆಹಾರ ಕೇಂದ್ರ ಸೇಂಟ್ ಬ್ರೈಡ್ ಸ್ಟ್ರೀಟ್‌ನಲ್ಲಿ ಇದ್ದ ಸೆಂಟ್ರಲ್ ವೆಜಿಟೇರಿಯನ್ ರೆಸ್ಟೋರೆಂಟ್. ಇದರ ಬದಿಗೇ ಲಂಡನ್ ವೆಜಿಟೇರಿಯನ್ ಸೊಸೈಟಿ ಸಹ ಇತ್ತು. ಮುಂದೆ ಈ ಸಂಸ್ಥೆಯ ಸದಸ್ಯರಾಗುವ ಗಾಂಧೀಜಿ ತಮ್ಮ ಮಾತಿನ ಕಲೆಯನ್ನು ರೂಪಿಸಿಕೊಳ್ಳಲು ಈ ವೇದಿಕೆ ನೆರವಾಯಿತು. ಈ ಕಟ್ಟಡವು ಎರಡನೇ ವಿಶ್ವಸಮರದಲ್ಲಿ ದಾಳಿಗೊಳಗಾಗಿ ಕಣ್ಮರೆಯಾಯಿತು. ಈಗಲೂ ಫ್ಯಾರಿಂಗ್‌ಟನ್ ಸ್ಟ್ರೀಟ್ ಬದಿಗೇ ಇರುವ ಈ ಸ್ಥಳವನ್ನು ಕಾಣಬಹುದು.

ಗಾಂಧೀಜಿ ಎರಡನೇ ಬಾರಿ 1906ರಲ್ಲಿ ಲಂಡನ್‌ಗೆ ಬರುವ ವೇಳೆಗಾಗಲೇ ಒಬ್ಬ ಪ್ರಮುಖ ಲಾಯರ್ ಆಗಿ ರೂಪುಗೊಂಡಿದ್ದರು. ಥೇಮ್ಸ್ ನದಿಯ ವಾಟರ್ಲೂ ಸೇತುವೆ ಸನಿಹ ಇದ್ದ ಹೋಟೆಲ್ ಸಿಸಿಲ್‌ನಲ್ಲಿ ಅವರು ಉಳಿದುಕೊಂಡಿದ್ದರು. ಈಗ ಅದರ ಕುರುಹೂ ಇಲ್ಲ. ಈ ಸಂದರ್ಭದಲ್ಲೇ ಕಲೋನಿಯಲ್ ಆಫೀಸ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ವಿನ್‌ಸ್ಟನ್ ಚರ್ಚಿಲ್‌ರನ್ನು ಗಾಂಧೀಜಿ ಪ್ರಥಮ ಬಾರಿಗೆ ಭೇಟಿಯಾದದ್ದು.

1909ರಲ್ಲಿ ಮೂರನೇ ಬಾರಿ ಲಂಡನ್‌ಗೆ ಬಂದಾಗ ಗಾಂಧೀಜಿ, ಪಾರ್ಲಿಮೆಂಟ್ ಭವನಕ್ಕೆ ಹತ್ತಿರದಲ್ಲೇ ಕ್ವೀನ್ ಅನೆ ಚೇಂಬರ್ಸ್‌ನಲ್ಲಿ, ದಿ ಸೌತ್ ಆಫ್ರಿಕಾ ಬ್ರಿಟಿಷ್ ಇಂಡಿಯಾ ಕಮಿಟಿ ಕಚೇರಿಯನ್ನು ತೆರೆದಿದ್ದರಲ್ಲದೆ, ಹತ್ತಿರದಲ್ಲೇ ವಿಕ್ಟೋರಿಯ ಸ್ಟ್ರೀಟ್‌ನಲ್ಲಿದ್ದ ವೈಭವದ ವೆಸ್ಟ್ ಮಿನಿಸ್ಟರ್ ಪ್ಯಾಲೆಸ್ ಹೋಟೆಲ್‌ನಲ್ಲಿ ತಂಗಿದ್ದರು. ಈ ಕಟ್ಟಡವೂ ನಂತರದ ವರ್ಷಗಳಲ್ಲಿ ಕಣ್ಮರೆಯಾಯಿತು.



ಬ್ಯಾರನ್ಸ್ ಕೋರ್ಟ್ ರಸ್ತೆಯಲ್ಲಿರುವ ಫಲಕ

1914ರಲ್ಲಿ ಗಾಂಧೀಜಿ ನಾಲ್ಕನೇ ಬಾರಿ ಈ ನಗರಕ್ಕೆ ಆಗಮಿಸಿದ್ದರು. ಹೋಟೆಲ್ ಸಿಸಿಲ್‌ನಲ್ಲಿ ಅವರ ಗೌರವಾರ್ಥ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಆನಂದ ಕುಮಾರಸ್ವಾಮಿ, ಸರೋಜಿನಿ ನಾಯ್ಡು, ಮೊಹಮದ್ ಅಲಿ ಜಿನ್ನಾರಂತಹ ಗಣ್ಯಾತಿಗಣ್ಯರು ಭಾಗವಹಿಸಿದ್ದರು.

1931ರಲ್ಲಿ ಐದನೇ ಬಾರಿ ಗಾಂಧೀಜಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಪ್ರತಿನಿಧಿಯಾಗಿ, ಭಾರತದಲ್ಲಿ ಸರ್ಕಾರ ರಚನೆಗೆ ಸಂಬಂಧಿಸಿದ ವಿಷಯವನ್ನು ದುಂಡುಮೇಜಿನ ಸಮ್ಮೇಳನದಲ್ಲಿ ಪ್ರಸ್ತಾಪ ಮಾಡಲು ಆಗಮಿಸಿದ್ದರು. ಇವರ ಆತ್ಮೀಯ ಮಿತ್ರರಾದ ಮ್ಯೂರಿಯಲ್ ಲೆಸ್ಟರ್, ಪೂರ್ವ ಲಂಡನ್‌ನಲ್ಲಿನ ತಮ್ಮ ಕಿಂಗ್ಸ್‌ಲೆ ಹಾಲ್‌ನಲ್ಲಿ ಬಂದಿರಲು ಆಹ್ವಾನ ನೀಡಿದರು. ಅದಕ್ಕೊಪ್ಪಿದ ಗಾಂಧೀಜಿ ಅಲ್ಲಿ ಸ್ವಲ್ಪ ಕಾಲ ತಂಗಿದ್ದರು. ಪ್ರಶಾಂತವಾದ ವಸತಿ ಪ್ರದೇಶದಲ್ಲಿರುವ ಈ ಕಟ್ಟಡದಲ್ಲಿ ಎಂ.ಕೆ ಗಾಂಧಿ ಫೌಂಡೇಷನ್ ಸೇವಾ ಸಂಸ್ಥೆ ಕಾರ್ಯ ನಿರ್ವಹಿಸುತ್ತಿದೆ. ಅಲ್ಲಿನ ದೊಡ್ಡ ಸಭಾಂಗಣದಲ್ಲಿ ಗಾಂಧೀಜಿಯವರ ಎದೆ ಮಟ್ಟದ ಮೂರ್ತಿಯಿದೆ. ಮೂರನೇ ಮಹಡಿಯಲ್ಲಿ ಅವರು ಉಳಿದುಕೊಂಡಿದ್ದ ಸಣ್ಣ ಕೊಠಡಿಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಅವರು ಬಳಸುತ್ತಿದ್ದ ಸಣ್ಣ ಚರಕ, ದಿಂಬುಗಳು ಮತ್ತು ಕೂರಲು ಬಳಸಿದ ಕುರ್ಚಿಯಿದೆ. ರಿಚರ್ಡ್ ಅಟೆನ್‌ಬರೊ ತಮ್ಮ ಪ್ರಸಿದ್ಧ 'ಗಾಂಧಿ' ಚಿತ್ರಕ್ಕಾಗಿ ಇದೇ ಕೊಠಡಿಯಲ್ಲೇ ಕೆಲವು ದೃಶ್ಯಗಳನ್ನು ಚಿತ್ರೀಕರಿಸಿದ್ದಾರೆ.

ಟಾವಿಸ್ಟಾಕ್ ಪ್ರದೇಶ ಗಾಂಧೀಜಿ ವಿದ್ಯಾರ್ಥಿಯಾಗಿ ನಡೆದಾಡಿದ ಜಾಗವಾದ್ದರಿಂದ ಅದರ ನೆನಪಿನ ಪ್ರತೀಕವಾಗಿ ಅಲ್ಲಿನ ಒಂದು ಪಾರ್ಕ್‌ನ ನಡುವಿನಲ್ಲಿ, ಚಿಂತನೆಯ ಭಂಗಿಯಲ್ಲಿರುವ ಗಾಂಧೀಜಿಯ ಪ್ರತಿಮೆಯನ್ನು ಸ್ಥಾಪಿಸಲಾಗಿದೆ. ಇದನ್ನು ಫ್ರೆಡ್ಡಾ ಬ್ರಿಲಿಯಂಟ್ ಎಂಬ ನುರಿತ ಶಿಲ್ಪಿ ರೂಪಿಸಿದ್ದು, ಬ್ರಿಟನ್ ಪ್ರಧಾನಿಯಾಗಿದ್ದ ಹೆರಾಲ್ಡ್ ವಿಲ್ಸನ್ ಅನಾವರಣಗೊಳಿಸಿದ್ದಾರೆ. ಪ್ರತಿಷ್ಠಿತ ಪಾರ್ಲಿಮೆಂಟ್ ಸ್ಕ್ವೇರ್ ಪ್ರದೇಶದಲ್ಲಿರುವ ವಿಶ್ವವಿಖ್ಯಾತ ವ್ಯಕ್ತಿಗಳ ಪ್ರತಿಮೆಗಳಲ್ಲಿ ಗಾಂಧಿ ಅವರದೂ ಸೇರಿದೆ.



ಕಿಂಗ್ಸ್‌ಲೆಯಲ್ಲಿ ಮಕ್ಕಳೊಂದಿಗೆ ಮಹಾತ್ಮ ಗಾಂಧಿ

ಗಾಂಧೀಜಿ ಬೆಂಗಳೂರಿಗೆ ಮೊದಲು ಬಂದದ್ದು 1915ರಲ್ಲಿ. ಆಗ ಅವರು ಭಾರತ ಯಾತ್ರೆಯ ಸಂಬಂಧವಾಗಿ ಮದ್ರಾಸ್‌ಗೆ ಬರುವ ಕಾರ್ಯಕ್ರಮವಿತ್ತು. ಬೆಂಗಳೂರಿನ ಸಾಮಾಜಿಕ ಕ್ಷೇತ್ರದಲ್ಲಿ ಕಾಳಜಿಯಿದ್ದ ಡಿ.ವಿ.ಗುಂಡಪ್ಪ ಅವರಿಗೆ ಬಾಪೂಜಿಯವರನ್ನು ಬೆಂಗಳೂರಿಗೆ ಕರೆಸಬೇಕೆಂಬ ಅಭಿಲಾಷೆಯಿತ್ತು. 1914ರಲ್ಲಿ ಗಾಂಧೀಜಿಯವರ ದಕ್ಷಿಣ ಆಫ್ರಿಕಾದ ಕೆಲಸಕ್ಕಾಗಿ ನಿಧಿ ಸಂಗ್ರಹ ಕಾರ್ಯ ದೇಶದಾದ್ಯಂತ ನಡೆಯಿತು. ಡಿವಿಜಿ ಅವರು ಇಲ್ಲಿಂದ ಸಂಗ್ರಹಿಸಿದ 1,800 ರೂಪಾಯಿಗಳನ್ನು ಮದ್ರಾಸ್‌ನಲ್ಲಿ ನಿಧಿ ಸ್ವೀಕರಿಸುತ್ತಿದ್ದ ಪತ್ರಕರ್ತ ಜಿ.ಎ.ನಟೇಶನ್ ಅವರಿಗೆ ಕಳುಹಿಸಿದರು. ಬೆಂಗಳೂರಿಗೂ ಬರುವಂತೆ ನಟೇಶನ್ ಮೂಲಕ ಕೋರಿದಾಗ ಅದಕ್ಕೊಪ್ಪಿದ ಗಾಂಧೀಜಿ, ಬೆಂಗಳೂರಿಗೆ ಬಂದರು. ಅಂದೇ ಗಾಂಧೀಜಿಯವರ ಮೊದಲ ಸಾರ್ವಜನಿಕ ಸಭೆ ಡಿವಿಜಿಯವರ ಮೈಸೂರು ಸಾಮಾಜಿಕ ಸೇವಾ ಸಂಸ್ಥೆಯಲ್ಲಿ ನಡೆಯಿತು. ಅಲ್ಲಿ ಗಾಂಧೀಜಿ ಅನಾವರಣ ಮಾಡಿದ ಗೋಪಾಲಕೃಷ್ಣ ಗೋಖಲೆ ಅವರ ಭಾವಚಿತ್ರವನ್ನು ಇಂದಿಗೂ ಕಾಣಬಹುದು.

1920ರಲ್ಲಿ ಎರಡನೇ ಬಾರಿ ಬೆಂಗಳೂರಿಗೆ ಬಂದ ಗಾಂಧೀಜಿ, ಕಂಟೋನ್ಮೆಂಟ್‌ನ ಈದ್ಗಾ ಮೈದಾನದಲ್ಲಿ, ಸುರಿಯುತ್ತಿದ್ದ ಮಳೆಯಲ್ಲಿಯೇ ದೊಡ್ಡ ಪ್ರಮಾಣದಲ್ಲಿ ನೆರೆದಿದ್ದ ಜನರನ್ನು ಉದ್ದೇಶಿಸಿ ಮಾತನಾಡಿದರು. 1927ರಲ್ಲಿ ಗಾಂಧೀಜಿ ಆರೋಗ್ಯ ಸುಧಾರಣೆಗಾಗಿ ವಿಶ್ರಾಂತಿ ಪಡೆಯಬೇಕಾಯಿತು. ಆಗ ಮೈಸೂರು ರಾಜ್ಯ ಸರ್ಕಾರ ಅದರ ವ್ಯವಸ್ಥೆಯ ಹೊಣೆ ವಹಿಸಿಕೊಂಡಿತು. ಅದರಂತೆ ಗಾಂಧೀಜಿ ಮೊದಲು ನಂದಿ ಬೆಟ್ಟದಲ್ಲಿ ಸ್ವಲ್ಪಕಾಲವಿದ್ದು ನಂತರ ಬೆಂಗಳೂರಿನ ಕುಮಾರಕೃಪಾ ಅತಿಥಿ ಗೃಹದಲ್ಲಿ ತಂಗಿದ್ದರು. ಆಗ ಈ ನಗರದ ಜನತೆಗೆ ಅವರನ್ನು ಹತ್ತಿರದಿಂದ ಕಾಣುವ, ಅವರ ಮಾತುಗಳನ್ನು ಕೇಳುವ ಭಾಗ್ಯ ದೊರೆತಿತ್ತು. ಗಾಂಧೀಜಿ ಸಭೆಗಾಗಿ ಕೂರುತ್ತಿದ್ದ ಜಾಗವು ಕುಮಾರಕೃಪಾದ ಬದಿಗೇ ಇರುವ ಅಶೋಕ ಹೋಟೆಲ್‌ನ ಆವರಣದಲ್ಲಿದ್ದು, ಅಲ್ಲಿ ಒಂದು ಸ್ಮಾರಕವನ್ನು ನಿರ್ಮಿಸಲಾಗಿದೆ.

ಇಲ್ಲಿನ ಹೈನುಗಾರಿಕೆ ಸಂಶೋಧನಾ ಸಂಸ್ಥೆಗೆ ಸ್ವಲ್ಪಕಾಲ ವಿದ್ಯಾರ್ಥಿಯಾಗಿ ಬಂದಿದ್ದ ಗಾಂಧೀಜಿ 'ಜಿಲ್' ಎಂಬ ಹಸುವಿನ ಬಳಿ ನಿಂತು ಫೋಟೊ ತೆಗೆಸಿಕೊಂಡಿದ್ದರು. ಅತಿಥಿಗಳ ಪುಸ್ತಕದಲ್ಲಿ ಸಹಿ ಹಾಕಿದ್ದರು. ಇಂದಿಗೂ ಅಲ್ಲಿ ಗಾಂಧೀಜಿ ಹಸುವಿನೊಂದಿಗಿರುವ ಪ್ರತಿಮೆ ಮತ್ತು ಸಹಿಯನ್ನು ಕಾಣಬಹುದು.

ಇದಾದ ನಂತರ 1934 ಮತ್ತು 1936ರಲ್ಲೂ ಇಲ್ಲಿಗೆ ಬಂದು ಹೋಗಿದ್ದ ಗಾಂಧೀಜಿ, ಪ್ರಾರ್ಥನಾ ಸಭೆಗಳನ್ನು ನಡೆಸಿದ್ದರಲ್ಲದೆ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್, ಮಹಿಳಾ ಸೇವಾ ಸಮಾಜದಂತಹ ಹಲವಾರು ಸ್ಥಳಗಳಿಗೆ ಭೇಟಿ ನೀಡಿದ್ದರು. ಅವರು ಒಮ್ಮೆ ಬೆಂಗಳೂರಿನ ಸೌಂದರ್ಯವನ್ನು ಮುಂಬೈಗೆ ಹೋಲಿಸಿ 'ಬೆಂಗಳೂರೇ ಸುಂದರ ನಗರ' ಎಂದು ಶ್ಲಾಘಿಸಿದ್ದರು. ಸಿಟಿ ರೈಲ್ವೆ ಸ್ಟೇಷನ್‌ನ ಪ್ಲಾಟ್‌ಫಾರಂ ಒಂದರಲ್ಲಿ ಗಾಂಧೀಜಿ ಬೆಂಗಳೂರು ಜನತೆಯನ್ನು ಪ್ರಶಂಸಿಸಿರುವ ಒಂದು ಶ್ವೇತ ಶಿಲಾಫಲಕವಿತ್ತು. ನಂತರ ಅದನ್ನು ನಿಲ್ದಾಣದ ಮುಂಭಾಗದ ಸಣ್ಣ ತೋಟಕ್ಕೆ ಸಾಗಿಸಲಾಯಿತು. ಮುಂದೆ ಅದು ಅಲ್ಲಿಂದಲೂ ಕಣ್ಮರೆಯಾಯಿತು.



ಬೆಂಗಳೂರಿನ ಲಲಿತ್ ಅಶೋಕ್ ಹೋಟೆಲ್‌ನ ಆವರಣದಲ್ಲಿರುವ ಗಾಂಧೀಜಿ ಸ್ಮಾರಕ

ಮುನ್ನೋಟ 03-10-2021 ರಿಂದ 09-10-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮಕ್ಕಳಿಗೆ ವಿದ್ಯಾಭ್ಯಾಸದ ಬಗ್ಗೆ ತಿಳಿ ಹೇಳುವುದರ ಜೊತೆಗೆ ಪ್ರೋತ್ಸಾಹ ಸಿಗುತ್ತದೆ. ವಾಹನ ಚಾಲನೆ ಮಾಡುವವರು ಜಾಗರೂಕರಾಗಿರುವುದು ಉತ್ತಮ. ಕೃಷಿ ಕಾರ್ಯಗಳ ವೆಚ್ಚಕ್ಕಾಗಿ ಹಣಕಾಸು ಸಂಸ್ಥೆಗಳ ಮೊರೆ ಹೋಗುವಿರಿ. ಬಹಳ ದಿನಗಳಿಂದ ನನೆಗುದಿಗೆ ಬಿದ್ದಿದ್ದ ವಿಷಯವೊಂದನ್ನು ಬಹಳ ದೃಢನಿರ್ಧಾರ ಮಾಡಿ ಕೈಗೆತ್ತಿಕೊಳ್ಳುವಿರಿ. ಸಂಗಾತಿಯ ಆದಾಯದಲ್ಲಿ ಏರಿಕೆಯನ್ನು ಕಾಣಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಹಿತಶತ್ರುಗಳಿಂದ ಉದ್ಯೋಗ ಕ್ಷೇತ್ರದಲ್ಲಿ ತೊಂದರೆ ಬರುವ ಸಾಧ್ಯತೆ ಇದೆ. ವ್ಯವಹಾರಕ್ಕೆ ತಾಯಿಯಿಂದ ಮಾರ್ಗದರ್ಶನದ ಜೊತೆಗೆ ಸ್ವಲ್ಪ ಧನಸಹಾಯವೂ ದೊರೆಯುವುದು. ಸಂಬಂಧಿಕರೊಡನೆ ಸುದೀರ್ಘ ಸಮಾಲೋಚನೆಯಿಂದ ಬಾಂಧವ್ಯದಲ್ಲಿ ವೃದ್ಧಿಯನ್ನು ಕಾಣಬಹುದು. ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಉತ್ತಮ ಹೆಸರು ಬರುತ್ತದೆ. ಮಕ್ಕಳ ವಿದ್ಯಾಭ್ಯಾಸದಲ್ಲಿ ಪ್ರಗತಿಯನ್ನು ಕಾಣಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಮಹಿಳೆಯರು ಸಾಮಾಜಿಕ ಕ್ಷೇತ್ರಗಳಲ್ಲಿ ದುಡಿಯುವ ಸಾಮರ್ಥ್ಯವನ್ನು ಹೊಂದುತ್ತಾರೆ. ಹಣದ ಹರಿವು ನಿಮ್ಮ ಅಗತ್ಯದಷ್ಟು ಇರುತ್ತದೆ. ಹಣಕಾಸಿನ ವ್ಯವಹಾರಗಳಲ್ಲಿ ಸ್ವಲ್ಪ ಎಚ್ಚರಿಕೆ ಇರಲಿ. ನೆರೆಹೊರೆಯವರೊಂದಿಗೆ ಇದ್ದ ಮುನಿಸುಗಳು ದೂರವಾಗುತ್ತವೆ. ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಕೊಡಿರಿ. ಕಮಿಷನ್ ವ್ಯವಹಾರವನ್ನು ಮಾಡುವವರಿಗೆ ಆದಾಯದಲ್ಲಿ ಹೆಚ್ಚಳ ಇರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಉನ್ನತ ಹುದ್ದೆಯಲ್ಲಿರುವವರಿಗೆ ಜನರಿಂದ ಅಭಿಮಾನದ ಮಾತುಗಳು ಕೇಳಿಬರುತ್ತವೆ. ಮಹಿಳೆಯರ ಕೆಲವು ಇಷ್ಟಾರ್ಥಗಳು ಪೂರ್ಣಗೊಂಡು ಸಂತಸ ಪಡುವರು. ಮನೆಯವರ ಅಸಮ್ಮತಿಯ ನಡುವೆಯೂ ಕಚೇರಿ ಕೆಲಸದ ನಿಮಿತ್ತವಾಗಿ ದೂರ ಪ್ರಯಾಣ ಮಾಡುವ ಸಾಧ್ಯತೆ ಇದೆ. ಸಂಬಂಧಿಕರ ಮಧ್ಯಸ್ಥಿಕೆಯಿಂದ ಕುಟುಂಬದ ಕೆಲ ಸಮಸ್ಯೆಗಳು ದೂರವಾಗುವವು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ತುರ್ತು ವಿಷಯಕ್ಕಾಗಿ ಸಂಬಂಧಿಕರ ನೆರವನ್ನು ಪಡೆಯಬೇಕಾಗುತ್ತದೆ. ಅನಗತ್ಯ ಸುತ್ತಾಟದಿಂದ ದೇಹಾಲಸ್ಯ ಆಗಬಹುದು. ಕೆಲವು ಅರೆಕಾಲಿಕ ನೌಕರರಿಗೆ ಕಾಯಂ ನೌಕರಿ ಒದಗುವ ಸಾಧ್ಯತೆ ಇದೆ. ಸೈನಿಕರು ಬಿಡುವಿಲ್ಲದ ರೀತಿಯಲ್ಲಿ ಕೆಲಸ ಮಾಡಬೇಕಾದ ಅನಿವಾರ್ಯ ಇರುತ್ತದೆ. ಆತ್ಮಗೌರವ ಹೆಚ್ಚಾಗಿ ವ್ಯಾಪಾರ ಮತ್ತು ವ್ಯವಹಾರಗಳಿಗೆ ಧಕ್ಕೆಯಾಗಬಹುದು.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ನೆರೆಹೊರೆಯವರೊಂದಿಗೆ ವಿನಾಕಾರಣ ವೈಮನಸ್ಸು ಮೂಡಬಹುದು. ಸಂಯಮದ ಮಾತುಗಳಿಂದಲೇ ಈ ತೊಂದರೆಯನ್ನು ನಿವಾರಿಸಿಕೊಳ್ಳಬಹುದು. ಅಧ್ಯಯನದಲ್ಲಿ ಆಸಕ್ತಿಯು ಹೆಚ್ಚಾಗುವ ಸಂದರ್ಭವಿದೆ. ಉದ್ಯೋಗ ಕ್ಷೇತ್ರದಲ್ಲಿ ನಿಮ್ಮ ಪ್ರತಿಭೆಗೆ ಗೌರವ ದೊರೆಯುತ್ತದೆ. ರೈತಾಪಿವರ್ಗದವರು ಉತ್ತಮ ಬೆಳೆಯನ್ನು ಮತ್ತು ಬೆಲೆಯನ್ನು ನಿರೀಕ್ಷೆ ಮಾಡಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ಆಸ್ತಿ ವಿಷಯಕ್ಕೆ ಸಂಬಂಧಿಸಿದಂತೆ ಮನಸ್ತಾಪಗಳು ಎದುರಾಗುವ ಸಂದರ್ಭವಿದೆ. ಮಹಿಳೆಯರಿಗೆ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅವಕಾಶಗಳಿವೆ. ಜಮೀನಿನಲ್ಲಿ ಹೆಚ್ಚಿನ ಕೃಷಿ ಕೆಲಸಗಳನ್ನು ಆರಂಭಿಸುವಿರಿ. ಅಪೇಕ್ಷಿಸಿದ್ದ ಸಾಲ ಹಣಕಾಸು ಸಂಸ್ಥೆಗಳಿಂದ ದೊರೆಯುತ್ತದೆ. ವಿದೇಶಿ ಕಂಪನಿಯೊಂದು ನಿಮಗೆ ಪಾಲುದಾರಿಕೆಗೆ ಆಹ್ವಾನ ನೀಡಬಹುದು.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಸ್ಥಿರಾಸ್ತಿಯ ಬೆಲೆಯಲ್ಲಿ ಏರಿಕೆ ಕಾಣಬಹುದು. ಹೂವು ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ ಆದಾಯ ಹೆಚ್ಚುತ್ತದೆ. ನೌಕರಿಯಲ್ಲಿರುವವರು ಅಧಿಕಾರಿಗಳ ಸೂಚನೆಯಂತೆ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಳ್ಳಬೇಕಾಗುತ್ತದೆ. ಹಿತಮಿತವಾದ ಮಾತುಗಳಿಂದ ನೆರೆಹೊರೆಯವರನ್ನು ಗೆಲ್ಲುವಿರಿ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಉದ್ಯೋಗದಲ್ಲಿ ಅಭಿವೃದ್ಧಿಗೊಂಡು ಆರ್ಥಿಕವಾಗಿ ಚೇತರಿಸಿಕೊಳ್ಳುವಿರಿ. ಉದ್ದಿಮೆದಾರರು ತಾಂತ್ರಿಕ ಯಂತ್ರೋಪಕರಣಗಳನ್ನು ಖರೀದಿ ಮಾಡುವ ಯೋಗವಿದೆ. ಹಿರಿಯ ಅಧಿಕಾರಿಗಳು ಹೆಚ್ಚಿನ ರೀತಿಯ ಅಧಿಕಾರ ಅಥವಾ ಮೇಲ್ದರ್ಜೆಗೆ ಏರುವ ಸಂದರ್ಭವಿದೆ. ವಯಸ್ಕರಿಗೆ ವಿವಾಹ ಸಂಬಂಧ ಒದಗುವ ಸಾಧ್ಯತೆ ಇದೆ. ಪರಿಚಯದ ಗಣ್ಯರೊಂದಿಗೆ ವೇದಿಕೆಯನ್ನು ಹಂಚಿಕೊಳ್ಳುವಂತಹ ಸಾಧ್ಯತೆ ಇದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಕೆಲಸಗಾರರ ಕೊರತೆಯಿಂದಾಗಿ ಉದ್ದಿಮೆಗಳಲ್ಲಿ ತಯಾರಿಕೆಗೆ ಬಹಳ ಅಡಚಣೆ ಉಂಟಾಗುತ್ತದೆ. ಕೃಷಿ ಕ್ಷೇತ್ರದಲ್ಲಿನ ಯಂತ್ರೋಪಕರಣಗಳನ್ನು ತಯಾರಿಸುವವರಿಗೆ ಅಭಿವೃದ್ಧಿ ಇರುತ್ತದೆ. ಚಿನ್ನಾಭರಣಗಳ ವ್ಯಾಪಾರವನ್ನು ಆರಂಭಿಸಬೇಕೆಂದು ಇಚ್ಛಿಸುವವರು ವ್ಯಾಪಾರವನ್ನು ಆರಂಭಿಸಬಹುದು. ಸ್ವಂತ ಶಕ್ತಿಯೇ ನಿಮ್ಮ ಆಧಾರವಾಗಿ ಕೆಲಸಕಾರ್ಯಗಳಲ್ಲಿ ಜಯವನ್ನು ಸಾಧಿಸುವಿರಿ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹೊಸದಾಗಿ ಕಟ್ಟಿಸುತ್ತಿರುವ ಮನೆಯ ಕೆಲಸಗಳು ಪೂರ್ಣಗೊಂಡು ಮನಸ್ಸಿಗೆ ನೆಮ್ಮದಿಯನ್ನು ಕೊಡುತ್ತವೆ. ಮಕ್ಕಳ ವಿವಾಹದ ವಿಷಯದಲ್ಲಿ ನಿಮ್ಮ ಸಂಬಂಧಿಕರಿಂದ ಕೆಲವು ಒತ್ತಾಯಗಳು ಬರಬಹುದು. ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುವವರಿಗೆ ಜನರಿಂದ ಸಹಾಯಹಸ್ತ ದೊರೆಯುತ್ತದೆ. ಪ್ರೀತಿಪಾತ್ರರ ಭೇಟಿಯಿಂದ ಬಾಲ್ಯದ ನೆನಪುಗಳನ್ನು ಮೆಲುಕು ಹಾಕುವಿರಿ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಧಾನ್ಯಗಳ ಸಗಟು ವ್ಯಾಪಾರವನ್ನು ಮಾಡುತ್ತಿರುವವರಿಗೆ ವ್ಯವಹಾರದಲ್ಲಿ ಅಭಿವೃದ್ಧಿ ಇದ್ದೇ ಇರುತ್ತದೆ. ಕೈಗೆತ್ತಿಕೊಂಡ ಕೆಲಸಗಳನ್ನು ಶಕ್ತ್ಯಾನುಸಾರ ಪೂರೈಸುವಿರಿ. ಸರ್ಕಾರದಿಂದ ಆಗಬೇಕಾದ ಕೆಲಸಗಳಲ್ಲಿ ಮುನ್ನಡೆಯನ್ನು ಕಾಣುವಿರಿ. ಹಣದ ಒಳಹರಿವು ತೃಪ್ತಿದಾಯಕವಾಗಿರುತ್ತದೆ. ತಾಂತ್ರಿಕ ವರ್ಗದ ಕಂಪ್ಯೂಟರ್ ಇಲಾಖೆಯವರು ಹೆಚ್ಚಿನ ಪ್ರಗತಿಯನ್ನು ಕಾಣಬಹುದು.

ಪದಬಂಧ 2707



ಮೇಲಿನಿಂದ ಕೆಳಕ್ಕೆ

1. ಹಿಂದಿಯವರಿಗೆ ಬಂದ ಅನುಮಾನ 3
2. ಗ್ರೀಕ್ ಹೆಣ್ಣು ಧರಿಸಿರುವ ಪರದೆ 4
3. ವಿಭಿನ್ನವಾಗಿ ಹೊಸದು 4
4. ಕಳ್ಳ ಸನ್ಯಾಸಿ ಮಂತ್ರವನ್ನು ಒದರುವ ಪರಿ 4
5. ಕಸದಲ್ಲಿ ಲೀನವಾಗುವ ದೈತ್ಯ 3
6. ಮಂದಿಯ ಬಾಯಲ್ಲಿ ಹರಿದಾಡಿದ ಹಾಡು 4
10. ತಾನೇ ಗುಳುಂ ಮಾಡುತ್ತಾ ವ್ಯಾಜ್ಯ ಬಗೆಹರಿಸುವ ಮಂಗನ ತೀರ್ಪು 4
12. ಮರ್ಯಾದೆಗೆ ಒದಗಿರುವ ನಷ್ಟಕ್ಕೆ ಮೊಕದ್ದಮೆ 4
14. ಬಾಳೆ ಬೆಲ್ಲ ತೆಂಗಿನ ಮಧುರ ಮಿಶ್ರಣ 4
16. ಇಳೆಗೆ ಮಳೆ ಕರುಣಿಸುವ ದೈವ 3
17. ಕೃಷ್ಣ ಸಾರಥ್ಯದಲ್ಲಿ ಅರ್ಜುನನ ರಥಕ್ಕೆ ಹನುಮ ಲಾಂಛನ 4
18. ಭಾರತದ ಇತಿಹಾಸದಲ್ಲಿ ಪರಾಕ್ರಮಕ್ಕೆ ಹೆಸರಾದ ರಾಜಸ್ಥಾನದ ಪಂಗಡ 4
19. ಕಲ್ಕಿ ಅವತಾರದ ನಿರೀಕ್ಷೆಯ ಕಾಲ 4
22. ಜನರ ಹೊಟ್ಟೆ ತುಂಬಿಸುವ ಊಟ 3

ಎಡದಿಂದ ಬಲಕ್ಕೆ

1. ಮಂತ್ರಾಲಯದ ಮಹಾನುಭಾವ ಮಾರ್ಗದರ್ಶಕ ಒಡೆಯ 4
3. ಜಗತ್ತನ್ನೇ ಆವರಿಸಿದ್ದು 4
5. ಬೆಳದಿಂಗಳನಿಂದ ಹುಟ್ಟಿದ್ದು 4
7. ಇದು ಖರೇ ಬದಲಾಗುವುದಿಲ್ಲ 3
8. ಚಳಿ ಅಥವಾ ಭಯದಿಂದ ದೇಹದಲ್ಲಿ ಆಗುವ ಕಂಪನ 3
9. ನಾರಾಯಣನಿಗೆ ಸೇರುವ ಒಂಬೈನೂರು ಲಕ್ಷ 4
11. ಸಮವಾಗಿ ಮುಕ್ತಾಯವಾಗುವ ಕಾರ್ಯಕ್ರಮ 4
13. ಮೀನು, ಆಮೆ, ಹಂದಿ ಇತ್ಯಾದಿಯಾಗಿ ಕಲಿಯುಗದವರೆಗೆ ಭಗವಂತನ ರೂಪಾಂತರ 5
15. ಹಾನಿಕಾರಕ ರಾಸಾಯನಿಕಗಳನ್ನು ದೂರವಿಡುವ ಕೃಷಿ 4
17. ನೊಂದ ಜೀವಕ್ಕೆ ಬೇಕಾಗುವ ಕರುಣೆಯ ಕೈ 4
19. ಶೀತ, ನೆಗಡಿ, ಜ್ವರಕ್ಕೆ ಮನೆಯಲ್ಲಿ ಕುದಿಸಿ ಕುಡಿಯುವ ದ್ರವ 3
20. ಮನೆಮುಂದೆ ಹರಟೆಯ ಕಟ್ಟೆ 3
21. ಆಕಾಶದಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳ ಗುಂಪು 4
23. ಬೆಟ್ಟದಿಂದ ನೀರು ಧುಮ್ಮಿಕ್ಕುವ ಸುಂದರ ತಾಣ 4
24. ಅಹಂಕಾರದ ಮುಖದವ 4

ಪದಬಂಧ ಉತ್ತರ -2706

ಮೇಲಿಂದ ಕೆಳಕ್ಕೆ

1. ಸಮೀರ 2.ಸಮುದ್ರ 3.ಕಾಡುಮೇಡು 4.ರಜೋಗುಣ 7.ತಿಮಿರ 9.ಚಂದಾಮಾಮಾ 10.ಪರಮಹಂತ 11.ತೀಕ್ಷ್ಣತಳಿ 13.ರಾರಾಜಿಸು 15.ರತಿದೇವಿ 17.ವರ್ತಕ 18.ದೇವಾಲಯ 19.ಸುಹಾಸಿನಿ 20.ಸರದಿ 21.ರಕ್ತಾಂಗಿ

ಎಡದಿಂದ ಬಲಕ್ಕೆ


1.ಸಮಂಜಸ 3.ಕಾತರ 5.ಮುದನೀಡು 6.ಜೋಗತಿ 8.ರವಿಚಂದ್ರ 10.ಪಡುವಣತೀರ 12.ಆರಾಮಾ 14.ರಾಮಾಯಣಮಹಾಭಾರತ 16.ತಿಳಿಸು 17.ವಸುದೇವಸುತ 20.ಸವಿಸ್ತಾರ 22.ಕಮಲ 23.ಸಿಹಿಖಾರ 24.ಯವನಿ 25.ದಿನರೋಗಿ

ದರ್ಬಾರಿನಲ್ಲಿ ಚಾಂದಬಿಯ ಆಟ

ಸಮಾಜದಲ್ಲಿ ಪರಕೀಯಳಾಗಿ ಉಳಿಯುವ ದೇವದಾಸಿ ಕುಲದ ಹೆಣ್ಣೊಬ್ಬಳು ಆ ಊರ ಸಮುದಾಯವನ್ನು ಅಭಿವೃದ್ಧಿಯ ಹಾದಿಯಲ್ಲಿ ನಡೆಸುವ ಕಥೆಯೇ ಚಾಂದಬೀ ಸರಕಾರ. ಕಂಬಾರರ ಈ ಹೊಸ ಕಾದಂಬರಿಯ ಅಧ್ಯಾಯದಲ್ಲೊಂದು ಸುತ್ತು...

ಚಂದ್ರಶೇಖರ ಕಂಬಾರ

ವಿಜಾಪುರ ಸುಲ್ತಾನರಿಗೆ ಮಸಾಲೆ ಸಾಮಾನು ಪೂರೈಸುತ್ತಿದ್ದ ಬಲದೇವನಾಯಕ ಅಲ್ಲಿ ನಡೆಯುವ ಮೋಜು ಮನರಂಜನೆಗಳ ಕಡೆಗೆ ಗಮನ ಹರಿಸಿದವನೇ ಅಲ್ಲ. ಆದರೆ, ಕೊನೆ ಕೊನೆಗೆ ಮಡದಿಯೊಂದಿಗೆ ಹತಾಶೆಯ ದಿನಗಳನ್ನು ಕಳೆಯುವಾಗ ಲಘು ಮನರಂಜನೆಯ ಕಡೆಗೆ ಅವನ ಚಿತ್ತ ವಾಲಿತೆಂದು ಹೇಳಿದೆನಷ್ಟೆ; ಈ ಸಲ ಅರಮನೆಯಲ್ಲಿ ಶ್ರೀಕೃಷ್ಣ ಪಾರಿಜಾತ ಎಂಬ ಚಾಂದಬಿಯ ಬಯಲಾಟವಿದೆಯೆಂದು ಕೇಳಿ ಈ ದಿವಸ ಇಲ್ಲೇ ವಸ್ತಿ ಇರುವುದೆಂದು ತೀರ್ಮಾನಿಸಿದ.



ಸುಲ್ತಾನರ ಅರಮನೆಗೆ ಬಂದು ಅವರ ಮುಂದೆ ಪಾತ್ರ ಕುಣಿಯುವುದೆಂದರೆ ಸಾಮಾನ್ಯ ಸಂಗತಿಯಲ್ಲ. ಪಾತ್ರವನ್ನು ಅಚ್ಚುಕಟ್ಟಾಗಿ, ಕಲಾತ್ಮಕವಾಗಿ ಅರ್ಥೈಸುವ ತಾಕತ್ತಿನ ನಾಯಕಿಯಾಗಿರಬೇಕು. ತನಗೆ ಎದುರಾಗುವ ಗಂಡಸು ಪಾತ್ರದವರು ನಿರುತ್ತರರಾಗುವಂತೆ ಹಾಡು, ಮಾತು, ಕುಣಿತಗಳಲ್ಲಿ ಸಾಟಿಯಿಲ್ಲದ ಪ್ರತಿಭೆಯವಳಾಗಿರಬೇಕು. ಕಲ್ಲೊಳ್ಳಿಯ ಚಾಂದಬಿ ಆ ಮಟ್ಟದ ಕಲಾವಿದೆಯೆಂದು ತಿಳಿದು ಅವಳ ಬಗ್ಗೆ ಗೌರವ ಮೂಡಿತು. ಅಲ್ಲದೆ ಬೇರೆ ತಂಡದವರಾದರೆ ಸುಲ್ತಾನರ ಮುಂದೆ 'ದರಬಾರ್ ಆಟ' ಆಡಲು ವಶೀಲಿ ತರಬೇಕಾಗಿತ್ತು. ಆದರೆ ಚಾಂದಬಿಯ ತಂಡವನ್ನು ಸ್ವಯಂ ಸುಲ್ತಾನರೇ ಹೇಳಿಕಳಿಸಿ ಆಮಂತ್ರಿಸಿದ್ದರಂತೆ! ಈವರೆಗೆ ದೂರ ಕುಳಿತು ಈ ಆಟ ನೋಡಿದ್ದ ನಾಯಕ ಈ ಬಾರಿ ಮುದ್ದಾಂ ಸಮೀಪದಲ್ಲೇ ಕೂತು ನೋಡಬೇಕೆಂದು ಸುಲ್ತಾನರ ಸಮೀಪದಲ್ಲೇ ಕೂತ. ಈತ ಅಪರೂಪಕ್ಕೆ ಆಟ ನೋಡಲು ಕೂತದ್ದನ್ನು ಸೊಥಾ ಸುಲ್ತಾನರೇ ಗಮನಿಸಿದ್ದರು.

ಆದರೆ, ಬೆಳಗಾಗಿ ಆಟ ಮುಗಿದಾಗ ಮಾತ್ರ ಆತ ಮೊದಲಿನ ಬಲದೇವನಾಗಿ ಉಳಿದಿರಲಿಲ್ಲ. ಆ ನಟಿಯಿಲ್ಲದ ತನ್ನ ಬಾಳು ಹುಸಿಯೆಂಬ, ವ್ಯರ್ಥವೆಂಬ, ಅಪೂರ್ಣವೆಂಬ ಹತಾಶೆ ಅವನನ್ನು ಆವರಿಸಿತು. ಬೆಳ್ಳಂ ಬೆಳಕಿನ ಕೊನೆಯ ದೃಶ್ಯವಂತೂ ಏನು ಮಾಡಿದರೂ ಕಣ್ಣಿಂದ ಮರೆಯಾಗಲೊಲ್ಲದು. ಅದು ಸತ್ಯಭಾಮೆಗಾಗುವ ಕೃಷ್ಣದರ್ಶನ!

ಕೃಷ್ಣನ ಮಡದಿ ಸತ್ಯಭಾಮೆಯ ವಿರಹದಿಂದ ಸುರುವಾಯ್ತು ಆಟ. ಸತ್ಯಭಾಮೆ ಕೃಷ್ಣನಿಗೆ ಕಾಗದ ಬರೆದಳು. ದೂತೆಯರನ್ನ ಅಟ್ಟಿದಳು. ಕೃಷ್ಣ ಮಾತ್ರ ಬರಲೇ ಇಲ್ಲ. ಸ್ವಯಂ ಕೃಷ್ಣನೇ ದೇವಲೋಕದ ಕೊರವಂಜಿಯ ವೇಷ ಧರಿಸಿ ಶಕುನ ಹೇಳುವುದಾಗಿ ಇವಳ ಮನೆ ಬಾಗಿಲಿಗೆ ಬರುತ್ತಾನೆ. ಸಹಜವಾಗಿಯೇ ಸತ್ಯಭಾಮೆಗೆ ಭವಿಷ್ಯ ಕೇಳುವ ಕುತೂಹಲ ಕೆರಳಿ ಕೇಳಿದಳು. ಆದರೆ, ತನ್ನ ಕಾಲು ತೊಳೆದು ಭಕ್ತಿ ಮಾಡಿದರೆ ಮಾತ್ರ ಹೇಳುವೆನೆಂದು ಕೊರವಂಜಿಯೆಂದಳು. ಕೃಷ್ಣನ ಕಾಲನ್ನು ಬಿಟ್ಟು ತಾನು ಇನ್ನೊಬ್ಬರ ಕಾಲನ್ನು ಮುಟ್ಟಲಾರೆನೆಂದು ಸತ್ಯಭಾಮೆ. ಇಬ್ಬರ ಜಿದ್ದಿನಲ್ಲಿ ನಡುವೆ ದೂತೆ ಪ್ರವೇಶಿಸಿ 'ನೀನೂ ಹೆಣ್ಣು, ಕೊರವಂಜಿಯೂ ಹೆಣ್ಣು, ಹೆಣ್ಣಿನ ಕಾಲು ಹೆಣ್ಣು ತೊಳೆದರೆ ತಪ್ಪಿಲ್ಲ'ವೆಂದು ಸಮಾಧಾನ ಹೇಳಿ ಕೊರವಂಜಿಯ ಕಾಲು ತೊಳೆಯಲು ಸತ್ಯಭಾಮೆಯನ್ನು ಒಪ್ಪಿಸುತ್ತಾಳೆ.

ಸಿದ್ಧತೆಗಳೊಂದಿಗೆ ಸತ್ಯಭಾಮೆ ಕೊರವಂಜಿಯ ಕಾಲು ತೊಳೆಯಲು ಹೋದರೆ ಪಾದದಲ್ಲಿ ನಾಗರ ಹೆಡೆಯ ಮತಿಯಿದೆ! ಇದು ಇರೋದು ಕೃಷ್ಣನ ಪಾದದಲ್ಲಿ ಮಾತ್ರ! ಕೃಷ್ಣ ಕಾಮನ ತಂದೆಯಾದುದರಿಂದ ಅದನ್ನು ನೋಡಿ ಒಂದು ಕ್ಷಣ ಚಿತ್ತ ಚಂಚಲವಾಗಿ ತಕ್ಷಣ ಭಕ್ತಿ ಭಾವಕ್ಕೆ ಬಂದಳು. ಆವಾಗ ಸತ್ಯಭಾಮೆ ಹೇಳುತ್ತಾಳೆ :

'ಕೃಷ್ಣಾ ಈವರೆಗೆ ನಿನ್ನ ಮಡದಿಯಾಗಿ, ನಿನಗಾಗಿ ಹಾರೈಸಿ ಹಂಬಲಿಸಿ ಅತ್ತು ಕರೆದು ಹಾಡಿದ ನನ್ನ ವೇದನೆಯನ್ನ ಕೂತವರೆಲ್ಲ ಕಂಡಿದ್ದಾರೆ. ನನ್ನೊಂದಿಗೆ ಅತ್ತಿದ್ದಾರೆ. ಅಂಥವರೆದುರು ಕೊರವಂಜಿಯಾಗಿ ಬಂದು ನೀನು ಮಾಡಿದ್ದೇನು? ವಿರಹದಲ್ಲಿರುವ ನನ್ನನ್ನ ಸಮಾಧಾನಪಡಿಸುವ ಬದಲು ನಮ್ಮ ಮಗನಾದ ಕಾಮನ ಕೈಗೆ ಕೊಟ್ಟೆಯಲ್ಲೊ! ದೇವರ ದೇವನೆಂದುಕೊಳ್ಳುವ ನಿನಗಿದು ಶೋಭೆಯೇನೊ ಕೃಷ್ಣಾ....'

-ಎಂದು ಅಳುತ್ತ ಹಾಡಿದ್ದು ಕೇಳಿ, ನೋಡಿ ಇಡೀ ಪ್ರೇಕ್ಷಕವರ್ಗ ಕಣ್ಣೀರಲ್ಲಿ ಮುಳುಗಿತು. ಮಹಿಳೆಯರಂತೂ ಬಿಕ್ಕಿ ಬಿಕ್ಕಿ ಅತ್ತರು. 'ಎಂಥಾ ಭಕ್ತಿವಂತೆಗೆ ಎಂಥಾ ಗತಿ ತಂದ! ಇವನೆಂಥಾ ದೇವರ, ಎವ್ವಾ!' ಎಂದು ಮರುಗಿ ಹಾಡು ಮುಗಿಯುವ ತನಕ ಕಣ್ಣೀರು ಸುರಿಸಿದರು. ಸುಲ್ತಾನರ ಹೆಂಗಸರೂ ಕಣ್ಣೀರು ಒರೆಸಿಕೊಂಡರು. ಸತ್ಯಭಾಮೆ ಬಹಳ ಬೇಸರ ಮತ್ತು ನಿರಾಸೆಯಿಂದ ಹೋಗಿ ಬಾಗಿಲಿಕ್ಕಿಕೊಳ್ಳುತ್ತಾಳೆ.

ಆಗಸದಲ್ಲೀಗ ಬೆಳ್ಳಿ ಚಿಕ್ಕೆ ಮೂಡಿ ತಂಗಾಳಿ ಸುಳಿಯಿತೋ ಈತನಕ ಸತ್ಯಭಾಮೆಯ ವಿರಹದಲ್ಲಿ ಭಾಗಿಗಳಾಗಿದ್ದ ಭಕ್ತಾದಿಗಳು ಬೆಳಗಿನ ಚಳಿ ತಾಗಿ ಈಗ ಮೈತುಂಬ ಬಟ್ಟೆ ಹೊದೆವಾಗ ಕೃಷ್ಣಾವತಾರವಾಗುತ್ತದೆ.

ಸತ್ಯಭಾಮೆಯ ಬಾಗಿಲಿಗೆ ಕೃಷ್ಣ ತನ್ನ ಸಹಜಾವಸ್ಥೆಯಲ್ಲಿ ಬಂದಾಗ ಆಳುಕಾಳುಗಳ್ಯಾರೂ ಇರೋದಿಲ್ಲ. ತಾನೇ ಬಾಗಿಲು ಬಡಿಯುತ್ತಾನೆ. ಕತ್ತಲೆಯ ಮಾಯೆ ಇನ್ನೂ ಆವರಿಸಿರುವಾಗ ಕೃಷ್ಣನನ್ನು ಗುರುತಿಸುವಂಥ ಭಕ್ತಿಯ ಎಚ್ಚರ ಸತ್ಯಭಾಮೆಗಿಲ್ಲ.

'ಯಾರದು?'

ಎಂದು ಸತ್ಯಭಾಮೆಯ ದನಿ ಕೇಳಿಸುತ್ತದೆ.

'ಕೃಷ್ಣ ಬಂದಿದ್ದೇನೆ, ಬಾಗಿಲು ತೆಗೆಯೇ ಸತ್ಯಭಾಮೆ'

'ಯಾವ ಕೃಷ್ಣ?'

'ಮತ್ಸ್ಯಾವತಾರ ತಾಳಿ ಮುಳುಗಲಿದ್ದ ಭೂಮಿಯನ್ನ ಎತ್ತಿ ಹಿಡಿದು ಕಾಪಾಡಿದ ಕೃಷ್ಣ ಬಂದಿದ್ದೇನೆ, ಬಾಗಿಲು ತೆಗೆ.'

'ಮತ್ಸ್ಯಾವತಾರ ತಾಳಿದ್ದರೆ ನೀರಿದ್ದಲ್ಲಿ ಹೋಗಿ ಈಜಾಡು. ಇಲ್ಲಿಗ್ಯಾಕೆ ಬಂದೆ? ತೊಲಗು...'

ಕೃಷ್ಣ ನಿರಾಸೆ ತಾಳಲಿಲ್ಲ. ಇನ್ನೊಂದು, ಮತ್ತೊಂದು-ಹೀಗೇ ತನ್ನ ಹತ್ತೂ ಅವತಾರಗಳನ್ನು ಹಾಡಿ ಕುಣಿದು ಅಭಿನಯಿಸಿದರೂ ಸತ್ಯಭಾಮೆಯನ್ನ ಆವರಿಸಿದ ಮಾಯೆ ತೊಲಗಲಿಲ್ಲ. ಬಾಗಿಲು ತೆರೆಯಲಿಲ್ಲ. ಕೃಷ್ಣನೂ ಉಪಾಯಗಾಣದೆ ಪ್ರೇಕ್ಷಕರ ಮಧ್ಯೆ ಹೋಗಿ ಕೂತುಕೊಳ್ಳುತ್ತಾನೆ.

ಈಗ ಅಕ್ಷರಶಃ ಬೆಳಗಾಯಿತು. ಕತ್ತಲೆಯ ಮಾಯೆ ಕರಗಿ ಹೋಗಿ ಹಗಲಿನ ಬೆಳಕುದೋರಿ ಸತ್ಯಭಾಮೆಗೆ ಎಚ್ಚರವಾಗಿ ಹೊರಬರುತ್ತಾಳೆ. ಸೇವಕಿಯನ್ನು ಕರೆದು,

'ಯಾರೋ 'ನಾನು ಕೃಷ್ಣ ಬಂದಿದ್ದೇನೆ. ಬಾಗಿಲು ತೆರೆ' ಅಂತ ಹೇಳುತ್ತ ಬಾಗಿಲು ಬಡೀತಿದ್ದರು, ಯಾರದು?'

'ಯಾರೋ ಹಸಿದ ಭಿಕ್ಷುಕರಿರಬೇಕು, ಅವರಿಗೇನು ಹೊತ್ತಿಲ್ಲ ಗೊತ್ತಿಲ್ಲ'


-ಎಂದು ಹೇಳಿ ಚೇಷ್ಟೆ ಮಾಡುತ್ತಾಳೆ, ಸೇವಕಿ.

'ಛೇ ನಾನು ಕೃಷ್ಣ ಅಂತ ಹೇಳುತ್ತ ತನ್ನ ಹತ್ತೂ ಅವತಾರಗಳನ್ನು ಹೇಳಿದರಲ್ಲಾ!'

ಅಷ್ಟರಲ್ಲಿ ಪೂರ್ವ ದಿಕ್ಕಿನಲ್ಲಿ ಸೂರ್ಯೋದಯದ ಲಕ್ಷಣಗಳು ಕಾಣುತ್ತವೆ. ಮತ್ತೆ ಸತ್ಯಭಾಮೆಯೇ ಹೇಳುತ್ತಾಳೆ:

'ಅದು ಖಂಡಿತ ಕೃಷ್ಣ ಪರಮಾತ್ಮನ ಧ್ವನಿ. ನಾನು ಗುರುತಿಸಬಲ್ಲೆ. ಈಗಷ್ಟೆ ಕೇಳಿದ್ದು ನನಗೆ ಗೊತ್ತು. ದೂರ ಹೋಗಿರಲಾರರು. ಇಲ್ಲೇ ಎಲ್ಲೋ ಇರಬೇಕು. ಹುಡುಕೋಣ ಬಾರೆ.'

ಅದಕ್ಕೆ ಸೇವಕಿ ಹೇಳುತ್ತಾಳೆ: 'ಕೃಷ್ಣ ಪರಮಾತ್ಮ ಎಷ್ಟೆಂದರೂ ಭಕ್ತರ ಮಧ್ಯೆ ಇರುವಂಥವನು. ಅಗೋ ಅವರ ಮಧ್ಯದಲ್ಲಿ ಕೂತಿದ್ದಾನೆ. ಬರ್ರಿ...'



ಕಲೆ: ರಮೇಶ್ ಪಾಚಪಾಂಡೆ

-ಈಗ ಇಬ್ಬರೂ ಪ್ರೇಕ್ಷಕರ ಮಧ್ಯೆ ಕೃಷ್ಣ ಕೂತಲ್ಲಿಗೆ ಹೋಗಿ ಸತ್ಯಭಾಮೆ ತನ್ನ ತಪ್ಪಿಗೆ ಕ್ಷಮೆ ಕೋರಿದಲ್ಲಿ ಆಟ ಮುಗಿಯಿತು.

ಆದರೆ, ಈ ಮಧ್ಯೆ ಕೃಷ್ಣನ ಪಕ್ಕದಲ್ಲೇ ಕೂತಿದ್ದ ಬಲದೇವ ನಾಯಕ ಮತ್ತು ಸತ್ಯಭಾಮೆ ಇಬ್ಬರ ದೃಷ್ಟಿಗಳು ಸೇರಿ ಕ್ಷಣ ಹೊತ್ತು ಇಬ್ಬರೂ ಗರಹೊಡೆದಂತೆ ನಿಂತರು! ಕೃಷ್ಣ ಪರಮಾತ್ಮ ಸತ್ಯಭಾಮೆಯ ಕೈ ಹಿಡಿದು 'ಪ್ರಿಯೆ ಸತ್ಯಭಾಮೆ ಬಾ' ಎಂದಾಗ ಚಾಂದಬಿ ಸಂದರ್ಭಕ್ಕೆ ಬಂದಳು. ಅಲ್ಲಿಗೆ ಮಂಗಳಾರತಿ. ಆಟ ಮುಗಿದರೂ ತಳಕು ಬಿದ್ದ ಇಬ್ಬರ ದೃಷ್ಟಿಗಳನ್ನು ಬೇರ್ಪಡಿಸಲಾಗದೆ ಅದು ಇಬ್ಬರ ಕಲ್ಪನೆಯಲ್ಲಿ ಮುಂದುವರಿಯಿತು.

ಚಾಂದಬಿ ಮತ್ತು ದೇಶಪಾಂಡೆ ಮಾಸ್ತರ ಇಳಿದುಕೊಂಡಲ್ಲಿಗೇ ಬಲದೇವ ನಾಯಕ ಹಾಜರಾಗಿ ಮಾಸ್ತರರಿಗೆ ನಮಸ್ಕಾರ ಮಾಡಿ ತನ್ನ ಪರಿಚಯ ಮಾಡಿಕೊಟ್ಟು ತನ್ನ ಆಸೆಯನ್ನು ತೋಡಿಕೊಂಡ.

ಒಂದು ದೊಡ್ಡ ಸೀಮೆಯ ದೇಸಾಯಿ, ಚಾಂದಬಿಯ ಬದುಕಿಗೆ ಆಧಾರವಾಗಿ ನಿಂತು ಗೌರವಾನ್ವಿತ ಬದುಕು ಕೊಡುತ್ತೇನೆಂದರೆ ಆಗಲಿ, ಕೊಡಲು ಆಗದು ಎಂದರೆ ಸಮ್ಮತಿಯಿಲ್ಲವೆಂದು ಹೇಳಿದರಾಯ್ತೆಂದು ನಿರ್ಧರಿಸಿ, ಹೇಳಿದರು:

'ಅಯ್ಯಾ ನಾಯಕರೆ,

ನೀವು ದೇಸಗತಿಯ ಜಮೀನ್ದಾರರೇ ಆಗಿದ್ದರೂ ಇವಳು ನಿಮ್ಮ ಸೂಳೆಯಾಗಿ ಇರೋದಕ್ಕೆ ಬರುವವಳಲ್ಲ. ನಿಮ್ಮಿಬ್ಬರಿಗೂ ಪಕ್ಕಾ ಮದುವೆ ಆಗಬೇಕು. ತಾಳಿ ಕಟ್ಟಬೇಕು. ಮದುವೆ ಹೆಂಡತಿಯ ಹಕ್ಕು ಬಾಧ್ಯತೆಗಳು ಏನೇನಿವೆಯೋ, ಅವೆಲ್ಲ ಇವಳಿಗೂ ಸಿಕ್ಕಬೇಕು. ಹಾಗಂತ ಕರಾರು ಪತ್ರಕ್ಕೆ ಸಹಿ ಹಾಕಬೇಕು.

ಇದಕ್ಕೆ ತಯಾರಿದ್ದರೆ, ನಾವು ಹೇಳಿದ ತಾರೀಖಿನಂದು ಕಾಗದ ಪತ್ರ ತಯಾರು ಮಾಡಿಕೊಂಡು ಬರಬೇಕು!'

'ಇದಕ್ಕೆ ತಯಾರಿದ್ದರ ನಾ ಒಂದ ಮಾತು ಕೇಳತೀನಿ.'

-ಎಂದು ದೇಶಪಾಂಡೆ ಅವರ ಮಡದಿ ಅಂಬಾಬಾಯಿ ಚಹಾಪಾನಿ ಸಮೇತ ಒಳಗಿನಿಂದ ಬಂದು ಇಬ್ಬರಿಗೂ ಚಹಾ ಕೊಟ್ಟು ಕೇಳಿದಳು:

'ನಾಯಕರ, ನಿಮಗೆಷ್ಟ ಮಂದಿ ಹೆಂಡರಿದ್ದಾರ?'

'ಒಬ್ಬಳು ಹೆಂಡತಿ ಇದ್ದಳು, ಮನೋಳಿ ಸರದೇಸಾಯರ ಪೈಕಿ. ಆಕಿ ಒಬ್ಬ ಗಂಡು ಮಗನ್ನ ಹೆತ್ತು ಸತ್ತು ಹೋದಳು. ಆಮ್ಯಾಲ ನಾ ಬ್ಯಾರೇ ಮದಿವ್ಯಾಗಿಲ್ಲರಿ.'

ಅಂದ ನಾಯಕ.

'ಆ ಹುಡುಗನ ವಯಸ್ಸೆಷ್ಟು?'

'ಹದಿಮೂರು, ಹದಿನಾಕು ಇರಬೇಕ್ರಿ. ಅವ ತನ್ನ ತಾಯೀ ಮನ್ಯಾಗ ಅದಾನ್ರಿ. ಇನ್ನೂ ತನಕ ಶಿವಾಪುರದ ಸಂಪರ್ಕ ಬಂದಿಲ್ಲ.'

'ಆಯ್ತು ನಾಯಕರ ನಾವು ಈಕೀನ್ನ ದೇವದಾಸಿ ಮಗಳು ಅಂಬೋದು ಗೊತ್ತಾಗದ್ಹಂಗ, ಥೇಟ್ ನಮ್ಮ ಮಗಳು ಬ್ಯಾರೇ ಅಲ್ಲ. ಇವಳು ಬ್ಯಾರೇ ಅಲ್ಲ - ಹಾಂಗ ಬೆಳೆಸೀವಿ. ಇನ್ನ ಮುಂದಿಂದ ನಮ್ಮಾ ಯಜಮಾನರು ಹೇಳಿಧಾಂಗ ಕೇಳ್ರಿ....'

ಅಷ್ಟರಲ್ಲಿ ಬಲದೇವ ನಾಯಕರು ಅಡ್ಡಬಾಯಿ ಹಾಕಿ, -

'ನೋಡ್ರಿ ತಾಯೀ ಈಕೀ ಸಲುವಾಗಿ ಬೇಕಿದ್ದರ ಪ್ರಾಣ ಕೊಡತೀನಿ...' ಎಂದ.

***

ಮಾರನೇ ದಿನ ಎಲ್ಲರೂ ಬಯಸಿದಂತೆ ಕಲ್ಲೋಳಿಯ ಹನುಮಂತ ದೇವರ ಸಾಕ್ಷಿಯಲ್ಲಿ ಚಾಂದಬಿ ಮತ್ತು ಬಲದೇವನಾಯ್ಕರ ಮದುವೆಯಾಗಿ ಮಾರನೇ ದಿನ ಗುಲಾಬಿ ಕಣ್ಣೀರುಗರೆಯುತ್ತ ತಂದೆ ತಾಯ್ಗಳಂತಿದ್ದ ದೇಶಪಾಂಡೆ ದಂಪತಿ ಆಶೀರ್ವಾದ ಪಡೆದು ಬಲದೇವ ನಾಯ್ಕರ ಕಾರು ಹತ್ತಿದಳೆಂಬಲ್ಲಿ ನಮ್ಮ ಕಥೆಗೆ ಕಥಾನಾಯಕಿಯ ಪ್ರವೇಶ ಸಂಪೂರ್ಣವಾಯಿತು.


(ಅಂಕಿತ ಪ್ರಕಾಶನ ಹೊರತರುತ್ತಿರುವ 'ಚಾಂದಬೀ ಸರಕಾರ' ಕೃತಿ ಅ. 10ರಂದು ಬಿಡುಗಡೆ ಆಗಲಿದೆ)

ಪಂಚನದಿಗಳಲ್ಲಿ ಕೆನೆಗಟ್ಟಿದ ಕತೆಗಳು

ಮೊದಲ ಓದು

ನೆಲ, ನೀರು, ಗಾಳಿ ಪ್ರಾದೇಶಿಕ ಸ್ವಭಾವದ ವಿವಿಧಾಂಗಗಳಾಗಿದ್ದು, ಇವುಗಳ ಅಂಶಾಂಶಿ ಭಾವ ಸಂಬಂಧಗಳ ಸ್ವರೂಪವೇ ಸೃಜನಶೀಲತೆಯ ಬಹುದೊಡ್ಡ ಭೂಮಿಕೆಯಾಗಿರುತ್ತದೆ. ಇದನ್ನೇ ವಿಮರ್ಶಾ ವಲಯವು ಮಣ್ಣಿನ ವಾಸನೆ, ನೆಲದ ನಿಲುವು, ಪ್ರಾದೇಶಿಕತೆ ಎಂದು ಗ್ರಹಿಸುತ್ತದೆ. ಇಂಥ ಮನೋಧರ್ಮದ ಪಂಚವೀಸ್ ಕತೆಗಳ ಸಂಗ್ರಹವೇ ಕಡಣಿಯ ಬೆರಗು ಪ್ರಕಾಶನವು ರಮೇಶ ಕತ್ತಿ ಅವರ ಸಂಪಾದಕತ್ವದಲ್ಲಿ ಹೊರತಂದ 'ಮರೆಯಾಗದ ಕತೆಗಳು'.

ಬದುಕಿನ ಎಲ್ಲ ಸಂಕಟಗಳಿಗೂ ಸ್ಪಂದಿಸುವ ನೆಲ ವಿಜಯಪುರ. ನೀರಿಲ್ಲದೆ, ಅನ್ನವಿಲ್ಲದೆ, ಬಿರು ಬಿಸಿಲೆನ್ನದೆ ನಿರೀಶ್ವರವಾದಿ ಬದುಕನ್ನು ಅಳವಡಿಸಿಕೊಂಡು ಬೆಂಕಿಯನ್ನೇ ನುಂಗಿ ಬೆಳಕನ್ನು ಹರಿಬಿಡುವ ಸಾವಿರಾರು ಜನ ಸಂತರ, ಶರಣರ ನೆಲೆವೀಡಿದು. ಇಂಥ ಬೀಡಲ್ಲಿ ನೆಲದ ಸಾರಸತ್ವವನ್ನು, ಹುಳಿ ಖಾರ ಒಗರನ್ನು, ಉಪ್ಪಿನಾಂಶವನ್ನು, ರಕ್ತ ಸಂಬಂಧವನ್ನು, ಶೋಷಣೆ, ಬವಣೆ, ಬರ, ಅನ್ಯಾಯ, ಅವಜ್ಞಾನಗಳ ಪರಿಯನ್ನು ಎಳೆಎಳೆಯಾಗಿ ಬಿಡಿಸಿ ತೋರಿಸುವ ಒಂದೊಂದು ಬಗೆಯ ಚಿತ್ರಣ ಇಲ್ಲಿನ ಬಹುತೇಕ ಕತೆಗಳಲ್ಲಿ ಕಣ್ಣುಕಟ್ಟುತ್ತದೆ.



ಮರೆಯಾಗದ ಕತೆಗಳು
(ವಿಜಯಪುರ ಜಿಲ್ಲೆಯ ಕತೆಗಾರರ ಪ್ರಾತಿನಿಧಿಕ ಕಥಾ ಸಂಕಲನ)
ಲೇ: ರಮೇಶ ಕತ್ತಿ
ಪ್ರ: ಬೆರಗು ಪ್ರಕಾಶನ ಕಡಣಿ
ಸಂ: 7795341335


ಪು: 366 ₹400

ಇಲ್ಲಿನ ಕತೆಗಳು ಸವೆದ ಬದುಕಿನ ಕತೆಗಳಲ್ಲ; ಸವಿದ ಬದುಕಿನ ಚಿತ್ರಣಗಳು. ದೇಶೀಯತೆಯ ರಕ್ತ, ಮಾಂಸ, ಎಲುಬುಗಳಿಂದ ನಿರ್ಮಾಣಗೊಂಡಿರುವ ಇಲ್ಲಿನ ಕತೆಗಳಿಗೆ ಜೀವಸತ್ವವಿದೆ. ಸಾರಲೋಕದ ಬೆಳಕಿದೆ. ಓದುಗನ ಮನಸ್ಸನ್ನು ಗಟ್ಟಿಯಾಗಿ ಹಿಡಿದಿಡುವ ಶಕ್ತಿ ಇದೆ. ಓದುತ್ತ ಹೋದಂತೆ ಪ್ರತೀ ಕತೆಯಲ್ಲೂ ಪರಂಪರೆಯ ಪ್ರೀತಿಯೊಂದಿಗೆ ಪ್ರಗತಿಯ ಒಲುಮೆಯೂ ಮಡುವುಗಟ್ಟಿರುವುದು ಗೋಚರವಾಗುತ್ತದೆ. ತಬ್ಬಲಿತನದಿಂದ ಆರಂಭಗೊಂಡು ಹೊಸ ಚಿಗುರಿನ ಜಾಜಿ ಮಲ್ಲಿಗೆಯವರೆಗೆ ಅರಳಿನಿಂತ ಇಲ್ಲಿನ ಒಟ್ಟು ಕತೆಗಳ ನೋಟ ಕನ್ನಡ ಕಥಾನಕದ ಪ್ರಾಚೀನ ಮತ್ತು ಆಧುನಿಕ ಕಾಲಘಟ್ಟದ ಎಲ್ಲ ಮಜಲುಗಳಲ್ಲಿಯೂ ತನ್ನ ಹರವು ಚಾಚಿಕೊಂಡಿರುವುದನ್ನು ಕಾಣಿಸುತ್ತದೆ. ಉದಯ ಹೊರಹೊಮ್ಮಬೇಕು ಎಂಬ ಜೀವಪರ ಧೋರಣೆಯ 'ತಬ್ಬಲಿಗಳು' (ರಾಘವೇಂದ್ರ ಖಾಸನೀಸ) ರಾಷ್ಟ್ರೀಯತೆಗೆ ಬಡಿದಾಡುವವರ ಕುಟುಂಬದಲ್ಲಿನ ಸಹಜ ಗೊಂದಲಗಳನ್ನು ಹೃದಯ ಬಿಚ್ಚಿ ಮಾತನಾಡುವ 'ಬಾಗಿಲು ತೆರೆದಿತ್ತು' (ವರದರಾಜ ಹುಯಿಲಗೋಳ) ಸೇಡೆಂಬ ಹಾವು ಹೆಣ್ಣಿನ ಸ್ವಭಾವಕ್ಕೆ ತಳುಕು ಹಾಕಿಕೊಂಡು ಹೆಡೆ ಬಿಚ್ಚಿ ಕಾಡುವ ಹೃದಯಹೀನತೆಯ ವಿಹಂಗಮ ನೋಟ ಸಾರುವ 'ಬಾರುಕೋಲು' (ಶಾಂತಾದೇವಿ ಕಣವಿ) ಗಾಢವಾಗಿ ಕಾಡುತ್ತವೆ.

ಆಕಾಂಕ್ಷೆ (ಸುಶೀಲಾ ಕಮತಗಿ), ತೂತಿನ ದುಡ್ಡು ಮತ್ತು ನೀರು (ಅರವಿಂದ ಮಾಲಗತ್ತಿ), ಸಂಪಿಗೆ ತಾಯವ್ವ (ಶಂಕರ ಕಟಗಿ), ಒಂದು ಹೆಣದ ಸುತ್ತ (ವೀರಭದ್ರ ಕೌದಿ), ಪರಿವರ್ತನೆ (ಸಂಗಮನಾಥ ಲೋಕಾಪೂರ), ಮಧ್ಯಂತರ (ಕೃಷ್ಣ ಕೊಲ್ಹಾರ ಕುಲಕರ್ಣಿ), ಹೆಬ್ಬಾವಿನ ಕಣ್ಣುಗಳು (ಭಾರತಿ ಪಾಟೀಲ), ಚಮ್ಮಾವುಗೆ (ಎಚ್.ಟಿ.ಪೋತೆ) ಜುಮ್ಮಣ್ಣನ ಕಂಚಿನ ಮೂರ್ತಿ (ಚನ್ನಪ್ಪ ಕಟ್ಟಿ) ಈ ಸಂಕಲನದ ಗಮನಾರ್ಹ ಕತೆಗಳು. ಮಿಕ್ಕ ಕತೆಗಳೂ ಬಾಳಿನ ವಿವಿಧ ಮುಖಗಳನ್ನು ವಿಶ್ಲೇಷಿಸುವಲ್ಲಿ ಸಫಲವಾಗಿವೆ. ಇದೊಂದು ವಿಜಯಪುರ ಜಿಲ್ಲೆಯ ಸಣ್ಣಕತೆಗಳಿಗೆ ಸಂಬಂಧಿಸಿದ ಆಕರಗ್ರಂಥವಾಗಿ ನಿಲ್ಲಬಲ್ಲ ಕೃತಿ ಎಂದರೆ ಅತಿಶಯೋಕ್ತಿ ಏನಿಲ್ಲ. ನವೋದಯ ಕಾಲಘಟ್ಟದಿಂದ ದಲಿತ ಬಂಡಾಯದವರೆಗಿನ ಎಲ್ಲಾ ಪ್ರಯೋಗಗಳ ಕತೆಗಳನ್ನು ಅಡಕಗೊಳಿಸಿರುವ ಕ್ರಮವೂ ಸರಿಯಾಗಿದೆ. ಒಂದು ಶತಮಾನದ ವ್ಯಾಪ್ತಿಯ ಇಪ್ಪತ್ತೈದು ಕತೆಗಳನ್ನು ತುಂಬಾ ಶ್ರಮವಹಿಸಿ ಸಂಪಾದಿಸಿ ಕೊಟ್ಟಿರುವ ಸಾಹಸ ಮೆಚ್ಚುವಂತಿದೆ.

ಅಧ್ಯಯನಶೀಲ ಲೇಖನಗಳ ಗುಚ್ಛ

ವರ್ತಮಾನದ ವಿದ್ಯಮಾನಗಳಿಗೆ ತುಂಬಾ ತೀಕ್ಷ್ಣವಾಗಿ ಪ್ರತಿಕ್ರಿಯಿಸುವ ಕನ್ನಡದ ಬರಹಗಾರರಲ್ಲಿ ರಾಜಾರಾಂ ತಲ್ಲೂರು ಕೂಡ ಒಬ್ಬರು. ಅದು ಕೇಂದ್ರದ ಕೃಷಿ ಕಾಯ್ದೆಗಳೇ ಇರಬಹುದು, ಕೊರೊನಾ ಕಾಲದ ಸಂಕಟಗಳೇ ಆಗಿರಬಹುದು, ಮಾಧ್ಯಮವನ್ನು ಕಾಡುತ್ತಿರುವ ಸಂಗತಿಗಳೇ ಆಗಿರಬಹುದು ವಸ್ತುನಿಷ್ಠವಾದ ವಿಶ್ಲೇಷಣೆಯನ್ನು ತಲ್ಲೂರು ಅವರ ಬರಹದಲ್ಲಿ ಕಾಣಬಹುದು. ಆಯಾ ಸಂದರ್ಭಕ್ಕೆ ತಕ್ಕಂತೆ ವಿವಿಧ ಪತ್ರಿಕೆಗಳಿಗೆ ಅವರು ಬರೆದ ಲೇಖನಗಳ ಸಂಗ್ರಹವೇ ನಮ್ದೇಕತೆ.



ನಮ್ದೇಕತೆ
ಲೇ: ರಾಜಾರಾಂ ತಲ್ಲೂರು
ಪ್ರ: ಪ್ರೊಡಿಜಿ ಪ್ರಿಂಟಿಂಗ್
ಸಂ: 98455 48478

ಪು: 150 ₹164

ವರ್ತಮಾನಕ್ಕೆ ಸ್ಪಂದಿಸುವ ಬರಹಗಳು ಎದುರಿಸುವ ಸಮಸ್ಯೆ ಎಂದರೆ ಕಾಲ ಸರಿದಂತೆ ಅವುಗಳು ಪ್ರಸ್ತುತತೆಯನ್ನು ಕಳೆದುಕೊಳ್ಳುವುದು. ಆದರೆ, ಇಲ್ಲಿನ ಬರಹಗಳು ಆಯಾ ಕಾಲದ ಪ್ರತಿಕ್ರಿಯೆಗಳು ಮಾತ್ರವಾಗಿ ಉಳಿಯದೆ ಸಾರ್ವಕಾಲಿಕತೆಯ ಗುಣವನ್ನು ಪಡೆದು ಅರಳಿರುವುದು. ತಲ್ಲೂರು ಅವರೂ ಪತ್ರಕರ್ತರಾಗಿದ್ದವರು. ಮಾಧ್ಯಮ ರಂಗ ಇಂದು ಎದುರಿಸುತ್ತಿರುವ ವಿಶ್ವಾಸಾರ್ಹತೆಯ ಬಿಕ್ಕಟ್ಟನ್ನು ಅವರು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ. ಸುದ್ದಿಮನೆಯ ಹಲವು ಮಿಥ್‌ಗಳನ್ನು ಒಡೆದಿದ್ದಾರೆ. ಅಲ್ಲಿ ಗೆದ್ದಲು ಕಟ್ಟಿದ್ದನ್ನೂ ಎತ್ತಿ ತೋರಿಸಿದ್ದಾರೆ.

ಕೃಷಿ ಕಾಯ್ದೆಗಳ ಕುರಿತು ಅವರು ನೀಡಿರುವ ಒಳನೋಟಗಳು ಕೃಷಿಕ ಸಮುದಾಯ ಎದುರಿಸುತ್ತಿರುವ ಅಪಾಯದ ಮುನ್ಸೂಚನೆಯನ್ನು ಢಾಳಾಗಿ ಎತ್ತಿ ತೋರಬಲ್ಲಂಥವು. ಕಾರ್ಪೊರೇಟ್ ಕಂಪನಿಗಳೂ ರೈತ ಎಂಬ ಅರ್ಥವ್ಯಾಪ್ತಿಯಲ್ಲಿ ಬರಲಿವೆ ಎಂದೂ ಅವರು ಎಚ್ಚರಿಸುತ್ತಾರೆ. ತಮ್ಮ ಪ್ರತೀ ವಾದಕ್ಕೆ ಪೂರಕವಾಗಿ ಅವರು ಕೊಡುವ ಅಂಕಿ ಅಂಶಗಳು ಸಮಸ್ಯೆಯ ಗಹನತೆಯನ್ನು ಕಟ್ಟಿಕೊಡುತ್ತವೆ. ಜರ್ನಲಿಸ್ಟಿಕ್ ದೃಷ್ಟಿಕೋನದ ಇಲ್ಲಿನ ಬರಹಗಳು ಹಿಂದಣವನ್ನು ಚರ್ಚಿಸುತ್ತಲೇ ಭವಿಷ್ಯದ ಮೇಲೂ ಬೆಳಕು ಹರಿಸುತ್ತವೆ.

ಪ್ರಾದೇಶಿಕತೆಯ ದಟ್ಟ ಚಿತ್ರಣ

ಕೇಶವ ಶರ್ಮ ಕೆ.

ವಿಮರ್ಶೆ

'ಬಯಲರಸಿ ಹೊರಟವಳು' ಛಾಯಾಭಟ್ ಅವರು ಬರೆದ ಕತೆಗಳ ಸಂಕಲನ. ಇದಕ್ಕೆ ಛಂದ ಪುಸ್ತಕ ಬಹುಮಾನವೂ ದೊರೆತಿದೆ. ಈ ಸಂಕಲನದಲ್ಲಿ ಒಟ್ಟು ಹತ್ತು ಕತೆಗಳು ಇವೆ. ಅವುಗಳು ಒಂದು ದೃಷ್ಟಿಯಿಂದ ಪ್ರದೇಶ ಮತ್ತು ಅದರ ಚರಿತ್ರೆಯನ್ನು ಹೇಳುತ್ತವೆ. ಪ್ರದೇಶ ಮತ್ತು ಅದರ ಸಮಸ್ಯೆಗಳನ್ನು ಕತೆಗಾರ್ತಿ ಇಲ್ಲಿ ಅತ್ಯಂತ ಸೂಕ್ಷ್ಮವಾಗಿ ಎತ್ತಿಕೊಂಡಿದ್ದಾರೆ.

ವಾಸ್ತವವಾಗಿ ಈವತ್ತು ನಮ್ಮ ಎದುರು ನಾನಾ ನಮೂನೆಯ ಪ್ರಶ್ನೆಗಳು ಇವೆ. ಅವುಗಳನ್ನು ನೋಡಲು ನಮಗೆ ಸಮಾಜವಿಜ್ಞಾನ ಮತ್ತು ಚರಿತ್ರೆಯು ಹೇಗೆ ಅನುಕೂಲವನ್ನು ಮಾಡಿಕೊಡುತ್ತವೆಯೋ ಹಾಗೆಯೇ ಕಥನಗಳೂ ಸಹಾಯವನ್ನು ಮಾಡುತ್ತವೆ. ಇಲ್ಲಿನ ಕತೆಗಳಿಗೂ ಅಂತಹ ಗುಣವಿದೆ. ವಾಸ್ತವ ಮಾರ್ಗವನ್ನು ಅವುಗಳು ಅನುಸರಿಸಿವೆ. ಸಂಕಲನದ ಮೊದಲ ಕತೆ ಮನುಷ್ಯ ಮತ್ತು ನಿಸರ್ಗದ ಸಂಬಂಧವನ್ನು ನಿರೂಪಿಸುತ್ತದೆ. ಒಂದು ಹುಣಿಸೆ ಮರವು ಇದರಲ್ಲಿ ಕೇಂದ್ರ ಪಾತ್ರವನ್ನು ವಹಿಸಿದ್ದು ಗಮನಾರ್ಹ. ಈ ಕತೆಯಲ್ಲಿ ನೆರೆ ಮತ್ತು ಅದರ ನಡುವೆ ಸಿಕ್ಕಿ ಹಾಕಿಕೊಂಡ ಮನುಷ್ಯರ ಜೀವನ ಕ್ರಮವೂ ಮುಖ್ಯವಾಗಿದೆ. ಇದು ಈ ಸಂಕಲನದ ಮುಖ್ಯ ಕತೆಯೂ ಹೌದು.

ಈ ಸಂಕಲನದ ಮತ್ತೊಂದು ಕತೆ 'ಕೋಲ್ಮಿಂಚು'. ಇದರಲ್ಲಿಯೂ ಪಲ್ಲಟವಾಗುತ್ತಿರುವ ಸಮಾಜ ಮತ್ತು ಪರಿಸರದ ಚಿತ್ರಣವಿದೆ. ಈಗಲೂ ನಮ್ಮ ಗ್ರಾಮ ಜಗತ್ತು ಹೇಗೆ ಇದೆ ಎಂದು ಹೇಳುವುದು ಮಾತ್ರವಲ್ಲ, ಅಲ್ಲಿನ ಮನುಷ್ಯರ ಕಷ್ಟಗಳು ಹೇಗೆ ಇರುತ್ತವೆ ಎನ್ನುವುದನ್ನು ಇದು ಹೇಳುತ್ತದೆ. ದಟ್ಟ ಕಾಡಿನ ಚಿತ್ರಣದಿಂದ ಈ ಕತೆ ಪ್ರಾರಂಭವಾಗುತ್ತದೆ. ಅದರ ವರ್ಣನೆಯೇ ನಮ್ಮ ಗಮನವನ್ನು ಸೆಳೆಯುತ್ತದೆ.

ಚಾರಿತ್ರಿಕ ವ್ಯಂಗ್ಯ ಎಂದರೆ ನಮ್ಮ ಹಳ್ಳಿಗಳಿಗೆ ಈವತ್ತು ಕೂಡಾ ಅನೇಕ ಸವಲತ್ತುಗಳು ಸಿಕ್ಕಿಲ್ಲ. ಮುಂಡಗೋಡು, ಜೋಯಿಡಾ ಪ್ರದೇಶಗಳು ಇದಕ್ಕೆ ದ್ಯೋತಕ. ಇವು ಉತ್ತರ ಕನ್ನಡಕ್ಕೆ ಸೇರಿದ ಪ್ರದೇಶಗಳು. ಇಲ್ಲಿ ಸರ್ಕಾರವು ತಿರುಗಿ ನೋಡಿದ ಹಾಗೆ ಕಾಣುವುದಿಲ್ಲ. ಅದನ್ನೇ ನಾವು ಕತೆಯ ವಿನ್ಯಾಸದಲ್ಲಿ ನೋಡುತ್ತೇವೆ. ನಿತ್ಯದ ಜೀವನವು ಒಂದು ಹಂತದಲ್ಲಿ ಚರಿತ್ರೆಯೂ ಆಗುತ್ತದೆ ಎನ್ನುವ ಸೂಚನೆಯನ್ನು ಈ ಕತೆಗಳು ನಿರೂಪಿಸುತ್ತವೆ.



ಬಯಲರಸಿ ಹೊರಟವಳು
ಲೇ: ಛಾಯಭಟ್
ಪ್ರ: ಛಂದ ಪುಸ್ತಕ
ಸಂ: 98444 22782

ಪು: 128 ₹120

ನಿರ್ದಿಷ್ಟವಾದ ಪ್ರದೇಶ, ಅಲ್ಲಿನ ನಿತ್ಯದ ಜೀವನ ಹಾಗೂ ಅವೇ ಚರಿತ್ರೆಯಾಗುವ ವಿಧಾನ ಛಾಯಾ ಭಟ್ ಕತೆಗಳ ಲಕ್ಷಣ. ಚರಿತ್ರೆ ಎಂದರೆ ಅದು ದೊಡ್ಡ ಮನುಷ್ಯರದ್ದೇ ಆಗಬೇಕಾಗಿಲ್ಲ. ಸಾಮಾನ್ಯರೂ ಚರಿತ್ರೆಯ ಭಾಗವೇ ಆಗಿರುತ್ತಾರೆ. ಅದರ ಜೊತೆಗೆ ಸಾಹಿತ್ಯ ಮತ್ತು ಚರಿತ್ರೆಯ ಪ್ರಶ್ನೆಗೆ ಒಂದು ದ್ವಂದ್ವಾತ್ಮಕ ಸಂಬಂಧವಿದೆ ಎನ್ನುವುದನ್ನು ಮರೆಯಬಾರದು. ಆದ್ದರಿಂದ ಈವತ್ತು ಅನೇಕ ಕತೆಗಾರರು ಸಾಹಿತ್ಯ ಮತ್ತು ಚರಿತ್ರೆ ಕುರಿತಾದ ಕಥನವನ್ನು ವಿವಿಧ ನೆಲೆಯಲ್ಲಿ ಚರ್ಚೆ ಮಾಡುತ್ತಿದ್ದಾರೆ.

ಚರಿತ್ರೆ ಮತ್ತು ಅದರ ಬರವಣಿಗೆ ಎನ್ನುವುದು ಹೇಗೆ ನಮಗೆ ಒಂದು ಕಥನದಂತೆ ಕಾಣುತ್ತದೆಯೋ ಅದೇ ರೀತಿಯಲ್ಲಿ ಕಥನವು ನಮಗೆ ಚರಿತ್ರೆಯ ಥರ ಕಾಣುತ್ತದೆ. ಇಲ್ಲಿನ ಕತೆಗಳಿಗೆ ಈ ಬಗೆಯ ಆವರಣವೂ ಇದೆ. 'ಬಯಲರಸಿ ಹೊರಟವಳು' ಕತೆಯು ಈ ಕಾರಣದಿಂದ ಮುಖ್ಯವಾಗಿದೆ. ಕಥನ ಮತ್ತು ಅದರ ಆವರಣವು ಉತ್ತರಕನ್ನಡ ಜಿಲ್ಲೆಯ ಸಮಸ್ಯೆಯನ್ನು ಹೇಳುತ್ತಿದೆ. ಈ ಕಥನಗಳಿಗೆ ತಂತ್ರಗಳು ಮುಖ್ಯವಾಗಿಲ್ಲ. ಹೀಗಾಗಿ ಇಲ್ಲಿನ ಕಥನಗಳು ಶೈಲಿಯ ಮಾದಕತೆಗೆ ಮಾರು ಹೋಗಿಲ್ಲ. ನಿರೂಪಣೆ ಮತ್ತು ಅದರ ತಂತ್ರಗಳನ್ನು ಮಾತ್ರವೇ ಅವಲಂಬಿಸಿಲ್ಲ.

ಒಂದು ತಲೆಮಾರಿನವರು ಮತ್ತೊಂದು ತಲೆಮಾರಿನವರನ್ನು ಹೇಗೆ ನೋಡುತ್ತಾರೆ ಎನ್ನುವುದು 'ತೊಟ್ಟು ಕಳಚಿದ ಹೂವು' ಕತೆಯ ಪ್ರಮುಖ ಪ್ರಶ್ನೆ. ಅದನ್ನು ಅತ್ತೆ ಮತ್ತು ಸೊಸೆಯರ ಸಂಬಂಧದ ಮೂಲಕ ಕತೆಗಾರ್ತಿ ವಿವರಿಸುತ್ತಾರೆ. ನಗರ ಮತ್ತು ಅಲ್ಲಿನ ಮನುಷ್ಯರು ಹಾಗೂ ಹಳ್ಳಿಗಳ ಜೊತೆಗೆ ಇರುವ ಸಂಬಂಧವನ್ನು 'ಸುಳಿ' ಕತೆಯು ಹೇಳುತ್ತದೆ. 'ಶುಭ್ರಜ್ಯೋತ್ಸ್ನೇ' ಕತೆ ಕೂಡಾ ಇದನ್ನೇ ಹೇಳುತ್ತದೆ.

ಇಲ್ಲಿನ ಕತೆಗಳನ್ನು ಓದುವಾಗ ಒಂದು ಒಳ್ಳೆಯ ಅನುಭವವಾಗುತ್ತದೆ. ಸಂಕಲನದ ಎಲ್ಲಾ ಕತೆಗಳು ಚೆನ್ನಾಗಿವೆ ಎಂದು ಅರ್ಥವಲ್ಲ. ಹಾಗೆ ಇರಲು ಸಾಧ್ಯವೇ ಇಲ್ಲ. ಕೆಲವು ಕಡೆಗೆ ತುಂಬಾ ವಿವರಣೆಗಳು ಬರುತ್ತವೆ. ಅವುಗಳು ಅಗತ್ಯವಿಲ್ಲ ಎಂದು ಅನಿಸುತ್ತದೆ. 'ಆ ಕಡು ಕಪ್ಪು ಕಣ್ಣುಗಳು' ಇದಕ್ಕೆ ಉದಾಹರಣೆ ಆಗಿದೆ. ವಿವರಗಳ ಸೊಕ್ಕು ಜಾಸ್ತಿಯಾದರೆ ಆಶಯಗಳ ಅಂಶವು ಕಡಿಮೆಯಾಗುತ್ತದೆ. ಈ ಸಮಸ್ಯೆಯನ್ನು ಇಲ್ಲಿನ ಕೆಲವು ಕತೆಗಳಲ್ಲಿ ಕಾಣುತ್ತೇವೆ. ಒಂದು ಪ್ರಶ್ನೆಯನ್ನು ನಾವು ಗಮನಿಸಬೇಕು: ಈವತ್ತು ಬರೆಯುವವರ ಕಥನದ ಕ್ರಮ ಮತ್ತು ಅವರು ಎತ್ತಿಕೊಳ್ಳುವ ಸಮಸ್ಯೆಗಳು ಹಿಂದಿನ ಕ್ರಮದಂತೆ ಇಲ್ಲ. ಒಂದು ಹೊಸತನ ಕಾಣುತ್ತದೆ.

ಮೀನಿನ ನೈವೇದ್ಯ!

8ನೇ ಪುಟದಿಂದ...

ತರಕಾಸಿ ಸುಮಾರು ಐದು ಶತಮಾನಗಳಿಂದ ಒಡಿಶಾದಲ್ಲಿ ಪ್ರಚಲಿತವಾಗಿರುವ, ಧಾರ್ಮಿಕ ಆಯಾಮವನ್ನೂ ಹೊಂದಿರುವ ಕಲಾಪ್ರಕಾರ. ಹೆಚ್ಚಿನವರು ಹೇಳುವಂತೆ, ಮೊಘಲರ ಆಳ್ವಿಕೆಯ ಕಾಲದಲ್ಲಿ ಈ ಕಲಾಪ್ರಕಾರ ಆರಂಭವಾಯಿತು. ಇನ್ನು ಕೆಲವು ಮೂಲಗಳು, ಕ್ರಿ.ಪೂ 2500ರಲ್ಲಿ ಮೆಸಪಟೋಮಿಯಾ ಮತ್ತು ಈಜಿಪ್ಟ್‌ನಿಂದ ನಡೆಯುತ್ತಿದ್ದ ವಾಣಿಜ್ಯ ವ್ಯವಹಾರಗಳಿಂದ ಈ ಆಭರಣ ತಯಾರಿಕಾ ವಿಧಾನ ಏಷ್ಯಾ ಖಂಡದಲ್ಲೂ ಜನಪ್ರಿಯವಾಯಿತು, ಈಗಲೂ ಗ್ರೀಕ್ ಮತ್ತು ಭಾರತೀಯ ಆಭರಣ ವಿನ್ಯಾಸಗಳಿರುವ ಸಾಮ್ಯತೆ ಇದಕ್ಕೆ ಸ್ಪಷ್ಟ ನಿದರ್ಶನ ಎನ್ನುತ್ತವೆ.

ಕಟಕ್‌ನಲ್ಲಿರುವ ನೂರಕ್ಕೂ ಹೆಚ್ಚು ಕುಟುಂಬಗಳು ತಲೆತಲಾಂತರದಿಂದ ಇದನ್ನು ತಮ್ಮ ವೃತ್ತಿಯನ್ನಾಗಿ ಸ್ವೀಕರಿಸಿವೆ. ಸಾಂಪ್ರದಾಯಿಕವಾಗಿ ಚಿನ್ನದ ಕೆಲಸ ಮಾಡುವ ಅಕ್ಕಸಾಲಿಗರು ಇವರಾಗಿದ್ದು ಒರಿಯಾ ಭಾಷೆಯಲ್ಲಿ ಇವರನ್ನು ರೂಪ್ಯಕರಾಸ್ ಎಂದು ಕರೆಯಲಾಗುತ್ತದೆ. ಮನೆಯಲ್ಲಿ ಹಿರಿಯರಿಂದ ಶಿಕ್ಷಣ ಪಡೆಯುವ ಈ ಕಲಾವಿದರಲ್ಲಿ ಹೆಚ್ಚಿನವರು ಬನಿಯಾಗಳು. ಆಭರಣಗಳನ್ನು ಕೆತ್ತನೆ/ ಕುಸುರಿಯಿಂದ ಮಾಡಲಾಗುವುದಿಲ್ಲ. ಬದಲಾಗಿ ಕೂದಲೆಳೆಯಷ್ಟು ಸೂಕ್ಷ್ಮ ತಂತಿಯನ್ನು ಸ್ವಲ್ಪ ಸ್ವಲ್ಪವೇ ಬಾಗಿಸಿ, ಜೋಡಿಸಿ ಬೇಕಾದ ರೂಪವನ್ನು ನೀಡಲಾಗುತ್ತದೆ.

ಮೊದಲು ಹಾಳೆಯ ಮೇಲೆ ಬೇಕಾದ ಚಿತ್ರ ಬಿಡಿಸಲಾಗುತ್ತದೆ. ನಂತರ ದಪ್ಪ ತಂತಿಗಳಿಂದ ಹೊರ ವಿನ್ಯಾಸ ಮಾಡಲಾಗುತ್ತದೆ. ಅದರೊಳಗೆ ಸಣ್ಣ ತಂತಿಗಳನ್ನು ಕೈಯಿಂದ ಕೂರಿಸಿ ಬೆಂಕಿಯ ಶಾಖದಿಂದ ಜೋಡಿಸಲಾಗುತ್ತದೆ. ಸಾಕಷ್ಟು ಶ್ರಮ, ಸಮಯ, ಸಹನೆ, ನೈಪುಣ್ಯ ಬೇಡುವ ಕೆಲಸವಿದು! ಚಕ್ರ, ಹೂವು, ಶಂಖ, ರಥ, ಮೀನು, ಹಕ್ಕಿ ಕೆಲವು ಜನಪ್ರಿಯ ವಿನ್ಯಾಸಗಳು. ಒಡಿಸ್ಸಿ ನೃತ್ಯ ಕಲಾವಿದರು ಪ್ರದರ್ಶನ ನೀಡುವಾಗ ಈ ಆಭರಣಗಳನ್ನು ಧರಿಸುವುದು ಸಂಪ್ರದಾಯ. ಒರಿಯಾ ವಧುಗಳಲ್ಲಿ ತರಕಾಸಿ ಕಾಲುಂಗುರ ಮತ್ತು ಗೆಜ್ಜೆ ಪವಿತ್ರ ಸಂಕೇತಗಳು. ಒಡಿಶಾದ ಜನಜೀವನದಲ್ಲಿ ಈ ಆಭರಣಗಳು ಮಹತ್ವದ ಸ್ಥಾನ ಪಡೆದಿವೆ.

ಮಾಡಿದ್ದು ಮಣ್ಣಿನಲ್ಲಿ, ತಿನ್ನುವುದು ಸಾಮಾನ್ಯ ಜನರ ಆಹಾರ ಮೀನು, ಅಲಂಕಾರಕ್ಕೆ ಬೆಳ್ಳಿಯೇಕೆ ಎಂದರೆ 'ದೇವಿ ಮಾ, ನಮ್ಮೆಲ್ಲರ ಅಮ್ಮ. ಅವಳ ಮಡಿಲಲ್ಲಿ ಬೆಳೆಯುವವರು ನಾವು. ಅಮ್ಮನಿಗೆ ಅಲಂಕಾರ ಬೇಡವೇ? ನಮ್ಮ ಸಾಂಪ್ರದಾಯಿಕ ಕಲೆಯ ಮೂಲಕ ಭಕ್ತಿ-ಪ್ರೀತಿಯ ಸಿಂಗಾರ ಇದು. ಎಷ್ಟೇ ಕಷ್ಟವಾದರೂ ಸರಿ ಅಮ್ಮನಿಗೆ ಅಲಂಕಾರ ತಪ್ಪಿಸುವುದಿಲ್ಲ!' ಎನ್ನುತ್ತಾರೆ. ದಶಮಿ ನಂತರ ಮಣ್ಣಿನ ಮೂರ್ತಿಯನ್ನು ಪುರಿಘಾಟ್ ಬಳಿ ಮೆರವಣಿಗೆಯಲ್ಲಿ ಒಯ್ದು ನದಿಯಲ್ಲಿ ವಿಸರ್ಜಿಸುವಾಗ ಕೈಮುಗಿದು 'ಮುಂದಿನ ಬಾರಿ ತಪ್ಪದೇ ಬಾರಮ್ಮಾ' ಎಂದು ಪ್ರಾರ್ಥಿಸುವ ಇವರ ಪಾಲಿಗೆ ದಸರೆ, ಅಮ್ಮನ ಹಬ್ಬ!

ಅಲಂಕಾರ ಭೂಷಿತೆ

ಜೇಡಿ ಮಣ್ಣಿನಲ್ಲಿ ತಯಾರಾದ ಸುಮಾರು ನೂರೈವತ್ತಕ್ಕೂ ಹೆಚ್ಚು ದೇವಿಯರನ್ನು ನವರಾತ್ರಿಯ ಮೊದಲ ದಿನ ದೊಡ್ಡ-ಸಣ್ಣ ಪೆಂಡಾಲ್‌ಗಳಲ್ಲಿ (ಮೆಢೊ) ಅಲಂಕಾರ ಮಾಡಿ ಶಾಸ್ತ್ರೋಕ್ತವಾಗಿ ಸ್ಥಾಪಿಸಿ ಪೂಜೆ ಸಲ್ಲಿಸಲಾಗುತ್ತದೆ. ಇದರಲ್ಲಿ ಸುಮಾರು ಇಪ್ಪತ್ತಕ್ಕೂ ಹೆಚ್ಚು ದೊಡ್ಡ ಪೆಂಡಾಲ್‌ಗಳಲ್ಲಿ ಬೆಳ್ಳಿಯ ಅಲಂಕಾರವಿರುತ್ತದೆ. ಜಗಮಗಿಸುವ ಈ ಪೆಂಡಾಲ್‌ಗಳಲ್ಲಿ ಇರುವುದೆಲ್ಲವೂ ಬೆಳ್ಳಿ-ಬಂಗಾರದ ಅಲಂಕಾರಗಳು!

ಬೆಳ್ಳಿಯ ನಗರ ಎಂದೇ ಪ್ರಸಿದ್ಧವಾಗಿರುವ, ದುರ್ಗೆ ತಮ್ಮನ್ನು ಕಾಯುವ ಅಮ್ಮ ಎಂದು ನಂಬಿರುವ ಕಟಕ್‌ನಲ್ಲಿ ಬೆಳ್ಳಿ ಬೆಲೆ ಎಷ್ಟೇ ಹೆಚ್ಚಾದರೂ ದೇವಿಯ ಅಲಂಕಾರ ಮಾತ್ರ ಪೈಪೋಟಿಯಲ್ಲಿ ನಡೆಯುತ್ತದೆ. ದೇವಿಯ ವಿಶೇಷ ಅಲಂಕಾರ ಚಾಂದಿಮೇಢಾ. ದೇವಿಯ ಕಿರೀಟ ಮತ್ತು ಸುತ್ತಲಿರುವ ಪ್ರಭಾವಳಿಗೆ ಈ ಹೆಸರು. ಇದರೊಂದಿಗೆ ವಿವಿಧ ಸನ್ನಿವೇಶ, ಸ್ತಬ್ಧ ಚಿತ್ರದ ಹಿನ್ನೆಲೆಯಲ್ಲಿ ದೇವಿಯನ್ನು ಸ್ಥಾಪಿಸಲಾಗುತ್ತದೆ. ದೇವಿಯ ಮೂರ್ತಿ ಮಣ್ಣಿನದ್ದಾದರೂ ಕಟಕ್‌ನ ವಿಶಿಷ್ಟ 'ಕಟಕಿ ತರಕಾಸಿ' ವಿಧಾನದಲ್ಲಿ ತಯಾರಾದ ಈ ಅಲಂಕಾರಿಕ ಸಾಮಗ್ರಿಗಳು ಬೆಳ್ಳಿಯವು. ಅಲಂಕಾರಭೂಷಿತೆ ದೇವಿಯ ದರ್ಶನಕ್ಕೆ ನಿತ್ಯ ಸಾವಿರಾರು ಜನ ಸರದಿಯಲ್ಲಿ ನಿಂತು ಕಾಯುತ್ತಾರೆ.

ಕರುಳಬಳ್ಳಿಯ ವಿಷಾದದಲ್ಲಿ ಮೂಡುವ ಮಗಳ ಬಿಂಬ

ಗೌರಿ

ಒಳನೋಟ

'ಮುದ್ದು ಮಗಳೇ' ಎಂಬ ಶೀರ್ಷಿಕೆಯನ್ನು ಓದಿದಾಕ್ಷಣವೇ ಬಿರುಸೆಳೆಯಲ್ಲಿ ಒಮ್ಮಿಂದೊಮ್ಮೆಲೇ ತಂಗಾಳಿ ಬೀಸಿ ಮೈಮನವೆಲ್ಲ ಉಲ್ಲಸಿತಗೊಳ್ಳುವ ಅನುಭವವಾಗುತ್ತದೆ. 'ಮಗಳು' ಎಂಬ ಶಬ್ದಕ್ಕೆ ಇರುವ ಶಕ್ತಿ ಅದು. ಆದರೆ ಅದರ ಕೆಳಗಿನ ಸಾಲು ಓದಿದಾಗ ಮೈ ಆವರಿಸಿದ್ದ ತಂಗಾಳಿಯೇ ಬೆಂಕಿನಾಲಗೆ ಚಾಚಿ ಧಗಧಗ ದಹಿಸಿದಂತೆ ಭಾಸವಾಗುತ್ತದೆ. ಆ ಸಾಲು ಹೀಗಿದೆ: 'ಮತ್ತೊಮ್ಮೆ ಹುಟ್ಟಿ ಬಾ...'

ಲತಾ ಶ್ರೀನಿವಾಸ್ ಅವರು ಬರೆದುಕೊಂಡಿರುವ ಈ ಪುಸ್ತಕದ ಪ್ರತೀ ಪುಟವೂ ಮುದ್ದು ಮಗಳ ನೆನಪು ಉಕ್ಕಿಸುವ ವಿಷಾದರಸದಲ್ಲಿ ಅದ್ದಿ ತೆಗೆದಂತಿದೆ. ಹೇಳಿಕೊಳ್ಳಲು ಇದು 'ತಾಯಿಯೊಬ್ಬಳ ಆತ್ಮಕಥೆ'. ನಿರೂಪಣೆಯ ಕ್ರಮದಲ್ಲಿ ಇದು ತಾಯಿ, ಭೌತಿಕವಾಗಿ ತನ್ನನ್ನು ತೊರೆದಿರುವ ಮಗಳಿಗೆ ಬರೆದ ಅತ್ಯಾಪ್ತ ಓಲೆ. ಮಗಳಿಗಷ್ಟೇ ಅಲ್ಲ, ಸುತ್ತಲಿನ ಲೋಕವೂ ತನ್ನ ಮಾತನ್ನು ಕೇಳಲಿ ಎಂಬ ಅಂತರಂಗದ ಒತ್ತಡವೂ ಇಲ್ಲಿದೆ.

ಬಾಲ್ಯದಿಂದಲೇ ಅಪರೂಪದ ಕಾಯಿಲೆಯ ರೂಪದಲ್ಲಿ ಪ್ರಿಯಾಂಕಾಳ ಪುಟ್ಟ ಪಾದಗಳ ಹೆಜ್ಜೆಗಳನ್ನೇ ಅನುಸರಿಸುತ್ತ ಬಂದ ಮೃತ್ಯು ತಾರುಣ್ಯದ ಹೊಸ್ತಿಲಲ್ಲಿ ಜೀವವನ್ನೇ ಕಬಳಿಸುತ್ತಾನೆ. ಅದು ಮಗಳ ಯಾತನೆಯ ಸುದೀರ್ಘ ಯಾನದ ಅಂತ್ಯವೂ ಹೌದು; ಅಮ್ಮನ ಅಸೀಮ ನೋವಿನ ನಡಿಗೆಯ ಆರಂಭವೂ ಹೌದು.

ಸಾವಿನ ಬೆಳಕಿನಲ್ಲಿ ಬದುಕಿನ ಮಬ್ಬುಗತ್ತಲಿನ ದಾರಿಯನ್ನು ನೋಡತೊಡಗಿದಾಗ ಎಲ್ಲವೂ ಬೇರೆಯದೇ ಆಗಿ ಹೊಳೆಯಲಾರಂಭಿಸುತ್ತದೆ. ಇಲ್ಲಿ ಲತಾ ಶ್ರೀನಿವಾಸ್ ಆ ಹೊಳಪಿನ ದಾರಿಯಲ್ಲಿ ನಮ್ಮನ್ನೂ ಕರೆದುಕೊಂಡುಹೋಗುತ್ತಾರೆ. 'ಶ್ರಾವಣಮಾಸದ ಚಳಿಮಳೆಯ ಜೊತೆಯಲ್ಲಿ ನಿನ್ನ ನೆನಪು ಜೀವವನ್ನೇ ತೋಯಿಸುವ ಕೊರಗು ಕಂದಾ, ನೀನು ನನ್ನ ಮಡಿಲಿಗೆ ಬಂದಾಗ ನನಗಿನ್ನೂ ಹತ್ತೊಂಬತ್ತು ತುಂಬಿರಲಿಲ್ಲ' ಎಂದು ಆರಂಭವಾಗುವ ಈ ಬರಹ ಮಗಳ ಜೊತೆಜೊತೆಯಲ್ಲಿಯೇ ಅಮ್ಮನೂ ಬೆಳೆಯುತ್ತ, ಬೆಳಗುತ್ತ ಹೋಗುವ ಪರಿಯನ್ನು ನಿರೂಪಿಸುತ್ತ ಹೋಗುತ್ತದೆ.




ಮುದ್ದು ಮಗಳೇ ಮತ್ತೊಮ್ಮೆ ಹುಟ್ಟಿ ಬಾ...
ಲೇ: ಲತಾ ಶ್ರೀನಿವಾಸ್
ಪ್ರ: ಕಾಜಾಣ
ಸಂ: 9483793275

ಪು: 144 ₹200

ಮೇಲ್ನೋಟಕ್ಕೆ 'ಅಲರ್ಜಿ' ಎಂಬ ಸಾಧಾರಣ ಮುಖವಾಡ ತೊಟ್ಟ ಅಸ್ವಾಸ್ಥ್ಯ, ಮಗಳ ಜೀವವನ್ನೇ ನುಂಗಿ ನೊಣೆಯಬಲ್ಲದು ಎಂಬ ಕಲ್ಪನೆ ಯಾವ ತಾಯಿಗೆ ತಾನೇ ಇದ್ದೀತು? ಒಂದು ಸಾವು ಕುಟುಂಬದೊಳಗೆ ತಂದಿಡುವ ನಿರ್ವಾತ, ಅದರಿಂದ ಹುಟ್ಟಿಕೊಳ್ಳುವ ಸಂಕಟಗಳನ್ನು ಹೇಳುತ್ತಲೇ ಒಡಲ ಉರಿಗೆ ಹೊರಗಿನ ಜನರು ತಮಗೆ ಗೊತ್ತಿಲ್ಲದಂತೆ ತುಪ್ಪ ಸುರಿಯುವ ಕ್ರೌರ್ಯವನ್ನೂ ಈ ಪುಸ್ತಕ ತೆರೆದಿಡುತ್ತದೆ.

'ಮತ್ತೆ ಹುಟ್ಟಿ ಬಾ...' ಎಂಬ ಕರೆಯಲ್ಲಿಯೇ ಮಗಳ ನೆನಪುಗಳ ಜೊತೆಗೆ ಅವಳೊಂದಿಗೆ ಮತ್ತೆ ಬದುಕುವ ಅಮ್ಮನ ಹಂಬಲವೂ ಇದೆ. ಈ ಹಂಬಲದ ಪಾಲನ್ನು ನಮಗೂ ನೀಡುವಷ್ಟು ಈ ಪುಸ್ತಕ ಆಪ್ತವಾಗಿದೆ.

‘ಅನಿಶ್ಚಿತತೆ’ಯ ನಿಶ್ಚಿತ ಮುದ್ರಕಗಳು



ಭೂಮಿಯ ಕುಟುಂಬವೇನು ಸಣ್ಣದೇ ಮತ್ತೆ?
ಕಲಾಕೃತಿ: ವಿಷ್ಣು ಪಿ.

ಡಾ.ಎಂ.ಎಸ್.ಮೂರ್ತಿ


ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ರಾಜ್ಯದ 75 ಕಲಾವಿದರು ಒಟ್ಟುಗೂಡಿ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ಏರ್ಪಡಿಸಿರುವ ಪ್ರದರ್ಶನ ಹೊಸಲೋಕಕ್ಕೆ ಕರೆದೊಯ್ಯುತ್ತದೆ

‘ಅನಿಶ್ಚಿತ’ ಸ್ಥಿತಿ ಕುರಿತಂತೆ ನಿಶ್ಚಿತವಾದ ಒಂದು ಕಲಾಪ್ರದರ್ಶನ ಬೆಂಗಳೂರಿನ ಚಿತ್ರಕಲಾ ಪರಿಷತ್ತಿನಲ್ಲಿ ನಡೆಯುತ್ತಿದೆ. ದೃಶ್ಯಕಲೆಯ ಈ ಹೊತ್ತಿಗೆ ಇದು ಒಂದು ಮಹತ್ವದ ಕಲಾ ಪ್ರದರ್ಶನವಾಗಿದೆ.




ನೋಟದ ಸಂವೇದನೆಯನ್ನು ಅವಲಂಬಿಸಿರುವ ದೃಶ್ಯಕಲೆ, ಅಕ್ಷರದಂತೆ ಧ್ವನಿಸಿ ಮಾತನಾಡಲಾರದು; ಅದರ ಸಂವಹನ ನಿಶ್ಯಬ್ದ. ಕಣ್ಣಿಗೆ ಕಾಣುವ ಆಕಾರ, ರೂಪಗಳ ಮೂಲಕ ಆಲೋಚನೆ, ಸಂವೇದನೆ ಮತ್ತು ಚಿಂತನೆಗಳನ್ನು ರೂಪಕವಾಗಿ ನಿರೂಪಿಸುವ ಕಲೆ ಸಂಕೀರ್ಣವೂ ಅದೇ ಕಾಲಕ್ಕೆ ಸರಳವೂ ಹೌದು. ಸಮಾಜದ ಇಂದಿನ ದುರಿತ ಕಾಲದ ಪರಿಣಾಮವನ್ನು ಮತ್ತು ದೃಶ್ಯಕಲಾ ಸಮುದಾಯದ ಅನಿಶ್ಚಿತತೆಯನ್ನು ಪ್ರತಿನಿಧಿಸಿದಂತೆ ಕಾಣುವ ಕರ್ನಾಟಕದ 75 ಕಲಾವಿದರ ರಚನೆಗಳು ಒಂದೇ ಅಳತೆಯ, ಒಂದೇ ಮಾಧ್ಯಮದಲ್ಲಿ ಸಂರಚನೆಗೊಂಡು ಸಾರ್ವಜನಿಕವಾಗಿ ಪ್ರದರ್ಶನಗೊಂಡಿವೆ.

ಕಾಣುವ ಕಣ್ಣಿಗೆ ಒಂದು ಕಲಾಕೃತಿ ತನ್ನ ರಾಚನಿಕ ಕೌಶಲದಿಂದ ಅಥವಾ ಕೃತಿಯಲ್ಲಿನ ಅವ್ಯಕ್ತ ವೈಚಾರಿಕ, ಸೈದ್ಧಾಂತಿಕ ದೃಶ್ಯರೂಪಕಗಳ, ತರ್ಕ ಮೀಮಾಂಸೆಗಳ ಕಲಾ ಸಮೀಕರಣಗಳಿಂದ ಆಕರ್ಷಣೆಯಾಗಿ ಗಮನ ಸೆಳೆಯಬಹುದು. ಇಂತಹ ಸಕಾರಣಗಳು ಅಲ್ಲದೆಯೂ ಕೆಲವೊಮ್ಮೆ ಕಲಾ ಸಂದರ್ಭದ ವಸ್ತು, ವೈವಿಧ್ಯ, ಪ್ರಯೋಗ, ನೂತನ ಆವಿಷ್ಕಾರಗಳೆಲ್ಲ ಕಲೆಯ ವಸ್ತುವಾಗಿ ಕಲಾವಿದರು ವಿಶಿಷ್ಟವಾದ ನೆಲೆಯಲ್ಲಿ ನಡೆಸುವ ಕಲಾ ಪ್ರದರ್ಶನಗಳೂ ಸಾಮಾಜಿಕವಾಗಿ ಗಮನಾರ್ಹವಾಗುತ್ತವೆ. ಅಂತಹ ವಿಭಿನ್ನ ಆಲೋಚನೆಯ, ಚಿಂತನೆಯ ಪ್ರಾಯೋಗಿಕ ಕಲಾಪ್ರದರ್ಶನಗಳು ಚಾರಿತ್ರಿಕವಾಗಿಯೂ ಕಲಾ ಸಮುದಾಯದ ನಡೆಯನ್ನು, ಅದರ ಕರ್ತೃವಿನ ಆಶಯ ಮತ್ತು ಅಸ್ತಿತ್ವವನ್ನು ಲೋಕಕ್ಕೆ ಸ್ಪಷ್ಟಪಡಿಸಲು ಸಾಕ್ಷಿಪ್ರಜ್ಞೆಯಾಗಿ ದಾಖಲಾಗುತ್ತವೆ.



ಮಲಗಿದ ನಾಯಿಗೆ ಬೆಚ್ಚನೆ ಕನಸೋ...


ಕಲಾವಿದನನ್ನು, ಸಮುದಾಯವನ್ನು ಮತ್ತು ನೋಡುಗರನ್ನು ಏಕಕಾಲಕ್ಕೆ ಸಂಚಲನಗೊಳಿಸುವ ಆಧುನಿಕ ಆಲೋಚನಾ ಕ್ರಮಗಳು ಒಂದಷ್ಟು ಹೊಸ ಪ್ರೇಕ್ಷಕರನ್ನೂ ಸೃಷ್ಟಿಸಿಕೊಳ್ಳಬಹುದು. ‘ಅನಿಶ್ಚಿತತೆ’ ಪ್ರದರ್ಶನ ಕೂಡ ಕರ್ನಾಟಕದ ಕಲಾವಲಯದ ಇಂತಹುದೇ ಸಂಚಲನವನ್ನು ಉಂಟುಮಾಡುವ ಕ್ರಿಯಾಶೀಲ ಪ್ರಯತ್ನವಾಗಿದೆ. ಕಲಾವಿದರಾದ ಅರ್ಪಿತಾ ಆರ್.ಜಿ., ಅನಿತಾ ಎನ್. ಮತ್ತು ಮನುಚಕ್ರವರ್ತಿ ಕೆ.ಎನ್. ತಮ್ಮ ಇತರ ಕಲಾವಿದ ಮಿತ್ರರೂ ಸೇರಿ ರಾಜ್ಯದಾದ್ಯಂತ ಕಲಾವಿದರನ್ನು ಸಂಪರ್ಕಿಸಿ ಯೋಜಿಸಿದ ಫಲವಾಗಿ ರಾಜ್ಯದಲ್ಲಿ ಪ್ರಪ್ರಥಮ ‘ಮರ ಮುದ್ರಕ’ಗಳ (wood print) ಕಲಾವಿದರ ಕಲಾಕೃತಿಗಳ ಪ್ರದರ್ಶನ ಯಶಸ್ವಿಯಾಗಿ ನಡೆದಿದೆ.



ಸಿದ್ಧ ಮಾದರಿ ಕ್ಯೂರೇಟರ್, ಗ್ಯಾಲರಿಗಳ ಹಂಗಿಲ್ಲದೆ ಕಲಾವಿದರೇ ಕಲಾ ಸಮುದಾಯದ ಪರವಾಗಿ ಆಯೋಜಿಸಿದ ಈ ಪ್ರದರ್ಶನದಲ್ಲಿ ತಾರತಮ್ಯವಿಲ್ಲದೆ ಸ್ಪಂದಿಸಿದ ಎಲ್ಲ ಕಲಾವಿದರನ್ನು ಆಯ್ಕೆ ಮಾಡಿರುವುದು ವಿಶೇಷ ಮತ್ತು ಪ್ರಸ್ತುತ ಕಲಾಸಮುದಾಯದ ಸಂಘಟನೆಯ ದೃಷ್ಟಿಯಿಂದ ಮಹತ್ವದ ಪ್ರಗತಿಪರ ನಿಲುವಾಗಿ ಶ್ಲಾಘನೀಯ ಪ್ರಯತ್ನವಾಗಿದೆ.

1980ರ ದಶಕದಿಂದ ಕರ್ನಾಟಕ ಕಲಾ ಚಟುವಟಿಕೆಗಳು ಅತಿ ಉತ್ಸಾಹದಲ್ಲಿ ಆರಂಭವಾಗಿ ಅದರ ಮೂಲ ಉದ್ದೇಶಗಳನ್ನು ಸ್ಪಷ್ಟಪಡಿಸಿಕೊಳ್ಳಲಾಗದೆ ನೆಲ ಕಚ್ಚಿವೆ. ಈ ಹಿನ್ನೆಲೆಯಿಂದ ಪ್ರಾಮಾಣಿಕ, ನಿಷ್ಠೆಯಿಂದ ಸಾಕಾರಗೊಂಡಂತೆ ಕಾಣುವ ಈ ಮಹತ್ವದ ಪ್ರದರ್ಶನವು ಮೂಡಿಸಿದ ಪ್ರೇರಣೆ ಸಕಾರಾತ್ಮಕ ಬೆಳವಣಿಗೆಗೆ ಸ್ಫೂರ್ತಿಯಾಗುವ ಎಲ್ಲ ಸೂಚನೆಗಳನ್ನು ನೀಡುತ್ತಿದೆ.

ಸಂಸ್ಕೃತಿಯ ಅಂಚಿಗೆ ಬಂದು ನಿಂತಿರುವ ಕಲಾ ಸಮುದಾಯವು ನಮ್ಮ ಸಮಾಜದ ಸಾಂಸ್ಕೃತಿಕ ಪ್ರಜ್ಞೆಯ ಕೇಂದ್ರಕ್ಕೆ ಸಾಗುವ ವೈಚಾರಿಕ, ತಾತ್ವಿಕ ನೆಲೆಯಲ್ಲಿ ಈ ಯಶಸ್ವಿ ಪ್ರದರ್ಶನದ ರೂವಾರಿಗಳಾದ ಯುವಕಲಾವಿದರು ದುಡಿದಿದ್ದಾರೆ. ಇಂತಹ ಪ್ರಯತ್ನಗಳು ಹೆಚ್ಚಿದಲ್ಲಿ ದೃಶ್ಯಕಲೆಯ ಮೌಲ್ಯ ಮತ್ತು ಘನತೆ ಹೆಚ್ಚಿ ಇನ್ನಷ್ಟು ಯುವ ಕಲಾವಿದರ ಬೆಳವಣಿಗೆಗೆ ಸಕಾರಣವಾಗಬಹುದು.



ಒಂದು ಕೋಳಿ ಮೊಟ್ಟೆಯ ಕತೆ!

ಆನ್‌ಲೈನ್ ಅನುಬಂಧ

8ನೇ ಪುಟದಿಂದ...

ಮಂಗಳೂರಿನಲ್ಲಿ ನಡೆದ ಇನ್ನೊಂದು ಮುಸ್ಲಿಂ ಮದುವೆ ಇನ್ನೂ ಕುತೂಹಲಕರ. ವಿಟ್ಲದ ಹುಡುಗ. ಉದ್ಯೋಗದಲ್ಲಿರುವುದು ಸೌದಿ ಅರೇಬಿಯಾದಲ್ಲಿ. ಹುಡುಗಿ ಮಂಗಳೂರಿನವಳು. ಎರಡು ವರ್ಷದ ಹಿಂದೆಯೇ ನಿಶ್ಚಿತಾರ್ಥ ಆಗಿತ್ತು. ಕೊರೊನಾದಿಂದಾಗಿ ಮದುವೆ ಮುಂದಕ್ಕೆ ಹೋಗುತ್ತಲೇ ಇತ್ತು. ಹುಡುಗನಿಗೆ ಇಲ್ಲಿಗೆ ಬರಲು ರಜೆ ಸಿಗಲಿಲ್ಲ. ತಿಂಗಳ ಹಿಂದೆ ಎರಡೂ ಕಡೆಯವರು ಮದುವೆ ಮಾಡಿಯೇ ಬಿಡೋಣ ಎಂದು ನಿರ್ಧರಿಸಿದರು. ಹುಡುಗಿಯ ಮನೆಯವರು ವಧುವಿನ ಸಮೇತ ವಿಟ್ಲದ ವರನ ಮನೆಗೆ ಹೋದರು. ಸೌದಿ ಅರೇಬಿಯಾದಲ್ಲಿ ಗೆಳೆಯರ ಜೊತೆಗೆ ಕುಳಿತ ವರ; ಇಲ್ಲಿ ವಿಟ್ಲದ ಮನೆಯಲ್ಲಿ ಕುಳಿತ ವಧುವಿನ ತಂದೆ. ಜೊತೆಗಿದ್ದ ಧರ್ಮಗುರು ವಿಡಿಯೊ ಕಾಲ್‌ನಲ್ಲಿ ನಿಖಾಹ್ ಮಾಡಿಸಿದರು. ಅಲ್ಲಿಯವರು ಅಲ್ಲೇ ಊಟ ಮಾಡಿದರು, ಇಲ್ಲಿಯವರು ಇಲ್ಲಿ! ಸರಳ ಮದುವೆ ಸಂಭ್ರಮದಿಂದ ನಡೆಯಿತು. ಈಗ ವಧು ಗಂಡನನ್ನು ಕೂಡಿಕೊಳ್ಳಲು ಸೌದಿಗೆ ಹೊರಟು ನಿಂತಿದ್ದಾಳೆ.

ಆನ್‌ಲೈನ್‌ನಲ್ಲಿ ವಧೂವರರ ಹುಡುಕಾಟ ನಡೆಸುತ್ತಿರುವ ಕನ್ನಡಿಗರಲ್ಲಿ ಇತ್ತೀಚೆಗೆ ಅಂತರ್ಜಾತೀಯ ಮದುವೆಗಳೂ ಹೆಚ್ಚಾಗುತ್ತಿವೆ! ‘ಅಕ್ಷರಸ್ಥರು, ಅನಕ್ಷರಸ್ಥರು, ಹಳ್ಳಿಯವರು, ನಗರದವರು ಎನ್ನದೆ ಎಲ್ಲರೂ ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸಿದ್ದಾರೆ. ನಮ್ಮಲ್ಲಿ ನೋಂದಣಿಯಾದ ಅಂಕಿ ಅಂಶಗಳ ಪ್ರಕಾರ, ಶೇ 20ರಷ್ಟು ಹೆಣ್ಣಿನ ಕಡೆಯವರು ಮತ್ತು ಶೇ 25ರಷ್ಟು ಗಂಡಿನ ಕಡೆಯವರು ತಮ್ಮ ಜಾತಿಯಿಂದ ಹೊರತಾಗಿ ಸಂಬಂಧಗಳನ್ನು ಹುಡುಕುತ್ತಿದ್ದಾರೆ’ ಎನ್ನುತ್ತಾರೆ ಕನ್ನಡ ಮ್ಯಾಟ್ರಿಮೊನಿ ಡಾಟ್‌ಕಾಮ್‌ನ ಭಾಟಿಯಾ.



ಕೆಲವು ಸಮುದಾಯಗಳಲ್ಲಿ ಹಿಂದೆ ಬ್ರಾಸ್ ಬ್ಯಾಂಡ್ ಸೆಟ್ ಇಲ್ಲದೆ ಮದುವೆಗಳನ್ನು ಕಲ್ಪಿಸಿಕೊಳ್ಳುವುದೂ ಕಷ್ಟವಾಗಿತ್ತು. ಈಗ ಪರಿಸ್ಥಿತಿ ಉಲ್ಟಾ ಆಗಿದೆ. ಬೆಂಗಳೂರು, ಹುಬ್ಬಳ್ಳಿ, ಬೆಳಗಾವಿ, ವಿಜಯಪುರ ಮುಂತಾದೆಡೆ ಬ್ರಾಸ್ ಬ್ಯಾಂಡ್ ಸೆಟ್‌ನವರೂ ಕೆಲಸವಿಲ್ಲದೆ ಬೇರೆ ಉದ್ಯೋಗಗಳನ್ನು ಹುಡುಕಿಕೊಂಡಿದ್ದಾರೆ. ಬೆಂಗಳೂರಿನ ಕೆ.ಆರ್.ಮಾರ್ಕೆಟ್ ಬಳಿ ಇದ್ದ ‘ನ್ಯೂ ಭಾರತ್ ಬ್ರಾಸ್ ಬ್ಯಾಂಡ್’ ಒಂದು ಕಾಲದಲ್ಲಿ ಪ್ಯಾರಿಸ್‌ನಿಂದ ಕ್ಲಾರಿಯೊನೆಟ್, ಟ್ರಂಫೆಟ್, ಯುಫೋನಿಯಂ, ಸ್ಯಾಕ್ಸೊಫೋನ್‌ಗಳನ್ನು ತರಿಸಿಕೊಂಡು ಸುದ್ದಿ ಮಾಡಿತ್ತು. ಮೊನ್ನೆ ನ್ಯೂ ಭಾರತ್‌ನ ಮಳಿಗೆಯನ್ನು ಹುಡುಕಿಕೊಂಡು ಹೋದರೆ ಅದೂ ಅಲ್ಲಿಂದ ಕಣ್ಮರೆಯಾಗಿದೆ. ‘ಅವರು ಇಲ್ಲಿದ್ದ ಅಂಗಡಿ ಬಂದ್ ಮಾಡ್ಕೊಂಡು ಹೋಗಿ ವರ್ಷಗಳೇ ಆದವು ಸಾರ್’ ಎಂದು ಪಕ್ಕದಲ್ಲೇ ಅಂಗಿ-ಚಡ್ಡಿ ಮಾರುತ್ತಿದ್ದ ಪುಟ್ಟ ಮಳಿಗೆಯವನೊಬ್ಬ ಹೇಳಿದ!

ಮತ್ತೆ ಮದುವೆ ಉದ್ಯಮ ಮೊದಲಿನಂತೆ ಮೇಲೇಳಬಹುದೆ? ‘ಈಗ ಹೋಟೆಲ್ ಬ್ಯಾಂಕ್ವೆಟ್ ಹಾಲ್‌ಗಳಲ್ಲಿ ಮತ್ತು ಕಲ್ಯಾಣ ಮಂಟಪಗಳಲ್ಲಿ ನವೆಂಬರ್ ತಿಂಗಳಿಗೆ ಸ್ವಲ್ಪ ಬುಕಿಂಗ್ ಆಗಿದೆ. ಡಿಸೆಂಬರ್ 15ರಿಂದ ಜನವರಿ 15ರವರೆಗೆ ಒಳ್ಳೆಯ ದಿನಗಳಿಲ್ಲವಂತೆ. ಫೆಬ್ರುವರಿಗೂ ಬುಕಿಂಗ್ ನಡೆದಿದೆ. ಆದರೆ ಮೊದಲಿನಷ್ಟು ರಶ್ ಇಲ್ಲ’ ಎನ್ನುತ್ತಾರೆ ಪಿ.ಸಿ.ರಾವ್ ಮತ್ತು ರಮೇಶ್ ರೆಡ್ಡಿ. ಕೋವಿಡ್ ಭಯ ಇನ್ನೂ ಜನರನ್ನು ಬಿಟ್ಟುಹೋಗಿಲ್ಲ ಎನ್ನುವುದು ಸ್ಪಷ್ಟ.

ಒಂದಂತೂ ಒಳ್ಳೆಯದೇ ಆಗಿದೆ. ‘ಮದುವೆ ಎಂದರೆ ಅಂತಸ್ತು, ವೈಭವ’ ಎಂದು ನಂಬಿಕೊಂಡಿದ್ದ ಶ್ರೀಮಂತ ವರ್ಗ ಸರಳ ಮದುವೆಗೆ ಒಲಿದಿದೆ. ಶ್ರೀಮಂತರನ್ನು ನೋಡಿಕೊಂಡು ಸಾಲ ಸೋಲದಲ್ಲಿ ಮದುವೆ ಡೌಲು ಮಾಡುತ್ತಿದ್ದ ಮಧ್ಯಮ ವರ್ಗಕ್ಕೂ ಈಗ ‘ಸರಳ ಮದುವೆಯೆಂದರೆ ಮರ್ಯಾದೆಗೆ ಕುಂದಲ್ಲ’ ಎನ್ನುವುದು ಅರಿವಾಗಿದೆ. ಬಡವರು ಕೂಡಾ ಮದುವೆ ವಿಷಯದಲ್ಲಿ ‘ದೊಡ್ಡವರೂ ನಮ್ಮ ಲೆವೆಲ್ಲಿಗೆ ಬಂದಿದ್ದಾರೆ’ ಎಂದು ಒಳಗೊಳಗೇ ಖುಷಿ ಪಡುತ್ತಿದ್ದಾರೆ.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

1. ಗಾಂಧೀಜಿಯ ಜನ್ಮ ದಿನಾಂಕದ ಸ್ವಾರಸ್ಯ

2-10-1869

ಗಾಂಧೀಜಿಯ ಜನ್ಮ ದಿನಾಂಕ. ಅಂದರೆ 2-10-1969ಕ್ಕೆ ಗಾಂಧೀಜಿಗೆ 100 ವರ್ಷ ತುಂಬುತ್ತಿದ್ದವು. ಇದೇ ತಾರೀಖಿನ ಎಲ್ಲ ಸಂಖ್ಯೆಗಳನ್ನು ಕೂಡಿದರೆ ಗಾಂಧೀಜಿಯ ಜನ್ಮ ದಿನಾಂಕದಲ್ಲಿ 100 ಬರುತ್ತದೆ.

ಬೇಕಾದರೆ ನೋಡಿ:

$$\begin{array}{r} 2 \\ +\ 10 \\ 19 \\ 69 \\ \hline 100 \end{array}$$

-ಇದನ್ನು ಕಂಡುಹಿಡಿದವರು ಮಹಾರಾಷ್ಟ್ರದ ಪ್ರಸಿದ್ಧ ಗಣಿತಜ್ಞರಾದ ಡಿ.ಆರ್.ಕೊಪ್ರೇಕರ ಅವರು.

2. ಗುಣಿಸಿದರೆ ಗಾಂಧೀಜಿ ಜನ್ಮ ದಿನಾಂಕ

$$\begin{array}{r} 233541 \\ \times 9 \\ \hline 2\text{-}10\text{-}1869 \end{array}$$

3. ಗುಣಿಸಿದರೆ ಇಂದಿನ ದಿನಾಂಕ

$$\begin{array}{r} 344669 \\ \times 9 \\ \hline 3\text{-}10\text{-}2021 \end{array}$$

ಅದಲು ಬದಲು ಕಂಚಿ ಕದಲು...

ಇಲ್ಲಿರುವ ಪದಗಳ ಅಕ್ಷರಗಳನ್ನು ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ಮಾಮನ ನಡು = ________
2. ಸಮನೆಲಪಾಯ = ________
3. ಅಳುಮಗನಕ್ಕು = ________
4. ಕನ್ನಡ ಕಹಳೆ = ________

ಪದ ಹಿಗ್ಗು

ಇಲ್ಲಿ ಕೊಟ್ಟಿರುವ ಮಧ್ಯದ ಅಕ್ಷರಕ್ಕೆ ಮೇಲಿನ ಪಟ್ಟಿಯ ಪದವನ್ನು ಹಿಗ್ಗಿಸಿ ಆಚೀಚೆ ತುಂಬಿದರೆ ಮೂರು ಅಕ್ಷರದ ಪದವಾಗುತ್ತದೆ ಹೊಂದಿಸಿ.


1. ಅಣಿ 2. ಬರಿ 3. ಕೊಳ 4. ಕಡ
5. ಅಪ್ಪ 6. ಸತಿ 7. ನರ 8. ಪಾತಿ

1.		ವ	
2.		ಜಾ	
3.		ಥ	
4.		ಗ	
5.		ಟ್ಟ	
6.		ಳ್ಳಾ	
7.		ಯ್ಯ	
8.		ಪ್ಪ	

ಡಗ್ಗ ಚಿಕ್ಕ ಕೀಶ್ರಸ್ಟ ಕಥೆಯ

ಸಾವಿತ್ರಿಬಾಯಿ ಫುಲೆ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ




ಸಾವಿತ್ರಿಬಾಯಿ ಫುಲೆ ಶಿಕ್ಷಕ ವೃತ್ತಿ ಆಯ್ದುಕೊಂಡ ದೇಶದ ಮೊದಲ ಮಹಿಳೆ. ಅಕ್ಷರದವ್ವ ಎಂದೇ ಹೆಸರಾದವರು. ಅವರು 1831ರಲ್ಲಿ ಮಹಾರಾಷ್ಟ್ರದ ಸತಾರ ಜಿಲ್ಲೆಯ ನೈಗಾಂವ್‌ನಲ್ಲಿ ಹುಟ್ಟಿದರು



1960ರ ದಶಕದಲ್ಲಿ ಮಹಿಳೆಯರು, ವಿಧವೆಯರು ಮತ್ತು ಮಕ್ಕಳಿಗಾಗಿ ಪುನರ್ವಸತಿ ಕೇಂದ್ರಗಳನ್ನು ಸ್ಥಾಪಿಸಿದರು. ನೂರಾರು ಮಹಿಳೆಯರಿಗೆ ನೆಲೆ ಒದಗಿಸಿದರು



ಸಾವಿತ್ರಿಬಾಯಿ ಅವರು ಹೆಣ್ಣುಮಕ್ಕಳ ಶಾಲೆಯ ಮುಖ್ಯ ಶಿಕ್ಷಕಿ ಆದರು. ಅಂದು ಸ್ತ್ರೀ ಶಿಕ್ಷಣಕ್ಕೆ ಸಮ್ಮತಿ ಇರಲಿಲ್ಲ. ಅವರು ಶಾಲೆಗೆ ಹೊರಟಾಗ ಅವರ ಮೇಲೆ ಕೆಸರು, ಸೆಗಣಿ ಎರಚುತ್ತಿದ್ದರು



ಯಾರೆಷ್ಟೇ ನೋಯಿಸಿದರೂ ಧೃತಿಗೆಡದ ಸಾವಿತ್ರಿಬಾಯಿ ಅವರು ಶಿಕ್ಷಕಿಯಾಗಿ ತಮ್ಮ ಕೆಲಸ ಮುಂದುವರಿಸಿದರು



ತಮಗೆ ಮಕ್ಕಳಿಲ್ಲದಿದ್ದರೂ ಶಾಲೆ, ಆಶ್ರಮದ ಮಕ್ಕಳನ್ನೇ ತಮ್ಮ ಮಕ್ಕಳಂತೆ ಸಲಹಿದರು. ‘ಸತ್ಯೋಧಕ’ ಸಮಾಜದ ಅಧ್ಯಕ್ಷೆಯಾದರು. ಪುರೋಹಿತರಿಲ್ಲದೆ ಮದುವೆಗಳನ್ನೂ ನೆರವೇರಿಸಿದರು



ಶಿಕ್ಷಣ, ಸಾಹಿತ್ಯ, ಸಂಗೀತ ಕ್ಷೇತ್ರಗಳಲ್ಲಿ ಅವರು ಸಾಕಷ್ಟು ಚಟುವಟಿಕೆ ನಡೆಸಿದರು. ಸಮಾಜದ ಸುಧಾರಣೆಗೆ ಕಾರಣವಾಗಬಲ್ಲ ಕಾರ್ಯಗಳಿಂದ ಜನರ ಮನದಲ್ಲಿ ಉಳಿದರು

ಟ್ವೆಂಟಿ – 20 ಮ್ಯಾಚ್


ಇವರು ಯಾರು ಬಲ್ಲಿರೇನು? ಹೊಂದಿಸಿ

1. ಕಾಳಿದಾಸ	A. ಇಂಗ್ಲಿಷ್ ನಾಟಕಕಾರ
2. ಅಬುಲ್ ಫಜಲ್	B. ಅಕ್ಬರನ ಆಸ್ಥಾನ ಕವಿ
3. ಮೇಡಂ ಕ್ಯೂರಿ	C. ಜರ್ಮನ್ ತತ್ವಜ್ಞಾನಿ
4. ಚರ್ಚಿಲ್	D. ಚಾಲುಕ್ಯ ಚಕ್ರೇಶ್ವರ
5. ನೀಲ್ ಆರ್ಮ್‌ಸ್ಟ್ರಾಂಗ್	E. ಖಗೋಳಶಾಸ್ತ್ರಜ್ಞ
6. ರಾಜೇಂದ್ರ ಪ್ರಸಾದ್	F. ಭಾರತದ ಮೊದಲ ರಾಷ್ಟ್ರಪತಿ
7. ಜಗದೀಶ್‌ಚಂದ್ರ ಬೋಸ್	G. ಬ್ರಿಟನ್ನಿನ ರಾಜಕಾರಣಿ
8. ವರಾಹ ಮಿಹಿರ	H. ಗಾಂಧೀಜಿಯ ಶಿಷ್ಯ
9. ಗೆಲಿಲಿಯೊ	I. ಭಾರತದ ಪ್ರಸಿದ್ಧ ಸಂಸ್ಕೃತ ಕವಿ
10. ಇಮ್ಮಡಿ ಪುಲಿಕೇಶಿ	J. ರೇಡಿಯೊ ಕಂಡು ಹಿಡಿದವ
11. ಪೈಥಾಗೊರಸ್	K. ಚಂದ್ರನ ಮೇಲೆ ಕಾಲಿಟ್ಟ ಮೊದಲ ಮಾನವ
12. ಕಾರ್ಲ್‌ಮಾರ್ಕ್ಸ್	L. ಸಸ್ಯಶಾಸ್ತ್ರಜ್ಞ
13. ವಾಲ್ಮೀಕಿ	M. ದೂರದರ್ಶಕ ಸಂಶೋಧಕ
14. ವಿನೋಬಾ ಭಾವೆ	N. ಗ್ರೀಸಿನ ಪ್ರಸಿದ್ಧ ಗಣಿತಜ್ಞ
15. ಗುಬ್ಬಿ ವೀರಣ್ಣ	O. ರಾಮಾಯಣ ಕರ್ತೃ
16. ಥಾಮಸ್ ಆಲ್ವಾ ಎಡಿಸನ್	P. ಖ್ಯಾತ ನಟ
17. ಚೌಡಯ್ಯ	Q. ಪಿಟೀಲು ವಾದಕ
18. ಬರ್ನಾಡ್ ಷಾ	R. ಅಮೆರಿಕದ ಪ್ರಸಿದ್ಧ ವಿಜ್ಞಾನಿ
19. ಐಸಾಕ್ ನ್ಯೂಟನ್	S. ಪ್ರಸಿದ್ಧ ಚಿತ್ರಕಾರ
20. ರಾಜಾ ರವಿವರ್ಮ	T. ಬ್ರಿಟನ್ನಿನ ವಿಜ್ಞಾನಿ

ಶಬ್ದಗಳೊಡನೆ ಸರಸ

‘ಗಡಿ’ ಎಂಬ ಪದದಿಂದ ಅಂತ್ಯವಾಗುವ ಮೂರಕ್ಷರದ ಪದಗಳನ್ನು ಪತ್ತೆ ಮಾಡಬಲ್ಲಿರಾ?

1. ____ ಗಡಿ
2. ____ ಗಡಿ
3. ____ ಗಡಿ
4. ____ ಗಡಿ
5. ____ ಗಡಿ
6. ____ ಗಡಿ





ಕಳೆದ ಸಂಚಿಕೆಯ ಸರಿ ಉತ್ತರಗಳು

ಮಜ ಮಜ ಮಜಕೂರದ ಸೆಪ್ಟೆಂಬರ್ 26ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಪದ ಹಿಗ್ಗು
1. ಸಂಹಿತೆ 2. ಸದಸ್ಯ 3. ಕಮರು 4. ದಡಾರ
5. ಬಾಣಲೆ 6. ಸಂಗೀತ 7. ಸಮಿತಿ 8. ಮಕರ

ಶಬ್ದಗಳೊಡನೆ ಸರಸ
1. ಲಹರಿ 2. ತರಂಗ 3. ಮುಂಗೋಪಿ
4. ಹರಾಜು 5.ಕಮಾನು 6. ಅಂಕುಶ

ಅದಲು ಬದಲು ಕಂಚಿ ಕದಲು
1. ಮಾಯಾವತಿಗೆ ಸಿಟ್ಟು 2. ವಾದ ಸರಣಿ
3. ಅರಳಿದ ಹೂ 4. ಸುಕುಮಾರ

ಟ್ವೆಂಟಿ -20 ಮ್ಯಾಚ್

1-L	2-Q	3-R	4-N	5-T
6-P	7-M	8-K	9-O	10-J
11-S	12-I	13-E	4-C	15-G
16-D	17-H	18-F	19-B	20-A

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇ- ಮೇಲ್ ವಿಳಾಸ:
majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಶ್ರೇಯಸ್ ಗೌಡ ಎಂ.ಕೆ.
ಕೆ.ಆರ್.ನಗರ (ಮೈಸೂರು)



ಧನ್ಯಾ ಮಂಜುನಾಥ್
ಬೆಂಗಳೂರು



ಸೃಜನಾ ಟಿ.ಆರ್.,
ಹೊಸಪೇಟೆ

5 ಕೋಟಿ ಕುಟುಂಬಗಳಿಗೆ ನಲ್ಲಿ ನೀರು: ಮೋದಿ

ನವದೆಹಲಿ (ಪಿಟಿಐ): 2019ರಲ್ಲಿ 'ಜಲ ಜೀವನ್' ಯೋಜನೆ ಜಾರಿಗೆ ಬಂದಾಗಿನಿಂದ ಇಲ್ಲಿಯವರೆಗೆ ಸುಮಾರು ಐದು ಕೋಟಿ ಮನೆಗಳು ನೀರಿನ ಸಂಪರ್ಕ ಪಡೆದಿವೆ. 80 ಜಿಲ್ಲೆಗಳ ಸುಮಾರು 1.25 ಲಕ್ಷಕ್ಕೂ ಹೆಚ್ಚು ಗ್ರಾಮಗಳ ಪ್ರತಿ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಇದೆ ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ತಿಳಿಸಿದರು.

'ಜಲ ಜೀವನ್' ಯೋಜನೆ ಕುರಿತು ಜಾಗೃತಿ ಮೂಡಿಸಲು ಮತ್ತು ಯೋಜನೆಯ ಕುರಿತು ಪಾರದರ್ಶಕತೆ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಅಭಿವೃದ್ಧಿಪಡಿಲಾಗಿರುವ 'ಜಲ ಜೀವನ್ ಮಿಷನ್ ಆ್ಯಪ್'ಗೆ ಅವರು ಈ ವೇಳೆ ಚಾಲನೆ ನೀಡಿದರು.

ಗ್ರಾಮ ಪಂಚಾಯತಿ, ಪಾನಿ ಸಮಿತಿ ಅಥವಾ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ(ವಿಡಬ್ಲ್ಯುಎಸ್‌ಸಿ)ಗಳ ಸದಸ್ಯರೊಂದಿಗೆ ವಿಡಿಯೊ ಸಂವಾದ ನಡೆಸಿದ ಮೋದಿ, 'ಈ ಯೋಜನೆಯ ಉದ್ದೇಶ ಕೇವಲ ನೀರು ಒದಗಿಸುವುದು ಮಾತ್ರವಲ್ಲ. ಇದು ಗ್ರಾಮಗಳು ಮತ್ತು ಮಹಿಳೆಯರ ನೇತೃತ್ವದ ವಿಕೇಂದ್ರೀಕರಣ ಚಳುವಳಿಯೂ ಹೌದು' ಎಂದರು.

'ಸ್ವಾತಂತ್ರ್ಯ ಬಂದಾಗಿನಿಂದ 2019ರ ವರೆಗೆ ನಮ್ಮ ದೇಶದ ಕೇವಲ ಮೂರು ಕೋಟಿ ಕುಟುಂಬಗಳಿಗೆ ಮಾತ್ರ ನಲ್ಲಿ ನೀರಿನ ಸಂಪರ್ಕ ಇತ್ತು. 2019ರಲ್ಲಿ ಜಲ ಜೀವನ ಮಿಷನ್ ಜಾರಿಗೊಳಿಸಿದ ಬಳಿಕ ಐದು ಕೋಟಿ ಕುಟುಂಬಗಳಿಗೆ ನೀರಿನ ಸಂಪರ್ಕ ನೀಡಲಾಗಿದೆ. ಅಭಿವೃದ್ಧಿ ಹೊಂದುತ್ತಿರುವ ಜಿಲ್ಲೆಗಳಲ್ಲಿ 31 ಲಕ್ಷವಿದ್ದ ಕೊಳವೆ ನೀರಿನ ಸಂಪರ್ಕವನ್ನು 1.16 ಕೋಟಿಗೆ ಏರಿಸಲಾಗಿದೆ. ಇದರಿಂದ ದೇಶದ ಯಾವ ಭಾಗಕ್ಕೂ ಟ್ಯಾಂಕರ್ ಮತ್ತು ರೈಲುಗಳಲ್ಲಿ ನೀರು ಸಾಗಿಸುವ ಪ್ರಮೇಯ ಬರುವುದಿಲ್ಲ' ಎಂದು ಮೋದಿ ತಿಳಿಸಿದರು.

> **ಹಿಂದಿನ ಸರ್ಕಾರಗಳು ಏಳು ದಶಕಗಳಲ್ಲಿ ಮಾಡಿದ ಸಾಧನೆಯನ್ನು ಇಂದಿನ ಭಾರತ ಕೇವಲ ಎರಡು ವರ್ಷಗಳಲ್ಲಿ ಮಾಡಿದೆ**
> **ನರೇಂದ್ರ ಮೋದಿ,** ಪ್ರಧಾನಿ

ಹಿಂದಿನ ಕಾಂಗ್ರೆಸ್ ಸರ್ಕಾರಗಳ ವಿರುದ್ಧ ವ್ಯಂಗ್ಯವಾಡಿದ ಅವರು, 'ಕಾಂಗ್ರೆಸ್ಸಿಗರು ಬಡತನವನ್ನು ನೋಡಿದವರಲ್ಲ. ತಮ್ಮ ಜ್ಞಾನವನ್ನು ತೋರಿಸಿಕೊಳ್ಳಲು ಅವರಿಗೆ ಬಡತನ ಒಂದು ಮಾರ್ಗ ಅಷ್ಟೇ. ಮಾದರಿ ಗ್ರಾಮಗಳನ್ನು ರೂಪಿಸಲು ಅವರಿಗೆ ಅವಕಾಶ ಇತ್ತು. ಆದರೆ ಅವರು ಗ್ರಾಮಗಳಿಗೆ ಕಿರು ಭೇಟಿ ನೀಡುವುದಷ್ಟನ್ನೇ ಮಾಡಿದರು' ಎಂದರು.

ಖರೀದಿ ವಿಳಂಬ ಖಂಡಿಸಿ ರೈತರಿಂದ ಭಾರಿ ಪ್ರತಿಭಟನೆ: ಮಣಿದ ಸರ್ಕಾರ

ಪಂಜಾಬ್, ಹರಿಯಾಣ: ಇಂದಿನಿಂದ ಭತ್ತ ಖರೀದಿ

ಚಂಡೀಗಢ (ಪಿಟಿಐ): ಭಾನುವಾರದಿಂದಲೇ (ಅ.3) ಭತ್ತ ಖರೀದಿ ಆರಂಭಿಸುವುದಾಗಿ ಪಂಜಾಬ್ ಹಾಗೂ ಹರಿಯಾಣ ಸರ್ಕಾರಗಳು ಪ್ರಕಟಿಸಿವೆ.

ಸಾಮಾನ್ಯವಾಗಿ ಪ್ರತಿವರ್ಷದ ಅಕ್ಟೋಬರ್ 1ರಿಂದ ಆರಂಭವಾಗಬೇಕಿದ್ದ ಭತ್ತ ಖರೀದಿ ಪ್ರಕ್ರಿಯೆಯನ್ನು ಕೇಂದ್ರ ಸರ್ಕಾರವು ಅಕ್ಟೋಬರ್ 11ಕ್ಕೆ ಮುಂದೂಡಿತ್ತು. ಇದನ್ನು ಖಂಡಿಸಿ ಎರಡೂ ರಾಜ್ಯಗಳಲ್ಲಿ ರೈತರು ಶನಿವಾರ ಭಾರಿ ಪ್ರತಿಭಟನೆ ನಡೆಸಿದರು.

'ಕೇಂದ್ರ ಗ್ರಾಹಕ ಸಚಿವ ಅಶ್ವಿನಿ ಕುಮಾರ್ ಚೌಬೆ ಅವರು ನಮ್ಮ ಮನವಿಗೆ ಸ್ಪಂದಿಸಿದ್ದು ಖುಷಿ ತಂದಿದೆ. ಭಾನುವಾರದಿಂದ ಭತ್ತ ಖರೀದಿ ಪ್ರಕ್ರಿಯೆ ಶುರುವಾಗಲಿದೆ' ಎಂದು ಹರಿಯಾಣ ಮುಖ್ಯಮಂತ್ರಿ ಮನೋಹರ ಲಾಲ್ ಖಟ್ಟರ್ ತಿಳಿಸಿದ್ದಾರೆ.

ಸಚಿವರ ಭೇಟಿ ವೇಳೆ ಉಪಮುಖ್ಯಮಂತ್ರಿ ದುಷ್ಯಂತ್ ಚೌಟಾಲ ಹಾಗೂ ಕೃಷಿ ಸಚಿವ ಜೆ.ಪಿ. ದಲಾಲ್ ಉಪಸ್ಥಿತರಿದ್ದರು.



ಅಮೃತಸರದಲ್ಲಿ ರೈತರು ಶನಿವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಭತ್ತದ ಫಸಲು ಈಗಾಗಲೇ ಮಂಡಿಗಳನ್ನು ತಲುಪಿದ್ದು, ರೈತರ ಹಿತ ಗಮನದಲ್ಲಿಟ್ಟುಕೊಂಡು ಆದಷ್ಟು ಬೇಗನೆ ಖರೀದಿ ಆರಂಭಿಸಲು ವಿನಂತಿಸಲಾಗಿದೆ ಎಂದು ಸಚಿವರ ಭೇಟಿ ಬಳಿಕ ಖಟ್ಟರ್ ಹೇಳಿದರು. ಖರೀದಿ ಪ್ರಕ್ರಿಯೆ ತಡ ಮಾಡದಂತೆ ಪಂಜಾಬ್ ಮುಖ್ಯಮಂತ್ರಿ ಚರಣ್‌ಜಿತ್ ಸಿಂಗ್ ಚನ್ನಿ ಅವರು ಪ್ರಧಾನಿ ಬಳಿ ಮನವಿ ಮಾಡಿದ್ದರು.

ಎರಡೂ ರಾಜ್ಯಗಳಲ್ಲಿ ಭಾರಿ ಪ್ರತಿಭಟನೆ: ಸರ್ಕಾರ, ಭತ್ತ ಖರೀದಿಗೆ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಪಂಜಾಬ್ ಹಾಗೂ ಹರಿಯಾಣದಲ್ಲಿ ಶನಿವಾರ ರೈತರು ಭಾರಿ ಪ್ರತಿಭಟನೆ ನಡೆಸಿದರು. ಮುಖ್ಯಮಂತ್ರಿ ಮನೋಹರಲಾಲ್ ಖಟ್ಟರ್ ಸೇರಿದಂತೆ ಶಾಸಕರು ಮತ್ತು ಸಚಿವರ ನಿವಾಸಗಳಿಗೆ ಮುತ್ತಿಗೆ ಹಾಕಲಾಯಿತು. ಕರ್ನಾಲ್‌ನಲ್ಲಿ ಖಟ್ಟರ್ ನಿವಾಸ ಬಳಿ ಪೊಲೀಸ್ ಬ್ಯಾರಿಕೇಡ್‌ಗಳನ್ನು ಮುರಿದಿದ್ದರಿಂದ ರೈತರ ಮೇಲೆ ಜಲಫಿರಂಗಿ ಪ್ರಯೋಗಿಸಲಾಯಿತು.

ಇತ್ತೀಚೆಗೆ ಸುರಿದ ಮಳೆಯಿಂದ ಫಸಲಿನಲ್ಲಿ ತೇವಾಂಶದ ಅಂಶವಿದೆ ಹಾಗೂ ಫಸಲು ಇನ್ನೂ ಪಕ್ವವಾಗಿಲ್ಲ ಎಂಬ ಕಾರಣ ನೀಡಿ ಭತ್ತ ಖರೀದಿಗೆ ಸರ್ಕಾರ ವಿಳಂಬ ಮಾಡಿತ್ತು.

ಶಹಾಬಾದ್ ಮತ್ತು ಪಂಚಕುಲದಲ್ಲಿ ಹೋರಾಟಗಾರರು ಟ್ರಾಕ್ಟರ್‌ಗಳನ್ನು ಬಳಸಿ ಪೊಲೀಸ್ ಬ್ಯಾರಿಕೇಡ್‌ಗಳನ್ನು ಮುರಿದರು. ಸಚಿವ ಸಂದೀಪ್ ಸಿಂಗ್ ಸೇರಿದಂತೆ ಬಿಜೆಪಿ ನಾಯಕರ ಮನೆಗಳನ್ನು ಮುಂದೆ ಪ್ರತಿಭಟನೆ ನಡೆಸಿದರು. ರೈತರು ಮತ್ತು ಪೊಲೀಸರ ನಡುವೆ ಸಣ್ಣಪುಟ್ಟ ಘರ್ಷಣೆಗಳು ಸಂಭವಿಸಿದ ನಂತರ ಹರಿಯಾಣ ಮತ್ತು ಪಂಜಾಬ್‌ನ ಕೆಲವು ಸ್ಥಳಗಳಲ್ಲಿ ಪರಿಸ್ಥಿತಿ ಉದ್ವಿಗ್ನವಾಯಿತು. ಸಚಿವರು, ಶಾಸಕರು ಮತ್ತು ಸಂಸದರ ನಿವಾಸಗಳ ಎದುರು ಆಹಾರ ಧಾನ್ಯ ತುಂಬಿದ ಟ್ರಾಲಿಗಳನ್ನು ನಿಲ್ಲಿಸಿ ರೈತರು ತಮ್ಮ ಆಕ್ರೋಶ ಹೊರಹಾಕಿದರು.

ಪಂಜಾಬ್‌ನಲ್ಲಿ ರಾಜ್ಯ ವಿಧಾನ ಸಭೆಯ ಸ್ಪೀಕರ್ ರಾಣಾ ಕೆ.ಪಿ ಸಿಂಗ್, ರೂಪಾನಗರದಲ್ಲಿ ಶಾಸಕ ಹರ್ಜೋತ್ ಕಮಲ್ ಸೇರಿದಂತೆ ಹಲವು ಕಾಂಗ್ರೆಸ್ ಶಾಸಕರ ನಿವಾಸದ ಹೊರಗೆ ರೈತರು ಜಮಾಯಿಸಿ ಪ್ರತಿಭಟನೆ ನಡೆಸಿದರು. ಶನಿವಾರ ಎರಡೂ ರಾಜ್ಯಗಳಲ್ಲಿ ಪ್ರತಿಭಟನೆ ನಡೆಸಲು ಸಂಯುಕ್ತ ಕಿಸಾನ್ ಮೋರ್ಚಾ ಕರೆ ನೀಡಿತ್ತು.

ಸುದ್ದಿ 2 ನಿಮಿಷ

ರಾಹುಲ್, ಪ್ರಿಯಾಂಕಾ ಗಾಂಧಿ ಪರ ನಿಲ್ಲುವೆ: ಸಿಧು

ಚಂಡೀಗಡ (ಪಿಟಿಐ): ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿರುವ ನವಜೋತ್ ಸಿಂಗ್ ಸಿಧು, ಪಕ್ಷದಲ್ಲಿ ತಮಗೆ ಹುದ್ದೆ ಇರಲಿ, ಇಲ್ಲದಿರಲಿ; ತಾವು ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಅವರ ಪರ ನಿಲ್ಲುವುದಾಗಿ ಹೇಳಿದ್ದಾರೆ.

ಮುಖ್ಯಮಂತ್ರಿ ಚರಣಜಿತ್ ಸಿಂಗ್ ಚನ್ನಿ ಅವರು ಮಾಡಿದ ಕೆಲವು ನೇಮಕಾತಿಗಳಿಂದ ಅಸಮಾಧಾನಗೊಂಡಿದ್ದರು ಎನ್ನಲಾದ ಸಿಧು, ಆ ಬಳಿಕ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.



ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹಾದ್ದೂರ್ ಶಾಸ್ತ್ರಿ ಜಯಂತಿ ಅವರ ಭಾವಚಿತ್ರಗಳೊಂದಿಗೆ ಟ್ವೀಟ್ ಮಾಡಿರುವ ಸಿಧು, 'ಗಾಂಧೀಜಿ ಮತ್ತು ಶಾಸ್ತ್ರೀಜಿ ಅವರ ತತ್ವಗಳನ್ನು ಎತ್ತಿಹಿಡಿಯುವುದಾಗಿ ಪ್ರತಿಜ್ಞೆ ಮಾಡುತ್ತೇನೆ. ಹುದ್ದೆ ಇರಲಿ ಇಲ್ಲದಿರಲಿ. ರಾಹುಲ್ ಮತ್ತು ಪ್ರಿಯಾಂಕಾ ಅವರ ಪರ ನಿಲ್ಲುತ್ತೇನೆ. ಎಲ್ಲ ನಕರಾತ್ಮಕ ಶಕ್ತಿಗಳು ನನ್ನನ್ನು ಸೋಲಿಸಲು ಪ್ರಯತ್ನಿಸಿದರೂ ಪ್ರತಿ ಔನ್ಸ್ ರಚನಾತ್ಮಕ ಶಕ್ತಿಯಿಂದ ಪಂಜಾಬ್ ಗೆಲ್ಲುತ್ತದೆ. ಪಂಜಾಬಿಯತ್ ಗೆಲ್ಲುತ್ತದೆ ಮತ್ತು ಪ್ರತಿಯೊಬ್ಬ ಪಂಜಾಬಿ ಗೆಲ್ಲುತ್ತಾನೆ!' ಎಂದು ಹೇಳಿದ್ದಾರೆ.

ಬೆಳ್ಳಿತೆರೆಗೆ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಜೀವನಗಾಥೆ

ನವದೆಹಲಿ: ದೇಶ ಕಂಡ ಅಪ್ರತಿಮ ಸೇನಾಧಿಕಾರಿ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಜೀವನಾಧರಿತ ಕಥೆಯ 'ಮಾರ್ಷಲ್' ಚಿತ್ರವನ್ನು ಇಂಗ್ಲಿಷ್‌ನಲ್ಲಿ ನಿರ್ಮಿಸಲಾಗುತ್ತಿದ್ದು, ಕನ್ನಡ, ಹಿಂದಿ ಮತ್ತಿತರ ಭಾರತೀಯ ಭಾಷೆಗಳಲ್ಲೂ ಮೂಡಿಬರಲಿದೆ.

ಆರು ತಿಂಗಳೊಳಗೆ ಚಿತ್ರಕಥೆಯ ಸಿದ್ಧತಾ ಕಾರ್ಯ ಪೂರ್ಣಗೊಳ್ಳಲಿದ್ದು, ನಂತರವಷ್ಟೇ ಹಾಲಿವುಡ್‌ನಲ್ಲಿ ಚಿತ್ರೀಕರಣ ಆರಂಭವಾಗಲಿದೆ. 'ನೆನಪಿರಲಿ' ಪ್ರೇಮ್ ಚಿತ್ರದ ನಾಯಕನಾಗಿ ಅಭಿನಯಿಸಲಿದ್ದಾರೆ. ಇತರ ಪಾತ್ರ ವರ್ಗಗಳ ಆಯ್ಕೆ ಪ್ರಕ್ರಿಯೆಯ ನಂತರ ನಡೆಯಲಿದೆ ಎಂದು ನಿರ್ಮಾಪಕ ಅರುಣ್ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ದೇಶಪ್ರೇಮ ಸಾರುವ, ದೊಡ್ಡ ಬಜೆಟ್‌ನ ಈ ಚಿತ್ರದ ಚಿತ್ರೀಕರಣ ಆರಂಭಿಸುವ ಮುನ್ನ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಸಮಾಧಿ ಸ್ಥಳಕ್ಕೆ ಚಿತ್ರತಂಡದೊಂದಿಗೆ ಭೇಟಿ ನೀಡಿ ಗೌರವ ಸಮರ್ಪಿಸಿದ್ದಾಗಿ ನಟ ಪ್ರೇಮ್ ಹೇಳಿದರು.

3 ತಿಂಗಳಲ್ಲಿ ಭಾರತೀಯರ 20 ಲಕ್ಷಕ್ಕೂ ಹೆಚ್ಚು ವಾಟ್ಸ್‌ಆ್ಯಪ್ ಖಾತೆ ನಿಷೇಧ

ನವದೆಹಲಿ (ಪಿಟಿಐ): 'ಆಗಸ್ಟ್‌ನಲ್ಲಿ ತನ್ನ ಷರತ್ತು ಹಾಗೂ ನಿಯಮಗಳನ್ನು ಉಲ್ಲಂಘಿಸಿದ ಸುಮಾರು 20 ಲಕ್ಷ ಭಾರತೀಯರ ಖಾತೆಗಳನ್ನು ನಿಷೇಧಿಸಲಾಗಿದೆ' ಎಂದು ಫೇಸ್‌ಬುಕ್ ಒಡೆತನದ ವಾಟ್ಸ್‌ಆ್ಯಪ್ ಕಂಪನಿ ಶನಿವಾರ ತಿಳಿಸಿದೆ.

ಮಾಸಿಕ ದೂರು ಸ್ವೀಕಾರ ವರದಿಯಲ್ಲಿ ಈ ಅಂಶ ಬೆಳಕಿಗೆ ಬಂದಿದೆ. 20,70,000 ಖಾತೆಗಳನ್ನು ನಿಷೇಧ ಮಾಡಲಾಗಿದೆ ಅಥವಾ ತಡೆ ಹಿಡಿಯಲಾಗಿದೆ ಎಂದು ವಾಟ್ಸ್‌ಆ್ಯಪ್ ತಿಳಿಸಿದೆ.

ಇದೇ ವೇಳೆ 420 ಕುಂದು ಕೊರತೆ ದೂರುಗಳನ್ನು ಆಗಸ್ಟ್ ತಿಂಗಳಲ್ಲಿ ವಾಟ್ಸ್‌ಆ್ಯಪ್ ಸ್ವೀಕರಿಸಿದೆ ಎಂಬುದು ತಿಳಿದು ಬಂದಿದೆ.

ಜೂನ್ 16 ರಿಂದ ಜುಲೈ 31 ರವರೆಗೆ 30 ಲಕ್ಷ ಭಾರತೀಯರ ವಾಟ್ಸ್‌ಆ್ಯಪ್ ಖಾತೆಗಳನ್ನು ನಿಷೇಧಿಸಲಾಗಿದೆ ಎಂದು ಹೇಳಿದೆ.

ಸಂಕ್ಷಿಪ್ತ ಸುದ್ದಿ

ಏರ್ ಇಂಡಿಯಾ ಬಿಡ್ ಇತ್ಯರ್ಥ ಆಗಿಲ್ಲ: ಗೋಯಲ್

ದುಬೈ (ಪಿಟಿಐ): ಏರ್ ಇಂಡಿಯಾ ವಿಮಾನಯಾನ ಸಂಸ್ಥೆಯ ಕುರಿತಾಗಿ ಕೇಂದ್ರ ಸರ್ಕಾರವು ಇದುವರೆಗೂ ಯಾವುದೇ ತೀರ್ಮಾನವನ್ನೂ ತೆಗೆದುಕೊಂಡಿಲ್ಲ. ವ್ಯವಸ್ಥಿತವಾದ ಪ್ರಕ್ರಿಯೆಯ ಮೂಲಕ ಅಂತಿಮ ಬಿಡ್ ವಿಜೇತರನ್ನು ಆಯ್ಕೆ ಮಾಡಲಾಗುವುದು ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಸ್ಪಷ್ಟಪಡಿಸಿದ್ದಾರೆ.

ನಷ್ಟದಲ್ಲಿರುವ ಏರ್ ಇಂಡಿಯಾ ಖರೀದಿಸಲು ಆಸಕ್ತಿ ತೋರಿಸಿರುವ ಕಂಪನಿಗಳ ಸಾಲಿನಲ್ಲಿ ಟಾಟಾ ಸನ್ಸ್ ಮುಂಚೂಣಿಯಲ್ಲಿ ಇದೆ ಎನ್ನುವ ಮಾಧ್ಯಮಗಳ ವರದಿಗಳ ಕುರಿತಾಗಿ ಕೇಳಿದ ಪ್ರಶ್ನೆಗೆ ಅವರು ಈ ಸ್ಪಷ್ಟನೆ ನೀಡಿದ್ದಾರೆ.

ಸದ್ಯ ನಾನು ದುಬೈನಲ್ಲಿ ಇರುವುದರಿಂದ ಯಾವುದೇ ನಿರ್ಧಾರ ತೆಗೆದುಕೊಂಡಿರುವ ಬಗ್ಗೆ ನನಗೆ ಮಾಹಿತಿ ಇಲ್ಲ. ಬಿಡ್ ಆಹ್ವಾನಿಸಲಾಗಿತ್ತು. ಅದನ್ನು ಅಧಿಕಾರಿಗಳು ಪರಿಶೀಲನೆ ನಡೆಸಲಿದ್ದಾರೆ. ಅಂತಿಮ ವಿಜೇತರನ್ನು ಆಯ್ಕೆ ಮಾಡಲು ಒಂದು ಪ್ರಕ್ರಿಯೆ ಇದೆ. ಅದೇ ರೀತಿಯಲ್ಲಿ ಎಲ್ಲವೂ ನಡೆಯಲಿದೆ ಎಂದು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಸತತ ಮೂರನೇ ದಿನವೂ ಇಂಧನ ದರ ಹೆಚ್ಚಳ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಸತತ ಮೂರನೇ ದಿನವೂ ಇಂಧನ ದರ ಹೆಚ್ಚಿಸಿವೆ. ಶನಿವಾರ ಪೆಟ್ರೋಲ್ ದರ ಲೀಟರಿಗೆ 25 ಪೈಸೆ ಮತ್ತು ಡೀಸೆಲ್ ದರ 30 ಪೈಸೆ ಏರಿಕೆ ಆಗಿದೆ.

ಎಚ್‌ಪಿಸಿಎಲ್ ಜಾಲತಾಣದಲ್ಲಿ ಇರುವ ಮಾಹಿತಿಯ ಪ್ರಕಾರ, ಬೆಂಗಳೂರಿನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 105.38 ಮತ್ತು ಡೀಸೆಲ್ ದರವು ಲೀಟರಿಗೆ ₹ 95.61ಕ್ಕೆ ಏರಿಕೆ ಆಗಿದೆ.

ದೆಹಲಿಯಲ್ಲಿ ಪೆಟ್ರೋಲ್ ದರ ₹ 102.14ರ ಮಟ್ಟಕ್ಕೆ ಏರಿಕೆ ಆಗಿದೆ. ಡೀಸೆಲ್ ದರ ₹ 9.047ಕ್ಕೆ ತಲುಪಿದೆ. ಮುಂಬೈನಲ್ಲಿ ಪೆಟ್ರೋಲ್ ದರ ₹ 108.19 ಮತ್ತು ಡೀಸೆಲ್ ದರ ₹ 98.16ಕ್ಕೆ ಏರಿಕೆ ಆಗಿದೆ.

ಮುಂಬೈ ಧಾರಣೆ

ಶೇಂಗಾ

2-10-2021

ಜಾವಾ 70/80(ಹೊಸ)	10650-10700
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10550-10600
ದಪ್ಪ ಗುಜರಾತ್(ಹೊಸ)	9600-9700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1465 (1480)
ಒಂದು ವಾರದ ಡೆಲಿವರಿ	1460 (1475)
ಸೋಯಾ ಕಚ್ಚಾ	1287 (1290)
ಪಾಮ್ ವಾರದ ಡೆಲಿವರಿ	1220 (1220)
ಸೂರ್ಯಕಾಂತಿ ಎಣ್ಣೆ ಕಚ್ಚಾ	1315 (1315)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
46,400 (46,300)
ಬೆಳ್ಳಿ ಕೆ.ಜಿ 60,000 (59,650)

ಆವರಣದಲ್ಲಿ ಹಿಂದಿನ ದಿನದ ಧಾರಣೆ

'ಮೋದಿ ಯುಗದಲ್ಲಿ ಭಾರತ' ಉಪನ್ಯಾಸ

ಮೋದಿ ಅವಧಿಯಲ್ಲಿ ಮೌನ ಸುರಕ್ಷಿತವಲ್ಲ: ಕಪಿಲ್ ಸಿಬಲ್

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕಾರಾವಧಿಯಲ್ಲಿ ಮೌನವಾಗಿರುವುದು ಸುರಕ್ಷಿತವಲ್ಲ ಎಂದು ಕಾಂಗ್ರೆಸ್ ಮುಖಂಡ ಕಪಿಲ್ ಸಿಬಲ್ ಅವರು ಶನಿವಾರ ಹೇಳಿದ್ದಾರೆ. 'ಈ ಸರ್ಕಾರದ ದೌರ್ಜನ್ಯಗಳ ವಿರುದ್ಧ ಯಾರಾದರೂ ಮೌನವಾಗಿದ್ದರೆ, ಅವರೂ ಅದರಲ್ಲಿ ಭಾಗಿಯಾಗಿದ್ದಾರೆ ಎಂಬ ಅರ್ಥ ಬರುತ್ತದೆ' ಎಂದು ಸಿಬಲ್ ಅಭಿಪ್ರಾಯಪಟ್ಟಿದ್ದಾರೆ.

'ಮೋದಿ ಯುಗದಲ್ಲಿ ಭಾರತ' ಎಂಬ ವಿಷಯದ ಕುರಿತು ಇಲ್ಲಿ ನಡೆದ ಗಿರೀಶ್ ಪಟೇಲ್ ಸ್ಮಾರಕ ಉಪನ್ಯಾಸದಲ್ಲಿ ಭಾಗವಹಿಸಲು ನಗರಕ್ಕೆ ಬಂದಿದ್ದ ಅವರು, ಮಾಧ್ಯಮದವರ ಪ್ರಶ್ನೆಗಳಿಗೆ ಉತ್ತರಿಸಿದರು.

ಕಾಂಗ್ರೆಸ್ ಹೈಕಮಾಂಡ್‌ನ ಈಚಿನ ನಿರ್ಧಾರಗಳನ್ನು ಪ್ರಶ್ನಿಸಿದ್ದ ಸಿಬಲ್ ಮನೆ ಎದುರು ಪ್ರತಿಭಟನೆ ನಡೆದಿತ್ತು.

ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಅವರು ಮಾಡಿದ್ದ ಟ್ವೀಟ್ ಕುರಿತು ಸುದ್ದಿಗಾರರು ಕೇಳಿದ ಪ್ರಶ್ನೆಗೆ, 'ಚಿದಂಬರಂ ಏನು ಹೇಳಿದ್ದಾರೋ ಆ ಬಗ್ಗೆ ಅವರನ್ನು ಕೇಳಿ. ಅವರು ನನ್ನ ಸಹೋದ್ಯೋಗಿ. ನಾನು ಆ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ರಾಜಕೀಯ ದೃಷ್ಟಿಯಲ್ಲಿ ಮೋದಿ ಅವರ ಬಗ್ಗೆ ಹೇಳಬೇಕೆಂದರೆ, ಮೌನವಾಗಿರುವುದು ಸುರಕ್ಷಿತವಲ್ಲ ಎಂದು ಹೇಳಬಲ್ಲೆ' ಎಂದು ಉತ್ತರಿಸಿದ್ದಾರೆ.

ದೆಹಲಿಯ ಸಿಬಲ್ ಮನೆಯ ಹೊರಗೆ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದ ನಂತರ ಟ್ವೀಟ್ ಮಾಡಿದ್ದ ಚಿದಂಬರಂ, ಮೌನದ ಆಯ್ಕೆ ಬಗ್ಗೆ ಪ್ರಸ್ತಾಪಿಸಿದ್ದರು. 'ನಾವು ಪಕ್ಷದ ವೇದಿಕೆಗಳಲ್ಲಿ ಅರ್ಥಪೂರ್ಣ ಚರ್ಚೆ ನಡೆಸಲು ಸಾಧ್ಯವಾಗುತ್ತಿಲ್ಲ ಎಂಬುದು ನನ್ನನ್ನು ಅಸಹಾಯಕನನ್ನಾಗಿಸಿದೆ. ಸಿಬಲ್ ನಿವಾಸದ ಹೊರಗೆ ಕಾಂಗ್ರೆಸ್ ಕಾರ್ಯಕರ್ತರು ಘೋಷಣೆ ಕೂಗುವ ಚಿತ್ರ ನೋಡಿದಾಗ ನೋವು ಮತ್ತು ಅಸಹಾಯಕತೆ ಉಂಟಾಗುತ್ತದೆ' ಎಂದು ಉಲ್ಲೇಖಿಸಿದ್ದರು.

'ಅವರೇ ಅಂಪೈರ್'

ಆಟದ ನಿಯಮಗಳನ್ನು ಬಿಜೆಪಿ ಬದಲಾಯಿಸಿದೆ ಎಂದ ಕಪಿಲ್ ಸಿಬಲ್, ಅದಕ್ಕೆ ಕ್ರಿಕೆಟ್‌ನ ಉದಾಹರಣೆ ನೀಡಿದರು. 'ಕ್ರಿಕೆಟ್ ಆಟಕ್ಕೆ ಕೆಲವು ನಿಯಮಗಳಿವೆ. ಎಲ್‌ಬಿಡಬ್ಲ್ಯು ಅಥವಾ ಕ್ಯಾಚ್ ಬಗ್ಗೆ ಸಂದೇಹವಿದ್ದರೆ, ನಿರ್ಧಾರವನ್ನು ಮೂರನೇ ಅಂಪೈರ್‌ಗೆ ಒಪ್ಪಿಸಲಾಗುತ್ತದೆ. ಹಾಗೆಯೇ, ಬಿಜೆಪಿಯವರು ಪ್ರತಿ ವ್ಯವಸ್ಥೆಯನ್ನು ತಮ್ಮ ವಶಕ್ಕೆ ಪಡೆದಿದ್ದಾರೆ. ಅವರೇ ಅಂಪೈರ್‌ಗಳಾಗಿದ್ದಾರೆ' ಎಂದು ವಿವರಿಸಿದ್ದಾರೆ.

'ಜಾರಿ ನಿರ್ದೇಶನಾಲಯ (ಇ.ಡಿ.) ಅಂಪೈರ್ ಆಗಿದೆ, ಸಿಬಿಐ ಅಂಪೈರ್ ಆಗಿದೆ. ಅವರು ನ್ಯಾಯಾಲಯಗಳ ಮೇಲೂ ಪ್ರಭಾವ ಬೀರಲು ಪ್ರಯತ್ನಿಸುತ್ತಿದ್ದಾರೆ. ಅವರು ಇಡೀ ವ್ಯವಸ್ಥೆಯನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡಿದ್ದಾರೆ. ಈ ಸರ್ಕಾರವನ್ನು ಯಾರು ಟೀಕಿಸುತ್ತಾರೋ ಅವರು ಸಿಬಿಐ ಅಥವಾ ಇ.ಡಿ.ಯಿಂದ ದಾಳಿಗೆ ಒಳಗಾಗುತ್ತಾರೆ' ಎಂದು ಅವರು ಹೇಳಿದರು.

'ಬೌದ್ಧಿಕ ಅಪ್ರಾಮಾಣಿಕತೆ, ರಾಜಕೀಯ ವಂಚನೆ'

ಒಂದನೇ ಪುಟದಿಂದ

ಕೃಷಿ ಕಾಯ್ದೆಗಳನ್ನು ಪ್ರಧಾನಿ ಸಮರ್ಥಿಸಿಕೊಂಡಿದ್ದಾರೆ. 'ರಾಜಕೀಯ ಪಕ್ಷಗಳು ಚುನಾವಣೆಗೆ ಮುನ್ನ ನೀಡಿದ ಭರವಸೆಯನ್ನು ಪೂರೈಸಬೇಕು. ಆದರೆ, ಕೆಲವು ಪಕ್ಷಗಳು ಅಧಿಕಾರಕ್ಕೆ ಬಂದಾಗ ಆ ಕೆಲಸ ಮಾಡುವುದಿಲ್ಲ. ಆ ಪಕ್ಷಗಳು ಪ್ರಸ್ತಾಪಿಸಿದ್ದ ಸುಧಾರಣೆಗಳನ್ನು ಈಗಿನ ಸರ್ಕಾರ ಜಾರಿಗೆ ತಂದಿದೆ. ಆದರೆ, ಅವುಗಳು ತಮ್ಮ ನಿಲುವು ಬದಲಿಸಿಕೊಂಡು ದುರುದ್ದೇಶಪೂರಿತ ತಪ್ಪು ಮಾಹಿತಿ ಹರಡುತ್ತಿರುವುದು ಸರಿಯಲ್ಲ' ಎಂದು ಅವರು ಹೇಳಿದರು.

'ಓಪನ್' ನಿಯತಕಾಲಿಕೆಗೆ ಸಂದರ್ಶನ ನೀಡಿರುವ ಅವರು, ಸರ್ಕಾರ ಜಾರಿಗೊಳಿಸಿದ ಕಾರ್ಮಿಕ ಮತ್ತು ಕೃಷಿ ಕಾನೂನುಗಳನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿದ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರಿಸಿದರು.

ಕಾಂಗ್ರೆಸ್ ಸೇರಿದಂತೆ ಹಲವು ವಿರೋಧ ಪಕ್ಷಗಳು ಮೋದಿ ಸರ್ಕಾರ ಜಾರಿಗೆ ತಂದಿರುವ ಇದೇ ರೀತಿಯ ಕೃಷಿ ಸುಧಾರಣೆಗಳ ಭರವಸೆ ನೀಡಿದ್ದವು. ಆದರೆ ಈಗ ಸ್ವಾರ್ಥ ರಾಜಕೀಯ ಕಾರಣಗಳಿಗಾಗಿ ಹೊಸ ಕಾನೂನುಗಳ ವಿರುದ್ಧ ಪ್ರತಿಭಟನೆಗಳನ್ನು ಬೆಂಬಲಿಸುತ್ತಿವೆ ಎಂದು ಆಡಳಿತಾರೂಢ ಬಿಜೆಪಿ ಆರೋಪಿಸಿದೆ.

ಪಂಜಾಬ್, ಹರಿಯಾಣ, ಉತ್ತರ ಪ್ರದೇಶದ ರೈತರ ಕೆಲವು ಗುಂಪುಗಳು ಕೇಂದ್ರದ ಕಾಯ್ದೆಗಳನ್ನು ವಿರೋಧಿಸಿ 10 ತಿಂಗಳಿನಿಂದ ಪ್ರತಿಭಟನೆ ನಡೆಸುತ್ತಿವೆ. ಕಾಯ್ದೆ ಜಾರಿಯನ್ನು ತಡೆಹಿಡಿಯಲಾಗಿದೆ.

'ಭಿನ್ನಾಭಿಪ್ರಾಯ ಇರುವ ವಿಷಯಗಳ ಬಗ್ಗೆ ರೈತ ಸಂಘಟನೆಗಳ ಜೊತೆ ಕುಳಿತು ಮಾತುಕತೆ ನಡೆಸಲು ಸದಾ ಸಿದ್ಧ ಎಂದು ಸರ್ಕಾರವು ಆರಂಭದ ದಿನದಿಂದಲೂ ಹೇಳುತ್ತಾ ಬಂದಿದೆ. ಈ ನಿಟ್ಟಿನಲ್ಲಿ ಅನೇಕ ಸಭೆಗಳನ್ನು ಸಹ ನಡೆಸಲಾಗಿದೆ. ಆದರೆ ಯಾವ ವಿಷಯದಲ್ಲಿ ಬದಲಾವಣೆ ಆಗಬೇಕಿದೆ ಎಂಬ ಬಗ್ಗೆ ಇಲ್ಲಿಯವರೆಗೆ ಯಾರೂ ನಿರ್ದಿಷ್ಟ ಅಭಿಪ್ರಾಯ ವ್ಯಕ್ತಪಡಿಸಿಲ್ಲ' ಎಂದು ಅವರು ಹೇಳಿದರು.

ಕೋವಿಡ್ ನಿರ್ವಹಣೆಯಲ್ಲಿ ಸರ್ಕಾರವನ್ನು ಟೀಕಿಸಿದ್ದ ಪ್ರತಿಪಕ್ಷಗಳನ್ನು ಅವರು ತರಾಟೆಗೆ ತೆಗೆದುಕೊಂಡರು. ಮುಂದುವರಿದ ದೇಶಗಳಿಗಿಂತ ಭಾರತವು ಕೋವಿಡ್ ನಿರ್ವಹಣೆಯಲ್ಲಿ ಗಮನಾರ್ಹ ಪ್ರಗತಿ ದಾಖಲಿಸಿದೆ ಎಂದು ಪ್ರತಿಪಾದಿಸಿದರು. ತಮ್ಮ ಸರ್ಕಾರ ಜಾರಿಗೆ ತಂದಿರುವ ಜನಕಲ್ಯಾಣ ಕಾರ್ಯಕ್ರಮಗಳನ್ನು ಅವರು ಸಂದರ್ಶನದಲ್ಲಿ ವಿವರಿಸಿದರು.

'ವಿಮರ್ಶೆ, ಟೀಕೆಯನ್ನು ನಾನು ಬಹುವಾಗಿ ಗೌರವಿಸುತ್ತೇನೆ. ಆದರೆ, ವಿಮರ್ಶಕರ ಸಂಖ್ಯೆಯೇ ಕಡಿಮೆ ಇದ್ದು, ಆರೋಪ ಮಾಡುವವರೇ ಬಹಳಷ್ಟು ಜನರಿದ್ದಾರೆ. ವಿಮರ್ಶೆ ಮಾಡಬೇಕೆಂದರೆ ಕಠಿಣಶ್ರಮ, ಸಂಶೋಧನೆ ಅಗತ್ಯ. ಇಂದಿನ ವೇಗದ ಜಗತ್ತಿನಲ್ಲಿ ಜನರಿಗೆ ಬಹುಶಃ ಅದಕ್ಕೆ ಸಮಯ ಸಿಕ್ಕಿರಲಿಕ್ಕಿಲ್ಲ. ಹೀಗಾಗಿ, ಕೆಲವು ಸಂದರ್ಭದಲ್ಲಿ ನನಗೆ ಅಂಥ ಅಂಥ ವಿಮರ್ಶಕರು ಸಿಗುವುದಿಲ್ಲ' ಎಂದು ಹೇಳಿದ್ದಾರೆ.

'ಕತ್ತಿಯ ಅಲಗಿನ ಮೇಲಿನ ನಡಿಗೆ'

ತಮ್ಮ ಅಧಿಕಾರಾವಧಿಯ 20ಕ್ಕೂ ಹೆಚ್ಚು ವರ್ಷಗಳಲ್ಲಿ ಜನರಿಗೆ ಸಂಬಂಧಿಸಿದ ಪ್ರತಿಯೊಂದು ಸಮಸ್ಯೆಗಳ ಜೊತೆ ಮುಖಾಮುಖಿಯಾಗುವಲ್ಲಿ ಹಾಗೂ ಯೋಜನೆಗಳನ್ನು ರೂಪಿಸುವಲ್ಲಿ ತಮ್ಮದು ಕತ್ತಿಯ ಅಲಗಿನ ಮೇಲಿನ ನಡೆಯಾಗಿತ್ತು ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

'ಯಾವುದೇ ನಿರ್ಧಾರಗಳನ್ನು ತೆಗೆದುಕೊಂಡಾಗ, ಪ್ರಧಾನಿ ತಮ್ಮನ್ನು ಅರ್ಥಮಾಡಿಕೊಂಡಿದ್ದಾರೆ ಎಂದು ಜನರು ಭಾವಿಸುತ್ತಾರೆ. ಪ್ರಧಾನಿಯೂ ತಮ್ಮೊಳಗಿನ ಒಬ್ಬರು ಎಂದು ಸಾಮಾನ್ಯ ಜನರು ಪರಿಗಣಿಸಿದ್ದಾರೆ' ಎಂದು ಮೋದಿ ಹೇಳಿದರು.

'ನಾನು ಅಧಿಕಾರಕ್ಕೆ ಬಂದಾಗ ಜನರಿಗೆ ಮೂರು ಭರವಸೆ ನೀಡಿದ್ದೆ. ನಾನು ನನಗಾಗಿ ಏನನ್ನೂ ಮಾಡುವುದಿಲ್ಲ. ನಾನು ತಪ್ಪು ಉದ್ದೇಶದಿಂದ ಏನನ್ನೂ ಮಾಡುವುದಿಲ್ಲ. ನಾನು ಕಠಿಣ ಪರಿಶ್ರಮದ ಹೊಸ ಮಾದರಿಯನ್ನು ರಚಿಸುತ್ತೇನೆ ಎಂದು. ನನ್ನ ವೈಯಕ್ತಿಕ ಬದ್ಧತೆಯನ್ನು ಜನರು ಇಂದಿಗೂ ನೋಡುತ್ತಿದ್ದಾರೆ' ಎಂದು ಪ್ರಧಾನಿ ಹೇಳಿದರು.

'ದೇಶವನ್ನು ಗೆಲ್ಲಿಸೋಣ': ಭಾರತದ ರಾಜಕೀಯದಲ್ಲಿ ಒಂದು ಮಾದರಿ ಇದೆ. ಮುಂದಿನ ಸರ್ಕಾರವನ್ನು ರಚಿಸುವುದಕ್ಕಾಗಿ ಹಾಲಿ ಸರ್ಕಾರವನ್ನು ನಡೆಸಲಾಗುತ್ತದೆ. ಆದರೆ, ತಮ್ಮ ಮೂಲಭೂತ ಚಿಂತನೆ ವಿಭಿನ್ನವಾಗಿದ್ದು, 'ರಾಷ್ಟ್ರವನ್ನು ಕಟ್ಟಲು ಸರ್ಕಾರ ನಡೆಸಬೇಕು' ಎಂದು ಪ್ರಧಾನಿ ಹೇಳಿದರು.

ಛತ್ತೀಸ್‌ಗಡ, ಮೇಘಾಲಯದಲ್ಲೂ ಹೊಸ ಬಿಕ್ಕಟ್ಟು

ಪ್ರಜಾವಾಣಿ ವಾರ್ತೆ

ನವದೆಹಲಿ/ಗುವಾಹಟಿ: ಪಂಜಾಬ್‌ನಲ್ಲಿ ಬಿಕ್ಕಟ್ಟು ಎದುರಿಸುತ್ತಿರುವ ಕಾಂಗ್ರೆಸ್ ಪಕ್ಷಕ್ಕೆ, ಛತ್ತೀಸ್‌ಗಡ ಹಾಗೂ ಮೇಘಾಲಯದಲ್ಲೂ ಅದೇ ಪರಿಸ್ಥಿತಿ ಎದುರಿಸುವ ಸನ್ನಿವೇಶ ಎದುರಾಗಿದೆ.

ಛತ್ತೀಸ್‌ಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಅವರ ಬದಲಾವಣೆಯನ್ನು ತಡೆಯುವುದಕ್ಕಾಗಿ, ಅವರಿಗೆ ನಿಷ್ಠರಾದ ಶಾಸಕರ ತಂಡವು ದೆಹಲಿಯಲ್ಲಿ ಬೀಡುಬಿಟ್ಟಿದ್ದರೆ, ಇತ್ತ ಮೇಘಾಲಯದಲ್ಲಿ ಅಸಮಾಧಾನಗೊಂಡಿರುವ ಶಾಸಕರು ತೃಣಮೂಲ ಕಾಂಗ್ರೆಸ್ ಸೇರುವ ಸನ್ನಾಹದಲ್ಲಿದ್ದಾರೆ.

ನವಜೋತ್ ಸಿಂಗ್ ಸಿಧು, ಪಂಜಾಬ್ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸ್ಥಾನಕ್ಕೆ ನೀಡಿರುವ ರಾಜೀನಾಮೆ ವಿಷಯದ ಬಗ್ಗೆ ಶೀಘ್ರದಲ್ಲೇ ನಿರ್ಧಾರ ತೆಗೆದುಕೊಳ್ಳುವುದಾಗಿ ಕಾಂಗ್ರೆಸ್ ಹೇಳಿದೆ. ಸಿಧು ಕೂಡ ತಮಗೆ ಪಕ್ಷದಲ್ಲಿ ಸ್ಥಾನವಿದ್ದರೂ ಇರದಿದ್ದರೂ ರಾಹುಲ್ ಗಾಂಧಿ ಹಾಗೂ ಪ್ರಿಯಾಂಕಾ ಗಾಂಧಿ ಪರ ನಿಲ್ಲುವುದಾಗಿ ಹೇಳಿದ್ದಾರೆ.

ಹೀಗಾಗಿ, ರಾಜ್ಯದ ಕೆಲವು ಮುಖಂಡರ ವಿರೋಧ ಇದ್ದಾಗಲೂ ಮುಂಬರುವ ವಿಧಾನಸಭೆ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಪಕ್ಷವು ಸಿಧು ಅವರನ್ನೇ ಪಂಜಾಬ್ ಕಾಂಗ್ರೆಸ್ ಮುಖ್ಯಸ್ಥ ಸ್ಥಾನದಲ್ಲಿ ಉಳಿಸಿಕೊಳ್ಳಬಹುದು ಎನ್ನಲಾಗುತ್ತಿದೆ.

ಛತ್ತೀಸ್‌ಗಡದಲ್ಲಿ ಬಘೇಲ್ ಹಾಗೂ ಸಚಿವ ಟಿ.ಎಸ್.ಸಿಂಗ್ ದಿಯೊ ಅವರ ನಡುವಿನ ಅಧಿಕಾರ ಹಂಚಿಕೆ ಒಪ್ಪಂದ ಆಗಿರುವುದರಿಂದ, ಈಗ ದಿಯೊ ಅವರ ಸರದಿ ಬಂದಿದೆ. ಈ ಹಿನ್ನೆಲೆಯಲ್ಲಿ ಇಬ್ಬರೂ ನಾಯಕರು ರಾಹುಲ್ ಗಾಂಧಿ ಅವರನ್ನು ಭೇಟಿ ಮಾಡಿದ್ದಾರೆ.

ದಿಯೊ, ಹೈಕಮಾಂಡ್ ಸೂಚನೆಗಾಗಿ ಕಾಯುತ್ತಿದ್ದರೆ, ಅತ್ತ ಬಘೇಲ ನಿಷ್ಠರು ದೆಹಲಿಗೆ ದೌಡಾಯಿಸಿದ್ದಾರೆ.

ಮೇಘಾಲಯದಲ್ಲಿ, ರಾಜ್ಯ ಕಾಂಗ್ರೆಸ್ ಮುಖ್ಯಸ್ಥರನ್ನಾಗಿ ಕೇಂದ್ರದ ಮಾಜಿ ಸಚಿವ ವಿನ್ಸೆಂಟ್ ಪಾಲಾ ಅವರನ್ನು ನೇಮಕ ಮಾಡಿರುವುದಕ್ಕೆ, ಮಾಜಿ ಮುಖ್ಯಮಂತ್ರಿ ಮುಕುಲ್ ಸಂಗ್ಮಾ ಮತ್ತು ಕೆಲವು ಶಾಸಕರ ಗುಂಪು ಅಸಮಾಧಾನಗೊಂಡಿದೆ.

ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿರುವ ಮುಕುಲ್ ಸಂಗ್ಮಾ, ಇತ್ತೀಚೆಗೆ ಕೋಲ್ಕತ್ತದಲ್ಲಿ ತೃಣಮೂಲ ಕಾಂಗ್ರೆಸ್ ಕಾರ್ಯದರ್ಶಿಯನ್ನು ಭೇಟಿ ಮಾಡಿದ್ದಾಗಿಯೂ ವರದಿಯಾಗಿದೆ.

ಪಂಜಾಬ್ ರೀತಿಯ ಮತ್ತೊಂದು ಬಿಕ್ಕಟ್ಟು ಸೃಷ್ಟಿಯಾಗುವುದನ್ನು ತಡೆಯುವುದಕ್ಕಾಗಿ, ಭಾನುವಾರ ದೆಹಲಿಗೆ ಬರುವಂತೆ ಸಂಗ್ಮಾ ಅವರಿಗೆ ಸೋನಿಯಾಗಾಂಧಿ ಸೂಚಿಸಿದ್ದಾರೆ.

ಸಂಗ್ಮಾ ಮತ್ತು ಅಸಮಾಧಾನಗೊಂಡ ಕೆಲವು ಶಾಸಕರೂ ಸೋನಿಯಾ ಅವರನ್ನು ಭೇಟಿ ಮಾಡುವ ನಿರೀಕ್ಷೆ ಇದ್ದು, ಈ ಭೇಟಿಯ ನಂತರ ತಮ್ಮ ಮುಂದಿನ ನಡೆಯನ್ನು ನಿರ್ಧರಿಸುವ ಸಾಧ್ಯತೆ ಇದೆ.

'ಛತ್ತೀಸ್‌ಗಡ ಪಂಜಾಬ್ ಆಗದು'

ಈ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿರುವ ಬಘೇಲ್, 'ಛತ್ತೀಸ್‌ಗಡ ಎಂದಿಗೂ ಪಂಜಾಬ್ ಆಗುವುದಿಲ್ಲ. ಪಂಜಾಬ್ ಮತ್ತು ಛತ್ತೀಸಗಡದ ನಡುವೆ ಇರುವ ಏಕೈಕ ಸಾಮ್ಯತೆ ಎಂದರೆ, ಎರಡೂ ರಾಜ್ಯಗಳ ಹೆಸರಿನಲ್ಲಿ ಸಂಖ್ಯೆ ಇರುವುದು' ಎಂದಿದ್ದಾರೆ.

'ಶಾಸಕರು ಹೊರಗೆ ಎಲ್ಲಿಯೂ ಹೋಗಬಾರದೇ? ಎಲ್ಲಾ ನಡೆಗಳನ್ನೂ ರಾಜಕೀಯ ನಡೆ ಎಂದು ಪರಿಗಣಿಸಬಾರದು. ನೀವೂ ಕೂಡ (ಪತ್ರಕರ್ತರಿಗೆ) ನಿಮ್ಮ ಸ್ನೇಹಿತರ ಜೊತೆ ಸುತ್ತಾಡಲು ಹೋಗತ್ತೀರ. ಅದನ್ನೂ ಸುದ್ದಿ ಹುಡುಕಾಟ ಎನ್ನಲಾಗುತ್ತದೆಯೇ' ಎಂದು ಪ್ರಶ್ನಿಸಿದ್ದಾರೆ.



ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಅನಂತ್ ಕಾರ್ಸ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಮಹೀಂದ್ರ ಎಕ್ಸ್‌ಯುವಿ 700 ಅನ್ನು ನಟ ಸುದೀಪ್ ಬಿಡುಗಡೆ ಮಾಡಿದರು. ಸಂಸ್ಥೆಯ ಸಿಇಒ ಸಿ.ಭಾಸ್ಕರ್ ರಾಜು ಇದ್ದರು

ದೂರಸಂಪರ್ಕ ಪರವಾನಗಿ ನಿಯಮ ಸಡಿಲ

ನವದೆಹಲಿ (ಪಿಟಿಐ): ದೂರಸಂಪರ್ಕ ಕಂಪನಿಗಳು ಪರವಾನಗಿ ಶುಲ್ಕವನ್ನು ತಡವಾಗಿ ಪಾವತಿಸಿದರೆ ವಿಧಿಸುವ ಬಡ್ಡಿದರವನ್ನು ದೂರಸಂಪರ್ಕ ಇಲಾಖೆಯು ತಗ್ಗಿಸಿದೆ.

ಪರವಾನಗಿ ಶುಲ್ಕಕ್ಕೆ ಸಂಬಂಧಿಸಿದ ನಿಯಮದಲ್ಲಿ ತಿದ್ದುಪಡಿ ತರುವ ಮೂಲಕ ಇಲಾಖೆಯು ಈ ಕ್ರಮ ಕೈಗೊಂಡಿದೆ. ಇದರಿಂದಾಗಿ ದೂರಸಂಪರ್ಕ ವಲಯದ ಮೇಲಿನ ಆರ್ಥಿಕ ಹೊರೆಯು ತುಸು ತಗ್ಗುವ ನಿರೀಕ್ಷೆ ಮಾಡಲಾಗಿದೆ.

ನಿಯಮದಲ್ಲಿ ತಂದಿರುವ ತಿದ್ದುಪಡಿಯ ಪ್ರಕಾರ, ದೂರಸಂಪರ್ಕ ಕಂಪನಿಗಳು ವಿಳಂಬ ಪಾವತಿಗೆ ಎಸ್‌ಬಿಐನ ಒಂದು ವರ್ಷದ ಅವಧಿಯ ಎಂಸಿಎಲ್‌ಆರ್ ಮೇಲೆ ಶೇ 2ರಷ್ಟು ಬಡ್ಡಿದರವನ್ನು ಇಲಾಖೆಯು ವಿಧಿಸಲಿದೆ. ಈ ಮೊದಲು ಬಡ್ಡಿದರವು ಶೇ 4ರಷ್ಟು ಇತ್ತು. ಬಡ್ಡಿದರ ತಿಂಗಳಿಗೆ ಬದಲಾಗಿ ವಾರ್ಷಿಕವಾಗಿ ಲೆಕ್ಕಾಚಾರ ಮಾಡಲಾಗುತ್ತದೆ.

ಇಲಾಖೆಯು ಪರವಾನಗಿ ಷರತ್ತನ್ನು ಕೈಬಿಟ್ಟಿದೆ. ಅದರ ಅಡಿಯಲ್ಲಿ ಪರವಾನಗಿ ಶುಲ್ಕ ಪಡೆಯಲು ಕಂಪನಿಗಳು ಕಡಿಮೆ ಮೊತ್ತ ನೀಡಿದರೆ, ಪಾವತಿ ಮಾಡಬೇಕಿರುವ ಮೊತ್ತದ ಶೇ 50ರಷ್ಟಕ್ಕೆ ಸಮನಾಗಿ ದಂಡ ವಿಧಿಸಲಾಗುತ್ತಿತ್ತು.




ಪಾವತಿ ಮಾಡಬೇಕಿರುವ ಒಟ್ಟಾರೆ ಮೊತ್ತದಲ್ಲಿ ಶೇ 10ರಷ್ಟು ಕಡಿಮೆ ಮೊತ್ತ ಪಾವತಿಸಿದರೆ ಅದಕ್ಕೆ ದಂಡ ಕಟ್ಟಬೇಕಿತ್ತು. ಅಕ್ಟೋಬರ್ 1ರಿಂದ ಜಾರಿಗೆ ಬರುವಂತೆ ಇದನ್ನು ಕೈಬಿಡಲಾಗಿದೆ.

ಇಲಾಖೆಯ ಈ ನಿರ್ಧಾರದಿಂದ ದೂರಸಂಪರ್ಕ ವಲಯದಲ್ಲಿ ವಹಿವಾಟು ನಡೆಸುವುದು ಸುಲಭವಾಗಲಿದ್ದು, ಆರ್ಥಿಕ ಒತ್ತಡವೂ ಕಡಿಮೆ ಆಗಲಿದೆ ಎಂದು ಸೆಲ್ಯುಲಾರ್ ಆಪರೇಟರ್ಸ್ ಅಸೋಸಿಯೇಷನ್ ಆಫ್ ಇಂಡಿಯಾದ (ಸಿಒಎಐ) ಪ್ರಧಾನ ನಿರ್ದೇಶಕ ಎಸ್.ಪಿ. ಕೊಚ್ಚಾರ್ ಹೇಳಿದ್ದಾರೆ.

ಮೂಡಿಗೆರೆ ಕಾಫಿ

	ಮುದ್ರೆಮನೆ
ಎಪಿ	13950
ಎಸಿ	6325
ಆರ್‌ಪಿ	6200
ಆರ್‌ಸಿ	3590



4.7 ಕೋಟಿ ಟನ್ ಉತ್ಪಾದನೆ: ಎನ್‌ಎಂಡಿಸಿ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಸಕ್ತ ಹಣಕಾಸು ವರ್ಷದಲ್ಲಿ 4.7 ಕೋಟಿ ಟನ್‌ಗಳಷ್ಟು ಉತ್ಪಾದನೆಯ ಗುರಿ ತಲುಪುವ ನಿರೀಕ್ಷೆಯನ್ನು ಸರ್ಕಾರಿ ಸ್ವಾಮ್ಯದ ಎನ್‌ಎಂಡಿಸಿ ಹೊಂದಿದೆ.

ವಿಡಿಯೊ ಕಾನ್ಫರೆನ್ಸ್ ಮೂಲಕ ಕಂಪನಿಯ ಷೇರುದಾರರನ್ನು ಉದ್ದೇಶಿಸಿ ಮಾತನಾಡಿದ ಎನ್‌ಎಂಡಿಸಿ ಅಧ್ಯಕ್ಷ ಸುಮಿತ್ ದೇಬ್ ಅವರು, ಪ್ರಸಕ್ತ ಹಣಕಾಸು ವರ್ಷದ ಮೊದಲ ತ್ರೈಮಾಸಿಕದಲ್ಲಿ 89.1 ಲಕ್ಷ ಟನ್ ಉತ್ಪಾದನೆ ಮತ್ತು 94.5 ಲಕ್ಷ ಟನ್ ಮಾರಾಟವನ್ನು ಸಾಧಿಸಲಾಗಿದೆ. ಇದು ಈವರೆಗಿನ ದಾಖಲೆಯಾಗಿದೆ. ಕಾರ್ಯಾಚರಣೆಯ ಒಟ್ಟಾರೆ ವರಮಾನವು ₹6,512 ಕೋಟಿಗಳಷ್ಟಿದ್ದು, ಇದುವರೆಗೆ ಗರಿಷ್ಠ ಮಟ್ಟವಾಗಿದೆ ಎಂದು ಮಾಹಿತಿ ನೀಡಿದರು.

ಐಟಿ ಮತ್ತು ಡಿಜಿಟಲೀಕರಣವು ಕಂಪನಿಯ ಕಾರ್ಯತಂತ್ರದ ಆದ್ಯತೆಯಾಗಿದೆ. ತಂತ್ರಜ್ಞಾನ, ಸ್ವಯಂಚಾಲನೆ ಮತ್ತು ದತ್ತಾಂಶ ವಿಶ್ಲೇಷಣೆಗಳು ನಮ್ಮ ವ್ಯವಹಾರದ ಎಲ್ಲಾ ಅಂಶಗಳನ್ನು ಮರುಶೋಧಿಸುತ್ತವೆ ಎನ್ನುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದ್ದಾರೆ.

ಚಿನ್ನದ ವಿನಿಮಯ ನೀತಿ: ಮಲಬಾರ್ ಗೋಲ್ಡ್ ಸ್ವಾಗತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ ಚಿನ್ನದ ವಿನಿಮಯಕ್ಕಾಗಿ ಒಂದು ನೀತಿಯನ್ನು ರೂಪಿಸಲು ನಿರ್ಧರಿಸಿರುವ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯ (ಸೆಬಿ) ನಿರ್ಧಾರವನ್ನು ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ಅಧ್ಯಕ್ಷ ಎಂ.ಪಿ. ಅಹ್ಮದ್ ಸ್ವಾಗತಿಸಿದ್ದಾರೆ.

ಸೆಬಿಯ ಅನುಮೋದನೆಯಿಂದ ಪಾರದರ್ಶಕ ಬೆಲೆ, ಹೂಡಿಕೆಯ ದ್ರವ್ಯತೆ ಮತ್ತು ಚಿನ್ನದ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ದಾರಿ ಮಾಡಿಕೊಡುತ್ತದೆ. ಗ್ರಾಹಕರು ಗುಣಮಟ್ಟದ ಭರವಸೆ ಪಡೆಯುವುದರಿಂದ ಚಿನ್ನದ ಮೇಲೆ ಹೆಚ್ಚಿನ ಹೂಡಿಕೆ ನಿರೀಕ್ಷಿಸಬಹುದು ಎಂದು ಅವರು ಅಭಿಪ್ರಾಯಪಟ್ಟರು.



ಅಹ್ಮದ್

ಮಲಬಾರ್, ಈಗಾಗಲೇ ಒಂದು ಭಾರತ, ಒಂದು ಚಿನ್ನದ ಬೆಲೆ ಹಾಗೂ ತನ್ನ ಎಲ್ಲಾ ರೀಟೇಲ್ ಮಳಿಗೆಗಳಲ್ಲಿಯೂ 2020ರಿಂದಲೇ ನೂರಕ್ಕೆ ನೂರರಷ್ಟು ಪರಿಶುದ್ಧವಾದ ಹಾಲ್‌ಮಾರ್ಕ್‌ನ ಚಿನ್ನದ ಒಂದೇ ರೀತಿಯ ಬೆಲೆಯನ್ನು ನಿಗದಿ ಮಾಡುತ್ತಿದೆ ಎಂದು ತಿಳಿಸಿದರು.

ಚಿನ್ನದ ವ್ಯಾಪಾರದಲ್ಲಿ ಪಾರದರ್ಶಕತೆ ತರುವ ಉದ್ದೇಶವನ್ನು ಸೆಬಿ ವ್ಯಕ್ತಪಡಿಸಿದೆ. ಈ ಉದ್ದೇಶ ಸಾಧಿಸಲು ಅನಧಿಕೃತ ಆಭರಣ ತಯಾರಿಕೆ ತಡೆಯುವುದು ಅಗತ್ಯ. ಕಸ್ಟಮ್ಸ್ ಸುಂಕವನ್ನೂ ಕಡಿಮೆ ಮಾಡುವ ಮೂಲಕ ಚಿನ್ನದ ಕಳ್ಳಸಾಗಣೆ ತಡೆಯಬಹುದಾಗಿದೆ ಎಂದು ಅವರು ಹೇಳಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹460

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈಂಡ್)	₹1455 (1470)
ಸೋಯಾ (ರಿಫೈಂಡ್)	₹1335 (1335)
ಸೂರ್ಯಕಾಂತಿ (ರಿಫೈಂಡ್)	₹1380(1380)
ಪಾಮೋಲಿನ್	₹1218 (1216)



ಪಂಜಾಬ್ ಕಿಂಗ್ಸ್ ಮುಂದೆ ಕಠಿಣ ಸವಾಲು; ವಿರಾಟ್ ಕೊಹ್ಲಿಗೆ ಪ್ಲೇಆಫ್ ಕನಸು

ಬೆಂಗಳೂರು ಬಳಗಕ್ಕೆ ರಾಹುಲ್ ಸವಾಲು

ತಂಡಗಳು: ರಾಯಲ್ ಚಾಲೆಂಜರ್ಸ್ ಬೆಂಗಳೂರು: ವಿರಾಟ್ ಕೊಹ್ಲಿ (ನಾಯಕ), ದೇವದತ್ತ ಪಡಿಕ್ಕಲ್, ಕೆ.ಎಸ್. ಭರತ್, ಗ್ಲೆನ್ ಮ್ಯಾಕ್ಸ್‌ವೆಲ್, ಎಬಿ ಡಿವಿಲಿಯರ್ಸ್, ಡ್ಯಾನ್ ಕ್ರಿಸ್ಟಿಯನ್, ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್, ಯಜುವೇಂದ್ರ ಚಾಹಲ್, ಕೈಲ್ ಜೆಮಿಸನ್, ನವದೀಪ್ ಸೈನಿ, ಆಕಾಶ್‌ದೀಪ್, ಮೊಹಮ್ಮದ್ ಅಜರುದ್ದೀನ್, ವನಿಂದು ಹಸರಂಗ, ಟಿಮ್ ಡೇವಿಡ್

ಪಂಜಾಬ್ ಕಿಂಗ್ಸ್: ಕೆ.ಎಲ್. ರಾಹುಲ್ (ನಾಯಕ), ಮಯಂಕ್ ಅಗರವಾಲ್, ಅರ್ಷದೀಪ್ ಸಿಂಗ್, ಶಾರೂಕ್ ಖಾನ್, ಮೊಹಮ್ಮದ್ ಶಮಿ, ನೇಥನ್ ಎಲ್ಲಿಸ್, ಮೊಹಮ್ಮದ್ ಶಮಿ, ಹರಪ್ರೀತ್ ಬ್ರಾರ್, ಮಯಿಸೆಸ್ ಹೆನ್ರಿಕ್ಸ್, ಏಡನ್ ಮರ್ಕರಂ, ಆದಿಲ್ ರಶೀದ್. ಮನದೀಪ್ ಸಿಂಗ್, ರವಿ ಬಿಷ್ಣೋಯಿ.

ಪಂದ್ಯ ಆರಂಭ:
ಮಧ್ಯಾಹ್ನ 3.30
ನೇರ ಪ್ರಸಾರ:
ಸ್ಟಾರ್ ಸ್ಪೋರ್ಟ್ಸ್


ಯಜುವೇಂದ್ರ ಚಾಹಲ್ ಮತ್ತು ವಿರಾಟ್ ಕೊಹ್ಲಿ

ಶಾರ್ಜಾ (ಪಿಟಿಐ): ಪಂಜಾಬ್ ಕಿಂಗ್ಸ್ ತಂಡದ ನಾಯಕ, ಕನ್ನಡಿಗ ಕೆ.ಎಲ್. ರಾಹುಲ್ ಭಾನುವಾರ ತಮ್ಮ ತವರುನಾಡಿನ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಸವಾಲೊಡ್ಡಲಿದ್ದಾರೆ.

ರಾಹುಲ್ ಮತ್ತು ಮಯಂಕ್ ಅಗರವಾಲ್ ಪಂಜಾಬ್ ತಂಡಕ್ಕೆ ಒಳ್ಳೆಯ ಆರಂಭಿಕ ಜೋಡಿಯಾಗಿ ಮಿಂಚುತ್ತಿದ್ದಾರೆ. ಅವರಿಬ್ಬರ ಸ್ನೇಹಿತ ದೇವದತ್ತ ಪಡಿಕ್ಕಲ್ ಆರ್‌ಸಿಬಿಯ ಆರಂಭಿಕ ಬ್ಯಾಟ್ಸ್‌ಮನ್ ಆಗಿ ವಿರಾಟ್ ಕೊಹ್ಲಿ ಅವರೊಂದಿಗೆ ಗಟ್ಟಿ ಬುನಾದಿ ಹಾಕುವ ಕಾರ್ಯ ಮಾಡುತ್ತಿದ್ದಾರೆ.

ಆದರೆ, ಬೆಂಗಳೂರು ತಂಡವು ಈ ಪಂದ್ಯದಲ್ಲಿ ಗೆದ್ದುಬಿಟ್ಟರೆ ಪ್ಲೇ ಆಫ್ ಪ್ರವೇಶ ಖಚಿತವಾಗಲಿದೆ. ಈಗಾಗಲೇ ಚೆನ್ನೈ ಸೂಪರ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು ಪ್ಲೇ ಆಫ್ ಹಂತಕ್ಕೆ ಸಾಗಿವೆ. ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ವಿರಾಟ್ ಬಳಗದ ಖಾತೆಯಲ್ಲಿ 14 ಅಂಕಗಳಿವೆ.

ಆದರೆ, ಪಂಜಾಬ್ ಹಾದಿ ಸುಲಭವಲ್ಲ. ಖಾತೆಯಲ್ಲಿ ಹತ್ತು ಅಂಕಗಳನ್ನಿಟ್ಟುಕೊಂಡಿರುವ ರಾಹುಲ್ ಬಳಗ ತನ್ನ ಮುಂದಿರುವ ಇನ್ನೆರಡು ಪಂದ್ಯಗಳಲ್ಲಿ ಗೆಲ್ಲಲೇಬೇಕು. ಅದೂ ಉತ್ತಮ ರನ್ ಸರಾಸರಿಯೊಂದಿಗೆ. ಶುಕ್ರವಾರ ಕೋಲ್ಕತ್ತ ನೈಟ್ ರೈಡರ್ಸ್ ಎದುರಿನ ಪಂದ್ಯದಲ್ಲಿ ಜಯಿಸಿರುವ ಪಂಜಾಬ್ ಆತ್ಮವಿಶ್ವಾಸದಲ್ಲಿದೆ. ಕೊನೆಯ ಓವರ್‌ನವರೆಗೂ ಕುತೂಹಲ ಮೂಡಿಸಿದ್ದ ಪಂದ್ಯದಲ್ಲಿ ಬ್ಯಾಟ್ಸ್‌ಮನ್ ಶಾರೂಕ್ ಖಾನ್ ಹೊಡೆದ ಸಿಕ್ಸರ್‌ನಿಂದಾಗಿ ಬಾಲಿವುಡ್ ತಾರೆ ಪ್ರೀತಿ ಜಿಂಟಾ ಸಹಮಾಲೀಕತ್ವದ ಪಂಜಾಬ್ ಗೆದ್ದಿತ್ತು.

ಆದರೆ ಆರ್‌ಸಿಬಿಯನ್ನು ಎದುರಿಸಿ ನಿಲ್ಲುವುದು ಸಾಮಾನ್ಯ ಸವಾಲು ಅಲ್ಲ. ಏಕೆಂದರೆ, ತಂಡದ ಆರಂಭಿಕ ಜೋಡಿಯಂತೂ ಉತ್ತಮ ಲಯದಲ್ಲಿದೆ. ಅಲ್ಲದೇ ಕೆ.ಎಸ್. ಭರತ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಮಧ್ಯಮ ಕ್ರಮಾಂಕವನ್ನು ಬಲಿಷ್ಠಗೊಳಿಸಿದ್ದಾರೆ. ಇವರ ನಂತರದ ಕ್ರಮಾಂಕದಲ್ಲಿ ಎಬಿ ಡಿವಿಲಿಯರ್ಸ್ ಇರುವುದು ತಂಡದ ಬಲವನ್ನು ಮತ್ತಷ್ಟು ದ್ವಿಗುಣಗೊಳಿಸಿದೆ.

ಆರ್‌ಸಿಬಿಯ ನಿಜವಾದ ಶಕ್ತಿ ಇರುವುದು ಬೌಲಿಂಗ್ ವಿಭಾಗದಲ್ಲಿ. ಪರ್ಪಲ್ ಕ್ಯಾಪ್ ಧಾರಿ ಹರ್ಷಲ್ ಪಟೇಲ್ ಡೆತ್ ಓವರ್‌ಗಳಲ್ಲಿ ಸತತವಾಗಿ ಮಿಂಚುತ್ತಿದ್ದಾರೆ. ಈ ಟೂರ್ನಿಯಲ್ಲಿ ಒಂದು ಹ್ಯಾಟ್ರಿಕ್ ಸಾಧನೆಯನ್ನೂ ಅವರು ಮಾಡಿದ್ದಾರೆ. ಅವರಿಗೆ ಸಿರಾಜ್ ಮೊಹಮ್ಮದ್ , ಕೈಲ್ ಜೆಮಿಸನ್ ಉತ್ತಮ ಜೊತೆ ನೀಡುತ್ತಿದ್ದಾರೆ. ಸ್ಪಿನ್ನರ್ ಯಜುವೇಂದ್ರ ಚಾಹಲ್ ಎದುರಾಳಿ ತಂಡದ ಜೊತೆಯಾಟಗಳನ್ನು ಮುರಿಯುವಲ್ಲಿ ಯಶಸ್ವಿಯಾಗಿದ್ದಾರೆ.

ಆದರೆ, ಪಂಜಾಬ್ ತಂಡದ ಬೌಲಿಂಗ್ ರವಿ ಬಿಷ್ಣೋಯಿ ಬಿಟ್ಟರೆ ಉಳಿದವರಿಂದ ಸ್ಥಿರ ಪ್ರದರ್ಶನ ಕಂಡುಬರುತ್ತಿಲ್ಲ. ಈ ವಿಭಾಗವನ್ನು ಸರಿಪಡಿಸಲು ಮುಖ್ಯ ಕೋಚ್ ಅನಿಲ್ ಕುಂಬ್ಳೆ ಯಾವ ರೀತಿ ಯೋಜನೆ ಹೆಣೆಯುವರು ಎಂಬುದು ಕುತೂಹಲ ಮೂಡಿಸಿದೆ.

ಮುಖ್ಯಾಂಶಗಳು
- ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿರುವ ಆರ್‌ಸಿಬಿ
- ಉತ್ತಮ ಲಯದಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್, ಭರತ್
- ಕಳೆದ ಪಂದ್ಯದಲ್ಲಿ ಅರ್ಧಶತಕ ಗಳಿಸಿದ್ದ ಕೆ.ಎಲ್. ರಾಹುಲ್


ಮಯಂಕ್ ಅಗರವಾಲ್ – ಕೆ.ಎಲ್ ರಾಹುಲ್

ಬಲಾಬಲ	
ಪಂದ್ಯಗಳು	27
ಆರ್‌ಸಿಬಿ ಜಯ	12
ಪಂಜಾಬ್ ಜಯ	15

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	12	9	3	00	00	18
ಡೆಲ್ಲಿ ಕ್ಯಾಪಿಟಲ್ಸ್	12	9	3	00	00	18
ಬೆಂಗಳೂರು	11	7	4	00	00	14
ಕೋಲ್ಕತ್ತ ನೈಟ್‌ರೈಡರ್ಸ್	12	5	7	00	00	10
ಪಂಜಾಬ್	12	5	7	00	00	10
ರಾಜಸ್ಥಾನ	12	5	7	00	00	10
ಮುಂಬೈ ಇಂಡಿಯನ್ಸ್	12	5	7	00	00	10
ಹೈದರಾಬಾದ್	11	2	9	00	00	4

* ಶನಿವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಋತುರಾಜ್	ಚೆನ್ನೈ	508
ಕೆ.ಎಲ್.ರಾಹುಲ್	ಪಂಜಾಬ್	489
ಸಂಜು ಸ್ಯಾಮ್ಸನ್	ರಾಜಸ್ಥಾನ	480

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	26
ಆವೇಶ್ ಖಾನ್	ಡೆಲ್ಲಿ	21
ಬೂಮ್ರಾ	ಮುಂಬೈ	17

ಮುಂಬೈ ಪ್ಲೇಆಫ್ ಹಾದಿ ಜಟಿಲ

ಮಿಂಚಿದ ಆವೇಶ್ ಖಾನ್, ಅಕ್ಷರ್: ಡೆಲ್ಲಿಗೆ ಜಯ

ಶಾರ್ಜಾ (ಪಿಟಿಐ): ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡದ ಪ್ಲೇ ಆಫ್ ಪ್ರವೇಶದ ಹಾದಿ ಮತ್ತಷ್ಟು ಜಟಿಲವಾಗಿದೆ.

ಶನಿವಾರ ಸಂಜೆ ಡೆಲ್ಲಿ ಕ್ಯಾಪಿಟಲ್ಸ್ ಎದುರು 4 ವಿಕೆಟ್‌ಗಳಿಂದ ಸೋತಿರುವ ಮುಂಬೈ ತಂಡ ಈ ಬಾರಿ ಲೀಗ್ ಹಂತದಿಂದಲೇ ಹೊರಬೀಳುವ ಆತಂಕದಲ್ಲಿದೆ.

ಶಾರ್ಜಾ ಕ್ರಿಕೆಟ್ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ತಲಾ ಮೂರು ವಿಕೆಟ್ ಗಳಿಸಿದ ಡೆಲ್ಲಿ ತಂಡದ ಆವೇಶ್ ಖಾನ್ ಮತ್ತು ಸ್ಪಿನ್ನರ್ ಅಕ್ಷರ್ ಪಟೇಲ್ ಮುಂಬೈ ತಂಡವನ್ನು 129 ರನ್‌ಗಳಿಗೆ ಸೀಮಿತಗೊಳಿಸಿದರು.

ಮುಂಬೈ ತಂಡದ ಕೃಣಾಲ್ ಪಾಂಡ್ಯ ಮತ್ತು ಕೌಲ್ಟರ್ ನೈಲ್ ಅವರು ಆರಂಭದಲ್ಲಿಯೇ ಡೆಲ್ಲಿಗೆ ಪೆಟ್ಟುಕೊಟ್ಟರು. ಆದರೆ ನಾಯಕ ರಿಷಭ್ ಪಂತ್ (26 ರನ್) ಮತ್ತು ಶ್ರೇಯಸ್ ಅಯ್ಯರ್ (ಔಟಾಗದೆ 33) ಅವರ ಆಟದ ಬಲದಿಂದ 19.1 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 132 ರನ್ ಗಳಿಸಿ ಗೆದ್ದಿತು. ಕೊನೆಯಲ್ಲಿ ಶಿಮ್ರೊನ್ ಹೆಟ್ಮೆಯರ್ (15) ಮತ್ತು ಆರ್. ಅಶ್ವಿನ್ (ಔಟಾಗದೆ 20) ಮಹತ್ವದ ಕಾಣಿಕೆ ನೀಡಿದರು.

ಮುಂಬೈ ತಂಡದ ನಾಯಕ ರೋಹಿತ್ ಮತ್ತು ಕೀರನ್ ಪೊಲಾರ್ಡ್ ಅವರು ಎರಡಂಕಿ ಮುಟ್ಟಲಿಲ್ಲ. ಕ್ವಿಂಟನ್ ಡಿಕಾಕ್ (19), ಸೂರ್ಯಕುಮಾರ್ ಯಾದವ್ (33 ರನ್) ಅವರು ಇನಿಂಗ್ಸ್ ಬೆಳೆಸುವ ಪ್ರಯತ್ನ ಮಾಡಿದರು. ಇವರ ಜೊತೆಯಾಟ ಮುರಿದುಬಿದ್ದ ನಂತರ ದೊಡ್ಡ ಮೊತ್ತದ ಪಾಲುದಾರಿಕೆ ಆಟಗಳು ಮೂಡಿಬರದಿರುವುದು ಹಿನ್ನಡೆಗೆ ಕಾರಣವಾಯಿತು.

ಸಾಧಾರಣ ಮೊತ್ತವನ್ನು ಕಾಪಾಡಿಕೊಂಡು ತಂಡಕ್ಕೆ ಗೆಲುವಿನ ಕಾಣಿಕೆ ಕೊಡಲು ಮುಂಬೈ ಬೌಲರ್‌ಗಳು ಮಾಡಿದ ಪ್ರಯತ್ನ ಫಲ ನೀಡಲಿಲ್ಲ. ಉಭಯ ತಂಡಗಳು ತಲಾ 12 ಪಂದ್ಯಗಳನ್ನು ಆಡಿವೆ. ಡೆಲ್ಲಿ 18 ಅಂಕಗಳೊಂದಿಗೆ ಎರಡನೇ ಸ್ಥಾನದಲ್ಲಿದೆ. ಆದರೆ ಮುಂಬೈ ತಂಡವು ಏಳರಲ್ಲಿ ಸೋತಿದೆ. 10 ಅಂಕಗಳೊಂದಿಗೆ ಆರನೇ ಸ್ಥಾನದಲ್ಲಿದೆ. ಕೋಲ್ಕತ್ತ, ಪಂಜಾಬ್ ತಂಡಗಳೂ ತಲಾ ಹತ್ತು ಅಂಕ ಗಳಿಸಿವೆ. ಆದರೆ ಕೋಲ್ಕತ್ತ ರನ್ ಸರಾಸರಿಯಲ್ಲಿ ಇವೆರಡಕ್ಕಿಂತಲೂ ಉತ್ತಮವಾಗಿವೆ.

ಈ ಮೂರು ತಂಡಗಳಿಗೂ ಟೂರ್ನಿಯಲ್ಲಿ ತಲಾ ಎರಡು ಪಂದ್ಯಗಳು ಬಾಕಿಯಿವೆ. ಯಾವ ತಂಡ ಪ್ಲೇ ಆಫ್‌ಗೇರುವಲ್ಲಿ ಯಶ ಕಾಣುವುದೆಂಬ ಕುತೂಹಲ ಈಗ ಗರಿಗೆದರಿದೆ.

ಸ್ಕೋರ್ ಕಾರ್ಡ್

ಮುಂಬೈ ಇಂಡಿಯನ್ಸ್ 8ಕ್ಕೆ 129 (20 ಓವರ್)
ರೋಹಿತ್ ಸಿ ರಬಾಡ ಬಿ ಆವೇಶ್ 7 (10 ಎ, 4x1), ಕ್ವಿಂಟನ್ ಸಿ ನಾರ್ಕಿಯಾ ಬಿ ಪಟೇಲ್ 19 (18 ಎ, 4x1, 6x1), ಸೂರ್ಯಕುಮಾರ್ ಸಿ ರಬಾಡ ಬಿ ಪಟೇಲ್ 33 (26 ಎ, 4x2, 6x2), ಸೌರಭ್ ಸಿ ಪಂತ್ ಬಿ ಪಟೇಲ್ 15 (18 ಎ, 4x1), ಪೊಲಾರ್ಡ್ ಬಿ ನಾರ್ಕಿಯಾ 6 (9 ಎ), ಹಾರ್ದಿಕ್ ಬಿ ಆವೇಶ್ 17 (18 ಎ, 4x2), ಕೃಣಾಲ್ ಔಟಾಗದೆ 13 (15 ಎ, 4x1, 6x1), ಕಾಲ್ಟರ್‌ನೈಲ್ ಬಿ ಆವೇಶ್ 1 (2 ಎ), ಜಯಂತ್ ಸಿ ಸ್ಮಿತ್ ಬಿ ಅಶ್ವಿನ್ 11 (4 ಎ, 4x1, 6x1), ಬೂಮ್ರಾ ಔಟಾಗದೆ 1 (1 ಎ)
ಇತರೆ (ನೋಬಾಲ್ 1, ವೈಡ್ 5) 6
ವಿಕೆಟ್ ಪತನ: 1-8 (ರೋಹಿತ್ ಶರ್ಮಾ, 1.5), 2-37 (ಕ್ವಿಂಟನ್ ಡಿ ಕಾಕ್, 6.2), 3-68 (ಸೂರ್ಯಕುಮಾರ್ ಯಾದವ್, 10.3), 4-80 (ಸೌರಭ್, 12.5), 5-87 (ಕೀರನ್ ಪೊಲಾರ್ಡ್, 14.1), 6-109 (ಹಾರ್ದಿಕ್ ಪಾಂಡ್ಯ, 18.1), 7-111 (ನೇಥನ್ ಕಾಲ್ಟರ್‌ನೈಲ್, 18.4), 8-122 (ಜಯಂತ್ ಯಾದವ್, 19.2))
ಬೌಲಿಂಗ್: ಆ್ಯನ್ರಿಚ್ ನಾರ್ಕಿಯಾ 4–1–19–1, ಆವೇಶ್ ಖಾನ್ 4–0–15–3, ರವಿಚಂದ್ರನ್ ಅಶ್ವಿನ್ 4–0–41–1, ಕಗಿಸೊ ರಬಾಡ 4–0–33–0, ಅಕ್ಷರ್ ಪಟೇಲ್ 4–0–21–3

ಡೆಲ್ಲಿ ಕ್ಯಾಪಿಟಲ್ಸ್ 6ಕ್ಕೆ 132 (19.1 ಓವರ್)
ಪೃಥ್ವಿ ಎಲ್‌ಬಿಡಬ್ಲ್ಯು ಕೃಣಾಲ್ 6 (7 ಎ, 4x1), ಶಿಖರ್ ರನೌಟ್ ಪೊಲಾರ್ಡ್ 8 (7 ಎ, 6x1), ಸ್ಮಿತ್ ಬಿ ಕಾಲ್ಟರ್‌ನೈಲ್ 9 (8 ಎ, 6x1), ರಿಷಭ್ ಸಿ ಹಾರ್ದಿಕ್ ಬಿ ಯಾದವ್ 26 (22 ಎ, 4x3, 6x1), ಶ್ರೇಯಸ್ ಔಟಾಗದೆ 33 (33 ಎ, 4x2), ಅಕ್ಷರ್ ಎಲ್‌ಬಿಡಬ್ಲ್ಯು ಬಿ ಬೌಲ್ಟ್ 9 (9 ಎ, 4x1), ಹೆಟ್ಮೆಯರ್ ಸಿ ರೋಹಿತ್ ಬಿ ಬೂಮ್ರಾ 15 (8 ಎ, 4x2), ಅಶ್ವಿನ್ ಔಟಾಗದೆ 20 (21 ಎ, 6x1)
ಇತರೆ (ಲೆಗ್ ಬೈ 2, ವೈಡ್ 4) 6
ವಿಕೆಟ್ ಪತನ: 1-14 (ಶಿಖರ್ ಧವನ್, 1.6), 2-15 (ಪೃಥ್ವಿ ಶಾ, 2.4), 3-30 (ಸ್ಟೀವನ್ ಸ್ಮಿತ್, 4.1), 4-57 (ರಿಷಭ್ ಪಂತ್, 8.2), 5-77 (ಅಕ್ಷರ್ ಪಟೇಲ್, 11.4), 6-93 (ಶಿಮ್ರಾನ್ ಹೆಟ್ಮೆಯರ್, 13.1)
ಬೌಲಿಂಗ್: ಟ್ರೆಂಟ್ ಬೌಲ್ಟ್ 4–0–24–1, ಜಯಂತ್ ಯಾದವ್ 4–0–31–1, ಕೃಣಾಲ್ ಪಾಂಡ್ಯ 2.1–0–18–1, ಜಸ್‌ಪ್ರೀತ್ ಬೂಮ್ರಾ 4–0–29–1, ನೇಥನ್ ಕಾಲ್ಟರ್‌ನೈಲ್ 4–0–19–1, ಕೀರನ್ ಪೊಲಾರ್ಡ್ 1–0–9–0

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 4 ವಿಕೆಟ್‌ಗಳ ಜಯ


ವಿಕೆಟ್ ಗಳಿಸಿದ ಆವೇಶ್ ಖಾನ್ ಅವರನ್ನು ಅಭಿನಂದಿಸಿದ ಸಹ ಆಟಗಾರರು –ಪಿಟಿಐ ಚಿತ್ರ

ಜಯದ ಒತ್ತಡದಲ್ಲಿ ಕೋಲ್ಕತ್ತ

ದುಬೈ (ಪಿಟಿಐ): ಏಯಾನ್ ಮಾರ್ಗನ್ ನಾಯಕತ್ವದ ಕೋಲ್ಕತ್ತ ನೈಟ್ ರೈಡರ್ಸ್ ತಂಡ ಭಾನುವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧದ ಪಂದ್ಯದಲ್ಲಿ ಜಯಿಸಲೇಬೇಕಾದ ಒತ್ತಡದಲ್ಲಿದೆ.

ಪಾಯಿಂಟ್ ಪಟ್ಟಿಯನಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಕೋಲ್ಕತ್ತ ತಂಡವು ಪ್ಲೇ ಆಫ್ ಪ್ರವೇಶಿಸಲು ತನ್ನ ಮುಂದಿರುವ ಎರಡೂ ಪಂದ್ಯಗಳಲ್ಲಿ ಜಯ ಗಳಿಸಬೇಕು. ಒಂದರಲ್ಲಿ ಸೋತರೂ ಅವಕಾಶವಂಚಿತರಾಗುವ ಸಾಧ್ಯತೆ ದಟ್ಟವಾಗಿದೆ. ರಾಹುಲ್ ತ್ರಿಪಾಠಿ ಮತ್ತು ನಿತೀಶ್ ಯಾದವ್ ಉತ್ತಮ ಲಯದಲ್ಲಿದ್ದಾರೆ. ಅದರಿಂದಾಗಿ ಮಧ್ಯಮ ಕ್ರಮಾಂಕದಲ್ಲಿ ಭರವಸೆ ಹೆಚ್ಚಿದೆ. ಆದರೆ ನಾಯಕ ಮಾರ್ಗನ್ ಬ್ಯಾಟಿಂಗ್ ವೈಫಲ್ಯ ತಂಡವನ್ನು ಕಾಡುತ್ತಿರುವುದು ಸುಳ್ಳಲ್ಲ. ಟಿಮ್ ಸೌಥಿ, ವರುಣ ಚಕ್ರವರ್ತಿ, ಸುನೀಲ್ ನಾರಾಯಣ್ ಅವರು ಬೌಲಿಂಗ್ ಚೆನ್ನಾಗಿ ಮಾಡುತ್ತಿದ್ದಾರೆ. ಫೀಲ್ಡರ್‌ಗಳು ಉತ್ತಮ ಬೆಂಬಲ ನೀಡಿದರೆ ಜಯದ ಹಾದಿ ಸುಲಭವಾಗಬಹುದು. ಆದರೆ, ಈಗಾಗಲೇ ಪ್ಲೇ ಅಫ್ ಹಾದಿಯಿಂದ ಹೊರಬಿದ್ದಿರುವ ಸನ್‌ರೈಸರ್ಸ್, ಕೋಲ್ಕತ್ತ ಕನಸಿಗೆ ಅಡ್ಡಿಯಾಗುವ ಸಾಧ್ಯತೆಗಳೂ ಇವೆ.

ಪಂದ್ಯ ಆರಂಭ: ರಾತ್ರಿ 7.30

ಕರ್ನಾಟಕ ತಂಡಗಳ ಜಯಭೇರಿ

ಬೆಂಗಳೂರು: ಕರ್ನಾಟಕದ ಪುರುಷರ ಮತ್ತು ಮಹಿಳಾ ತಂಡಗಳು ಬಿಸಿಸಿಐ 19 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಜಯ ಸಾಧಿಸಿದವು.

ಜೈಪುರದದಲ್ಲಿ ನಡೆದ ಮಹಿಳೆಯರ ಪಂದ್ಯದಲ್ಲಿ ಸ್ನೇಹಾ ಜಗದೀಶ್ (5ಕ್ಕೆ 4) ನಾಯಕಿ ಚಾಂದಸಿ ಕೃಷ್ಣಮೂರ್ತಿ (4ಕ್ಕೆ 4) ಅವರ ಪರಿಣಾಮಕಾರಿ ಬೌಲಿಂಗ್ ಬಲದಿಂದ ಕರ್ನಾಟಕ ತಂಡವು 10 ವಿಕೆಟ್‌ಗಳಿಂದ ಮಿಜೋರಾಂ ತಂಡವನ್ನು ಮಣಿಸಿತು. ಇಂದೋರ್‌ನಲ್ಲಿ ನಡೆದ ಪಂದ್ಯದಲ್ಲಿಕರ್ನಾಟಕ ಪುರುಷರ ತಂಡವು ಐದು ವಿಕೆಟ್‌ಗಳಿಂದ ಜಮ್ಮು ಮತ್ತು ಕಾಶ್ಮೀರ ತಂಡವನ್ನು ಸೋಲಿಸಿತು.

ಶಿವಂ ಅಬ್ಬರ: ಗೆದ್ದ ರಾಯಲ್ಸ್

ಅಬುಧಾಬಿ: ಯಶಸ್ವಿ ಜೈಸ್ವಾಲ್ ಮತ್ತು ಶಿವಂ ದುಬೆ ಅವರ ಅರ್ಧಶತಕಗಳ ಮುಂದೆ ಚೆನ್ನೈ ಸೂಪರ್ ಕಿಂಗ್ಸ್ ತಂಡದ ಋತುರಾಜ್ ಗಾಯಕವಾಡ್ ಶತಕ ಮಂಕಾಯಿತು.

ಯುಎಇಯಲ್ಲಿ ನಡೆಯುತ್ತಿರುವ 14ನೇ ಆವೃತ್ತಿಯ ಎರಡನೇ ಸುತ್ತಿನ ಬಹುತೇಕ ಪಂದ್ಯಗಳಲ್ಲಿ ಬೌಲರ್‌ಗಳೇ ಪಾರಮ್ಯ ಮೆರೆದಿದ್ದಾರೆ. ಆದರೆ, ಈ ಪಂದ್ಯದಲ್ಲಿ ಬ್ಯಾಟಿಂಗ್ ರಂಗೇರಿತು. ರಾಜಸ್ಥಾನ್ ರಾಯಲ್ಸ್ ತಂಡವು 7 ವಿಕೆಟ್‌ಗಳಿಂದ ಜಯ ಗಳಿಸಿತು.

ಟಾಸ್ ಗೆದ್ದು ರಾಯಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಋತುರಾಜ್ (ಔಟಾಗದೇ 101; 60ಎಸೆತ, 9ಬೌಂಡರಿ, 5ಸಿಕ್ಸರ್) ಶತಕದ ಬಲದಿಂದ ಚೆನ್ನೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 189 ರನ್ ಗಳಿಸಿತು.

ಅದಕ್ಕುತ್ತರವಾಗಿ ರಾಯಲ್ಸ್ ತಂಡವು ಇನಿಂಗ್ಸ್‌ನಲ್ಲಿ ಇನ್ನೂ 15 ಎಸೆತಗಳು ಬಾಕಿಯಿರುವಾಗಲೇ ಗೆಲುವಿನ ದಡ ಸೇರಿತು. 17.3 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 190 ರನ್ ಗಳಿಸಿತು. 19 ವರ್ಷದ ಯಶಸ್ವಿ ಜೈಸ್ವಾಲ್ ಹತ್ತೊಂಬತ್ತು ಎಸೆತಗಳಲ್ಲಿ ಅರ್ಧಶತಕ ಹೊಡೆದರು. ಇದರಿಂದಾಗಿ ತಂಡವು ಕೇವಲ ಆರು ಓವರ್‌ಗಳಲ್ಲಿ 81 ರನ್ ಗಳಿಸಿತು. ಯಶಸ್ವಿ ಔಟಾದ ನಂತರವೂ ರನ್ ಗಳಿಕೆಯ ವೇಗ ತಗ್ಗದಂತೆ ಸಂಜು ಸ್ಯಾಮ್ಸನ್ ನೋಡಿಕೊಂಡರು. ಆದರೆ, ಗೆಲುವಿನತ್ತ ತಂಡವನ್ನು ಮುನ್ನಡೆಸಿದವರು ಶಿವಂ ದುಬೆ. 42 ಎಸೆತಗಳಲ್ಲಿ ಅಜೇಯ 64 ಗಳಿಸಿದರು.

ನಾಲ್ಕು ಸಿಕ್ಸರ್ ಮತ್ತು ಬೌಂಡರಿಗಳನ್ನು ಬಾರಿಸಿದ ಶಿವಂ ಬೌಲರ್‌ಗಳಿಗೆ ಯಾವುದೇ ಅವಕಾಶ ಸಿಗದಂತೆ ನೋಡಿಕೊಂಡರು. ಅವರಿಗೆ ಗ್ಲೆನ್ ಫಿಲಿಪ್ಸ್ (ಔಟಾಗದೆ 14) ಉತ್ತಮ ಜೊತೆ ನೀಡಿದರು. ಚೆನ್ನೈ ತಂಡವು ಈಗಾಗಲೇ ಪ್ಲೇ ಆಫ್ ಪ್ರವೇಶಿಸಿದೆ. ಈ ಗೆಲುವಿನಿಂದಾಗಿ ರಾಯಲ್ಸ್ ಅಂಕಪಟ್ಟಿಯಲ್ಲಿ ಏಳರಿಂದ ಆರನೇ ಸ್ಥಾನಕ್ಕೇರಿದೆ. ಇನ್ನೂ ಎರಡು ಪಂದ್ಯಗಳಲ್ಲಿ ಆಡಬೇಕಿದೆ.

ಋತುರಾಜ್ 508 ರನ್: ಈ ಐಪಿಎಲ್‌ನಲ್ಲಿ ಐದನೂರು ರನ್‌ಗಳ ಗಡಿ ದಾಟಿದ ಮೊದಲ ಆಟಗಾರನೆಂಬ ಶ್ರೇಯಕ್ಕೆ ಋತುರಾಜ್ ಪಾತ್ರರಾದರು. 12 ಪಂದ್ಯಗಳನ್ನು ಆಡಿರುವ ಆರಂಭಿಕ ಬ್ಯಾಟ್ಸ್‌ಮನ್ ಮೂರು ಅರ್ಧಶತಕಗಳನ್ನೂ ದಾಖಲಿಸಿದ್ದಾರೆ. ರಾಜಸ್ಥಾನ್ ತಂಡದ ಬೌಲರ್‌ಗಳನ್ನು ದಿಟ್ಟವಾಗಿ ಎದುರಿಸಿದ ಋತುರಾಜ್ 43 ಎಸೆತಗಳಲ್ಲಿ ಅರ್ಧಶತಕ ಪೂರೈಸಿದರು. ಅದರಲ್ಲಿ ಆರು ಬೌಂಡರಿಗಳಿದ್ದವು.

ನಂತರ ಎದುರಿಸಿದ ಕೇವಲ 17 ಎಸೆತಗಳಲ್ಲಿ 51 ರನ್‌ಗಳನ್ನು ಸೂರೆ ಮಾಡಿದರು. ಇದರಲ್ಲಿ ಒಟ್ಟು ಐದು ಸಿಕ್ಸರ್ ಸಿಡಿಸಿದರು. ಇನಿಂಗ್ಸ್‌ನ ಕೊನೆಯ ಎಸೆತ ಬಾಕಿಯಿದ್ದಾಗ 95 ರನ್ ಗಳಿಸಿದ್ದ ಋತುರಾಜ್ ಸಿಕ್ಸರ್ ಮೂಲಕವೇ ಶತಕ ಪೂರೈಸಿದರು. ಡಗ್‌ಔಟ್‌ನಲ್ಲಿದ್ದ ನಾಯಕ ಮಹೇಂದ್ರಸಿಂಗ್ ಧೋನಿ ಚಪ್ಪಾಳೆ ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಟೂರ್ನಿಯಲ್ಲಿ ಶತಕ ಗಳಿಸಿದ ನಾಲ್ಕನೇ ಆಟಗಾರ ಋತುರಾಜ್ ಆಗಿದ್ದಾರೆ.


ಶಿವಂ ದುಬೆ– ಪಿಟಿಐ ಚಿತ್ರ


ಋತುರಾಜ್ ಗಾಯಕವಾಡ

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್ 4ಕ್ಕೆ 189 (20 ಓವರ್)
ಋತುರಾಜ್ ಔಟಾಗದೆ 101 (60 ಎ, 4x9, 6x5), ಡು ಪ್ಲೆಸಿ ಸ್ಟಂಪ್ಡ್ ಸಂಜು ಬಿ ತೇವಾಟಿಯಾ 25 (19 ಎ, 4x2, 6x1), ರೈನಾ ಸಿ ದುಬೆ ಬಿ ತೇವಾಟಿಯಾ 3 (5 ಎ), ಮೋಯಿನ್ ಸ್ಟಂಪ್ಡ್ ಸಂಜು ಬಿ ತೇವಾಟಿಯಾ 21 (17 ಎ, 4x1, 6x1), ಅಂಬಟಿ ಸಿ ಫಿಲಿಪ್ಸ್ ಬಿ ಸಕಾರಿಯ 2 (4 ಎ), ಜಡೇಜ ಔಟಾಗದೆ 32 (15 ಎ, 4x4, 6x1ಎ)
ಇತರೆ (ವೈಡ್ 5) 5
ವಿಕೆಟ್ ಪತನ: 1-47 (ಫಫ್ ಡು ಪ್ಲೆಸಿ, 6.5), 2-57 (ಸುರೇಶ್ ರೈನಾ, 8.3), 3-114 (ಮೋಯಿನ್ ಅಲಿ, 14.3), 4-134 (ಅಂಬಟಿ ರಾಯುಡು, 16.2)
ಬೌಲಿಂಗ್: ಆಕಾಶ್ ಸಿಂಗ್ 4–0–39–0, ಚೇತನ್ ಸಕಾರಿಯ 4–0–31–1, ಮುಸ್ತಫಿಜುರ್ ರಹಿಮಾನ್ 4–0–51–0, ರಾಹುಲ್ ತೇವಾಟಿಯಾ 4–0–39–3, ಮಯಂಕ್ ಮಾರ್ಕಂಡೆ 3–0–26–0, ಗ್ಲೆನ್ ಫಿಲಿಪ್ಸ್ 1–0–3–0

ರಾಜಸ್ಥಾನ್ ರಾಯಲ್ಸ್ 3ಕ್ಕೆ 190 (17.3 ಓವರ್)
ಎವಿನ್ ಬಿ ಹ್ಯಾಜಲ್‌ವುಡ್ ಬಿ ಠಾಕೂರ್ 27 (12 ಎ, 4x2, 6x2), ಜೈಸ್ವಾಲ್ ಸಿ ಧೋನಿ ಬಿ ಆಸಿಫ್ 50 (21 ಎ, 4x6, 6x3), ಸಂಜು ಸಿ ಗಾಯಕವಾಡ್ ಬಿ ಠಾಕೂರ್ 28 (24 ಎ, 4x4), ಶಿವಂ ಔಟಾಗದೆ 64 (42 ಎ, 4x4, 6x4), ಫಿಲಿಪ್ಸ್ ಔಟಾಗದೆ 14 (8 ಎ, 4x1, 6x1) **ಇತರೆ** (ಲೆಗ್ ಬೈ 1, ನೋಬಾಲ್ 2, ವೈಡ್ 4) 7
ವಿಕೆಟ್ ಪತನ: 1-77 (ಎವಿನ್ ಲೂಯಿಸ್, 5.2), 2-81 (ಯಶಸ್ವಿ ಜಯ, 6.1), 3-170 (ಸಂಜು ಸ್ಯಾಮ್ಸನ್, 15.4)
ಬೌಲಿಂಗ್: ಸ್ಯಾಮ್ ಕರನ್ 4–0–55–0, ಜೋಶ್ ಹ್ಯಾಜಲ್‌ವುಡ್ 4–0–54–0, ಶಾರ್ದೂಲ್ ಠಾಕೂರ್ 4–0–30–2, ಕೆ.ಎಂ.ಆಸಿಫ್ 2.1–0–18–1, ಮೋಯಿನ್ ಅಲಿ 2.2–0–23–0, ರವೀಂದ್ರ ಜಡೇಜ 1–0–9–0

ಫಲಿತಾಂಶ: ರಾಜಸ್ಥಾನ್ ರಾಯಲ್ಸ್‌ಗೆ 7 ವಿಕೆಟ್‌ಗಳ ಜಯ

ಪಿಂಕ್ ಬಾಲ್ ಟೆಸ್ಟ್: ಆಸ್ಟ್ರೇಲಿಯಾ ಎದುರು ಭಾರತ ಪಾರಮ್ಯ

ದೀಪ್ತಿ, ಜೂಲನ್ ಮಿಂಚು

ಗೋಲ್ಡ್ ಕೋಸ್ಟ್, ಆಸ್ಟ್ರೇಲಿಯಾ (ಪಿಟಿಐ): ಆಲ್‌ರೌಂಡರ್ ದೀಪ್ತಿ ಶರ್ಮಾ ಮತ್ತು ಮಧ್ಯಮ ವೇಗಿ ಜೂಲನ್ ಗೋಸ್ವಾಮಿ ಅವರು ಆಸ್ಟ್ರೇಲಿಯಾ ಮಹಿಳೆಯರ ಎದುರು ನಡೆಯುತ್ತಿರುವ ಹೊನಲು ಬೆಳಕಿನ ಟೆಸ್ಟ್ ಪಂದ್ಯದಲ್ಲಿ ಭಾರತ ಮಹಿಳಾ ತಂಡ ಶನಿವಾರವೂ ಮೇಲುಗೈ ಸಾಧಿಸಲು ನೆರವಾದರು.

ದೀಪ್ತಿ ಶರ್ಮಾ ಅವರ ಅಮೋಘ ಅರ್ಧಶತಕದ ಬಲದಿಂದ ಮೂರನೇ ದಿನ ಎಂಟು ವಿಕೆಟ್‌ಗಳಿಗೆ 377 ರನ್ ಗಳಿಸಿ ಭಾರತ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಜೂಲನ್ ಗೋಸ್ವಾಮಿ ಮತ್ತು ಪೂಜಾ ವಸ್ತ್ರಕಾರ್ ಅವರ ಪರಿಣಾಮಕಾರಿ ದಾಳಿ ನಡೆಸಿದರು. ಇದರ ಪರಿಣಾಮ ದಿನದಾಟದ ಮುಕ್ತಾಯದ ವೇಳೆ ಆತಿಥೇಯರು ನಾಲ್ಕು ವಿಕೆಟ್ ಕಳೆದುಕೊಂಡು 143 ರನ್ ಗಳಿಸಿದ್ದಾರೆ. ಮೊದಲ ಇನಿಂಗ್ಸ್‌ನಲ್ಲಿ 234 ರನ್ ಹಿಂದೆ ಉಳಿದಿದ್ದು ಫಾಲೊ ಆನ್ ತಪ್ಪಿಸಿಕೊಳ್ಳಲು ಕೊನೆಯ ದಿನವಾದ ಭಾನುವಾರ 85 ರನ್ ಗಳಿಸಬೇಕಾಗಿದೆ.

ಭರವಸೆಯಿಂದ ಬ್ಯಾಟಿಂಗ್ ಆರಂಭಿಸಿದ ಆಸ್ಟ್ರೇಲಿಯಾ 14 ರನ್ ಗಳಿಸಿದ್ದಾಗ ಜೂಲನ್ ಗೋಸ್ವಾಮಿ ಆರಂಭಿಕ ಬ್ಯಾಟರ್ ಬೇಥ್ ಮೂನಿ ವಿಕೆಟ್ ಉರುಳಿಸಿ ಪೆಟ್ಟು ನೀಡಿದರು. ಮೂನಿ ಅವರೊಂದಿಗೆ ಇನಿಂಗ್ಸ್ ಆರಂಭಿಸಿದ ಅಲಿಸಾ ಹೀಲಿ ವಿಕೆಟ್ ಕೂಡ ಜೂಲನ್ ಪಾಲಾಯಿತು. ಪೂಜಾ ವಸ್ತ್ರಕಾರ್ ನಾಯಕಿ ಮೆಗ್ ಲ್ಯಾನಿಂಗ್ ಮತ್ತು ಆಲ್‌ರೌಂಡರ್ ತಹಲಿಯಾ ಮೆಗ್ರಾ ಅವರನ್ನು ವಾಪಸ್ ಕಳುಹಿಸಿದರು.

ಅಮೋಘ ಬ್ಯಾಟಿಂಗ್ ಪ್ರದರ್ಶಿಸಿದ ಭಾರತ ಶುಕ್ರವಾರದ ಮೊತ್ತಕ್ಕೆ 101 ರನ್ ಸೇರಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಆಲ್‌ರೌಂಡರ್ ದೀಪ್ತಿ ಶರ್ಮಾ 66 ರನ್ ಗಳಿಸಿ ಮಿಂಚಿದರು.

ಶುಕ್ರವಾರ 276 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿದ್ದ ತಂಡ ಮೂರನೇ ದಿನ ಮೊದಲ ಅವಧಿಯಲ್ಲಿ ರಕ್ಷಣಾತ್ಮಕ ಆಟಕ್ಕೆ ಮೊರೆ ಹೋದ ಭಾರತದ ಬ್ಯಾಟರ್‌ಗಳು ನಿಧಾನವಾಗಿ ರನ್ ಗಳಿಸಿದರು. ‘ಡಿನ್ನರ್’ ವೇಳೆ ತಂಡದ ಮೊತ್ತ ಏಳು ವಿಕೆಟ್‌ಗಳಿಗೆ 359 ಆಗಿತ್ತು. ವೈಯಕ್ತಿಕ 12 ರನ್‌ಗಳಿಂದ ದಿನದಾಟ ಆರಂಭಿಸಿದ ದೀಪ್ತಿ ಶರ್ಮಾ ವಿರಾಮಕ್ಕೆ ತೆರಳುವ ಮೊದಲು ಅರ್ಧಶತಕ ಪೂರೈಸಿದರು. ಇದು ಟೆಸ್ಟ್ ಕ್ರಿಕೆಟ್‌ನಲ್ಲಿ ಅವರ ಎರಡನೇ ಅರ್ಧಶತಕವಾಗಿದೆ. ಟೆಸ್ಟ್‌ನಲ್ಲಿ ವೈಯಕ್ತಿಕ ಶ್ರೇಷ್ಠ ಮೊತ್ತವೂ ಆಗಿದೆ.ತಾನಿಯಾ ಜೊತೆ ದೀಪ್ತಿ ಆರನೇ ವಿಕೆಟ್‌ಗೆ 45 ರನ್ ಸೇರಿಸಿದ್ದರು. ಇದಕ್ಕಾಗಿ ಇವರಿಬ್ಬರು 28 ಓವರ್‌ಗಳನ್ನು ತೆಗೆದುಕೊಂಡಿದ್ದರು. ಪೂಜಾ ವಸ್ತ್ರಕಾರ್ ಜೊತೆಗೂಡಿ ದೀಪ್ತಿ 40 ರನ್‌ಗಳನ್ನು ಸೇರಿಸಿದರು. 10 ರನ್‌ಗಳ ಅಂತರದಲ್ಲಿ ಇವರಿಬ್ಬರು ವಿಕೆಟ್ ಕಳೆದುಕೊಂಡರು.


ದೀಪ್ತಿ ಶರ್ಮಾ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ಭಾರತ (ಮೊದಲ ಇನಿಂಗ್ಸ್) 8ಕ್ಕೆ 377 ಡಿಕ್ಲೇರ್ (145 ಓವರ್) (ಶುಕ್ರವಾರ 101.5 ಓವರ್‌ಗಳಲ್ಲಿ 5ಕ್ಕೆ 276)
ದೀಪ್ತಿ ಎಲ್‌ಬಿಡಬ್ಲ್ಯು ಬಿ ಕ್ಯಾಂಬೆಲ್ 66 (167 ಎ, 4x8), ತಾನಿಯಾ ಸಿ ಹೀಲಿ ಬಿ ಕ್ಯಾಂಬೆಲ್ 22 (75 ಎ, 4x3), ಪೂಜಾ ಸಿ ಮೂನಿ ಬಿ ಪೆರಿ 13 (48 ಎ, 4x2), ಜೂಲನ್ ಔಟಾಗದೆ 7 (5 ಎ, 4x1), ಮೇಘನಾ ಔಟಾಗದೆ 2 (6 ಎ)
ಇತರೆ (ಬೈ 3, ಲೆಗ್‌ಬೈ 6, ನೋಬಾಲ್ 2 ವೈಡ್ 13) 24
ವಿಕೆಟ್ ಪತನ: 6-319 (ತಾನಿಯಾ ಭಾಟಿಯ, 126.2), 7-359 (ಪೂಜಾ ವಸ್ತ್ರಕಾರ, 142.3), 8-369 (ದೀಪ್ತಿ ಶರ್ಮಾ, 143.4)
ಬೌಲಿಂಗ್: ಎಲಿಸ್ ಪೆರಿ 27–4–76–2, ಡಾರ್ಸಿ ಬ್ರೌನ್ 10–0–49–0, ಸ್ಟೆಲ್ಲಾ ಕ್ಯಾಂಬೆಲ್ 14–2–47–2, ತಹಲಿಯಾ ಮೆಗ್ರಾ 16–3–40–0, ಸೋಫಿ ಮೋಲಿನೆಕ್ಸ್ 23–8–45–2, ಆ್ಯಶ್ಲಿ ಗಾರ್ಡನರ್ 30–11–52–1, ಅನಾಬೆಲ್ ಸೂಥರ್ಲೆಂಡ್ 17–6–31–0, ಜಾರ್ಜಿಯಾ ವರೆಹಾಂ 8–2–28–0

ಆಸ್ಟ್ರೇಲಿಯಾ (ಮೊದಲ ಇನಿಂಗ್ಸ್) 4ಕ್ಕೆ 143 (60 ಓವರ್)
ಹೀಲಿ ಸಿ ಭಾಟಿಯಾ ಬಿ ಗೋಸ್ವಾಮಿ 29 (66 ಎ, 4x3), ಮೂನಿ ಬಿ ಗೋಸ್ವಾಮಿ 4 (16 ಎ), ಲ್ಯಾನಿಂಗ್ ಎಲ್‌ಬಿಡಬ್ಲ್ಯು ಬಿ ವಸ್ತ್ರಕಾರ್ 38 (78 ಎ, 4x7), ಪೆರಿ ಬ್ಯಾಟಿಂಗ್ 27 (98 ಎ, 4x3), ಮೆಗ್ರಾ ಸಿ ಸ್ಮೃತಿ ಬಿ ವಸ್ತ್ರಕಾರ್ 28 (68 ಎ, 4x4), ಆ್ಯಶ್ಲಿ ಗಾರ್ಡನರ್ ಬ್ಯಾಟಿಂಗ್ 13 (34 ಎ, 4x1))
ಇತರೆ (ಲೆಗ್ ಬೈ 3, ವೈಡ್ 1) 4
ವಿಕೆಟ್ ಪತನ: 1-14 (ಬೇಥ್ ಮೂನಿ, 6.4), 2-63 (ಅಲಿಸಾ ಹೀಲಿ, 22.4), 3-80 (ಮೆಗ್ ಲ್ಯಾನಿಂಗ್, 32.1), 4-119 (ತಹಲಿಯಾ ಮೆಗ್ರಾ, 49.4)
ಬೌಲಿಂಗ್: ಜೂಲನ್ ಗೋಸ್ವಾಮಿ 14–3–27–2, ಮೇಘನಾ ಸಿಂಗ್ 11–1–32–0, ಪೂಜಾ ವಸ್ತ್ರಕಾರ್ 16–6–31–2, ರಾಜೇಶ್ವರಿ ಗಾಯಕವಾಡ್ 12–1–36–0, ದೀಪ್ತಿ ಶರ್ಮಾ 7–4–14–0

ಫಿಲಿಪ್ಪೀನ್ಸ್ ಅಧ್ಯಕ್ಷರಿಂದ ರಾಜಕೀಯ ನಿವೃತ್ತಿ ಘೋಷಣೆ

ಮನಿಲಾ (ಎಪಿ): ಪ್ರಸಕ್ತ ಆಡಳಿತಾವಧಿ ಮುಗಿದ ಬಳಿಕ ತಾವು ರಾಜಕೀಯ ನಿವೃತ್ತಿ ಪಡೆಯಲಿದ್ದು, ಮುಂದಿನ ಚುನಾವಣೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಿಲ್ಲ ಎಂದು ಫಿಲಿಪ್ಪೀನ್ಸ್ ಅಧ್ಯಕ್ಷ ರೊಡ್ರಿಗೊ ಡುಟರ್ಟೆ ಹೇಳಿದ್ದಾರೆ.

ಡುಟರ್ಟೆ ತನ್ನ ಮಾಜಿ ಸಹಾಯಕ ಸೆನೆಟರ್ ಬಾಂಗ್ ಗೊ ಜೊತೆಗೆ ಶನಿವಾರ ಚುನಾವಣಾ ಆಯೋಗ ಕೇಂದ್ರಕ್ಕೆ ತೆರಳಿದ್ದ ವೇಳೆ ಅವರು ದಿಢೀರನೇ ಈ ಘೋಷಣೆ ಮಾಡಿದ್ದಾರೆ. ಡುಟರ್ಟೆ 2016ರಲ್ಲಿ ಅಧಿಕಾರ ವಹಿಸಿಕೊಂಡಿದ್ದರು.

ಫಿಲಿಪ್ಪೀನ್ಸ್ ಅಧ್ಯಕ್ಷರ ಅಧಿಕಾರವಧಿ ಸಂವಿಧಾನದ ಪ್ರಕಾರ ಆರು ವರ್ಷಗಳು. ಹೀಗಾಗಿ, ಡುಟರ್ಟೆ ಅವರು ಮತ್ತೆ ಚುನಾವಣೆಗೆ ಸ್ಪರ್ಧಿಸುವ ನಿರ್ಧಾರವನ್ನು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಲಾಗುವುದು ಎಂದು ವಿರೋಧಪಕ್ಷಗಳು ಹೇಳಿದ್ದವು.

ಅಕ್ರಮ ಡ್ರಗ್ಸ್ ಜಾಲವನ್ನು ಹತ್ತಿಕ್ಕುವ ವೇಳೆ 6 ಸಾವಿರಕ್ಕೂ ಅಧಿಕ ಜನರು ಸಾವನ್ನಪ್ಪಿದ ವಿಷಯ ಮಾನವ ಹಕ್ಕು ಗುಂಪುಗಳ ಕೆಂಗಣ್ಣಿಗೆ ಕಾರಣವಾಗಿದೆ. ಈ ಹತ್ಯಾಕಾಂಡದ ವಿಚಾರಣೆ ಅಂತರರಾಷ್ಟ್ರೀಯ ಅಪರಾಧ ನ್ಯಾಯಾಲಯದಲ್ಲಿ ನಡೆಯುತ್ತಿದೆ.


ರೊಡ್ರಿಗೊ ಡುಟರ್ಟೆ

ಸಂಕ್ಷಿಪ್ತ ಸುದ್ದಿ

ಗಾಂಧೀಜಿ ಸಂದೇಶ ಪಾಲನೆ: ಗುಟೆರಸ್ ಸಲಹೆ

ವಿಶ್ವಸಂಸ್ಥೆ (ಪಿಟಿಐ): ಮಹಾತ್ಮ ಗಾಂಧಿಯ ಶಾಂತಿ ಸಂದೇಶವನ್ನು ಅನುಸರಿಸುವಂತೆ ಅಂತರರಾಷ್ಟ್ರೀಯ ಸಮುದಾಯಕ್ಕೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಕರೆ ನೀಡಿದ್ದಾರೆ.

ವಿಶ್ವದಾದ್ಯಂತ ಎಲ್ಲರೂ ಶಸ್ತ್ರಾಸ್ತ್ರಗಳನ್ನು ತ್ಯಜಿಸಿ ಕೋವಿಡ್ ಪಿಡುಗನ್ನು ಸೋಲಿಸಲು ಗಮನ ಹರಿಸಬೇಕಿದೆ ಎಂದು ಕಿವಿಮಾತು ಹೇಳಿದ್ದಾರೆ.ಗಾಂಧಿ ಜಯಂತಿ ನಿಮಿತ್ತ ಅಂತರರಾಷ್ಟ್ರೀಯ ಅಹಿಂಸಾ ದಿನದ ಸಂದೇಶ ನೀಡಿರುವ ಗುಟೆರಸ್, ‘ಗಾಂಧೀಜಿಯವರ ಜನ್ಮದಿನದಂದು ಅಹಿಂಸಾ ದಿನವಾಗಿ ಆಚರಿಸುವುದು ಕಾಕತಾಳೀಯವಲ್ಲ. ಗಾಂಧೀಜಿ ಅವರಿಗೆ ಶಾಂತಿಯುತ ಪ್ರತಿಭಟನೆ, ಘನತೆ, ಸಮಾನತೆ ಮುಖ್ಯವಾಗಿದ್ದವು. ಮಾನವೀಯತೆಗೆ ಬೆಳಕು ನೀಡಿ, ಉತ್ತಮ ಭವಿಷ್ಯದ ಮಾರ್ಗ ತೋರಿದರು’ ಎಂದರು.

‘ಸಂಘರ್ಷಗಳು, ಹವಾಮಾನ ವೈಪರೀತ್ಯ, ಬಡತನ, ಅಸಮಾನತೆ, ಅಪನಂಬಿಕೆಗಳು ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ಇನ್ನೂ ಹೆಚ್ಚಾಗಿವೆ. ಇವು ಜನರ ಸ್ಥಿತಿ, ಆರ್ಥಿಕ ಪರಿಸ್ಥಿತಿಯನ್ನು ಹಾಳುಗೆಡುವುತ್ತಿವೆ’ ಎಂದು ಬೇಸರ ವ್ಯಕ್ತಪಡಿಸಿದರು.


ಗುಟೆರಸ್

ಅಮೆರಿಕ: 7 ಲಕ್ಷ ದಾಟಿದ ಕೋವಿಡ್ ಸಾವಿನ ಸಂಖ್ಯೆ

ಮಿನಿಯಾಪೊಲಿಸ್ (ಎಪಿ): ಅಮೆರಿಕದಲ್ಲಿ ಕೋವಿಡ್‌ನಿಂದ ಸಂಭವಿಸಿದ ಸಾವುಗಳ ಸಂಖ್ಯೆ ಶುಕ್ರವಾರ 7 ಲಕ್ಷದ ಗಡಿ ದಾಟಿತು. ಇನ್ನೊಂದೆಡೆ, ಕೊರೊನಾ ಡೆಲ್ಟಾ ತಳಿ ಪ್ರಕರಣಗಳು ಇಳಿಮುಖವಾಗುತ್ತಿದ್ದು, ಆಡಳಿತಕ್ಕೆ ಸಮಾಧಾನ ಮೂಡಿಸಿದೆ.

ಕೊನೆಯ ಒಂದು ಲಕ್ಷ ಸಾವು ಮೂರೂವರೆ ತಿಂಗಳಲ್ಲಿ ಸಂಭವಿಸಿವೆ. ಲಸಿಕೆ ಪಡೆಯದವರಲ್ಲಿ ಡೆಲ್ಟಾ ರೂಪಾಂತರ ಸೋಂಕು ತ್ವರಿತವಾಗಿ ವ್ಯಾಪಿಸಿದ್ದು, ಇದಕ್ಕೆ ಕಾರಣ ಎನ್ನಲಾಗಿದೆ. ಸಾವಿನ ಸಂಖ್ಯೆ ಬಾಸ್ಟನ್ ನಗರದ ಜನಸಂಖ್ಯೆಗಿಂತಲೂ ಹೆಚ್ಚಾಗಿದೆ. ಸಾವಿನ ಸಂಖ್ಯೆ 7 ಲಕ್ಷದ ಗಡಿ ದಾಟಿದ ಬೆಳವಣಿಗೆ ವೈದ್ಯಕೀಯ ಕ್ಷೇತ್ರದ ಪ್ರಮುಖರು, ಆರೋಗ್ಯ ಕ್ಷೇತ್ರಕ್ಕೆ ಸಂಬಂಧಿಸಿದ ಮುಖಂಡರಲ್ಲಿ ಬೇಸರ ಮೂಡಿಸಿದೆ. ಲಸಿಕೆ ಲಭ್ಯವಿದ್ದರೂ ಹೆಚ್ಚಿನವರು ಪಡೆದುಕೊಂಡಿಲ್ಲ ಎಂಬುದು ಇದಕ್ಕೆ ಕಾರಣ. ಅಂಕಿ ಅಂಶಗಳ ಪ್ರಕಾರ, ಅಮೆರಿಕದಲ್ಲಿ 7 ಕೋಟಿಯಷ್ಟು ಅರ್ಹ ಅಮೆರಿಕನ್ನರಿಗೆ ಇನ್ನೂ ಲಸಿಕೆಯು ತಲುಪಿಲ್ಲ.

ವಿಶ್ವ ಜೂನಿಯರ್ ಶೂಟಿಂಗ್: ಕಂಚು ಗೆದ್ದ ಪುರುಷರು

ಭಾರತ ಮಹಿಳಾ ತಂಡಕ್ಕೆ ಚಿನ್ನ

ಲಿಮಾ, ಪೆರು (ಪಿಟಿಐ): ಜೂನಿ ಯರ್ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಭಾರತದ ಶೂಟರ್‌ಗಳು ಅದ್ಭುತ ಲಯವನ್ನು ಮುಂದುವರಿಸಿದ್ದಾರೆ.

ಇಲ್ಲಿ ನಡೆಯುತ್ತಿರುವ ಚಾಂಪಿಯನ್ ಷಿಪ್‌ನ ಸ್ಕೀಟ್ ವಿಭಾಗದಲ್ಲಿ ಶುಕ್ರ ವಾರ ಮಹಿಳಾ ತಂಡವು ಚಿನ್ನಕ್ಕೆ ಗುರಿ ಯಿಟ್ಟಿತು, ಪುರುಷರ ತಂಡಕ್ಕೆ ಕಂಚು ಒಲಿಯಿತು.

ಅರೀಬಾ ಖಾನ್, ರೈಜಾ ಧಿಲ್ಲೋನ್ ಮತ್ತು ಗಣೆಮತ್ ಶೆಖೋನ್ ಅವರಿದ್ದ ಭಾರತ ಮಹಿಳಾ ತಂಡವು ಸರಾಸರಿ ಆರು ಸ್ಕೋರ್ ದಾಖಲಿಸಿ ಅಗ್ರಸ್ಥಾನ ಗಳಿಸಿತು. ಫೈನಲ್ ಹಣಾಹಣಿಯಲ್ಲಿ ಇಟಲಿಯ ಡೆಮಿಯಾನ ಪಾಲಚಿ, ಸಾರಾ ಬೊಂಗಿಣಿ ಮತ್ತು ಗಿಯಾಡಾ ಲೊಂಗಿ ಅವರನ್ನು ಹಿಂದಿಕ್ಕಿತು.

ಪುರುಷರ ಸ್ಕೀಟ್ ವಿಭಾಗದಲ್ಲಿ ಸ್ಪರ್ಧಿಸಿದ್ದ ಭಾರತದ ರಾಜ್‌ವೀರ್ ಗಿಲ್, ಆಯುಶ್ ರುದ್ರಾರಾಜು ಮತ್ತು ಅಭಯ್ ಸಿಂಗ್ ಶೆಖೋನ್ ಅವರು ಕಂಚಿನ ಪದಕದ ಸುತ್ತಿನಲ್ಲಿ 6–0ಯಿಂದ ಟರ್ಕಿಯ ಅಲಿ ಕಾನ್ ಅರಬಾಚಿ, ಅಹ್ಮತ್ ಬರನ್ ಮತ್ತು ಮುಹಮ್ಮತ್ ಸೆಯುನ್ ಅವರ ಸವಾಲು ಮೀರಿದರು.


ಗಣೆಮತ್ ಶೆಕೋನ್

ಪುರುಷರ ವೈಯಕ್ತಿಕ ಸ್ಕೀಟ್ ವಿಭಾಗದಲ್ಲಿ ಸ್ಪರ್ಧೆಯಲ್ಲಿದ್ದ ರಾಜ್ ವೀರ್, ಅಭಯ್ ಸಿಂಗ್ ಮತ್ತು ರುದ್ರಾರಾಜು ಫೈನಲ್ಸ್ ತಲುಪಲು ವಿಫಲರಾದರು. ಚಾಂಪಿಯನ್‌ಷಿಪ್‌ನಲ್ಲಿ ಸದ್ಯ ಭಾರತವು ಎರಡು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚು (ಒಟ್ಟು ಏಳು) ಗೆದ್ದು ಪದಕಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದೆ. ಮೂರು ಚಿನ್ನ ಸೇರಿ ಏಳು ಪದಕಗಳನ್ನು ತನ್ನದಾಗಿಸಿಕೊಂಡಿರುವ ಅಮೆರಿಕ ಮೊದಲ ಸ್ಥಾನದಲ್ಲಿದೆ.


ಪ್ರಶಸ್ತಿಯೊಂದಿಗೆ ವಿಷ್ಣುವರ್ಧನ್

ವಿಷ್ಣುಗೆ ಪ್ರಶಸ್ತಿ

ಬೆಂಗಳೂರು: ತಮಿಳುನಾಡಿನ ವಿಷ್ಣುವರ್ಧನ್ ಅವರು ಕರ್ನಾಟಕದ ಮಾನವ್ ಜೈನ್ ಅವರನ್ನು ಮಣಿಸಿ ಎಐಟಿಎ ಪುರುಷರ ಟೆನಿಸ್ ಟೂರ್ನಿಯಲ್ಲಿ ಪ್ರಶಸ್ತಿ ಜಯಿಸಿದರು.

ಈ ಹಿಂದೆ ಏಷ್ಯನ್ ಗೇಮ್ಸ್‌ನಲ್ಲಿ ಪದಕವಿಜೇತರಾಗಿದ್ದ ವಿಷ್ಣುವರ್ಧನ್ ಶನಿವಾರ ನಡೆದ ಫೈನಲ್‌ನಲ್ಲಿ 6–1, 6–2ರಿಂದ ಮಾನವ್ ಎದುರು ಗೆದ್ದರು. ಇದೇ ಮೊದಲ ಬಾರಿ ಫೈನಲ್‌ಗೆ ಕಾಲಿಟ್ಟಿದ್ದ ಮಾನವ್ ಪ್ರಶಸ್ತಿ ಕನಸು ಕೈಗೂಡಲಿಲ್ಲ.

ಪಂದ್ಯದ ಎರಡೂ ಸೆಟ್‌ಗಳಲ್ಲೂ ವಿಷ್ಣುವರ್ಧನ್ ಪಾರಮ್ಯ ಮೆರೆದರು.


ನಾಳೆಯಿಂದ ಹಾಕಿ ಶಿಬಿರ

ನವದೆಹಲಿ (ಪಿಟಿಐ): ಭಾರತ ಹಾಕಿ ತಂಡದ ರಾಷ್ಟ್ರೀಯ ಶಿಬಿರ ಬೆಂಗಳೂರಿನ ಭಾರತ ಕ್ರೀಡಾ ಪ್ರಾಧಿಕಾರದ ಪ್ರಾದೇಶಿಕ ಕೇಂದ್ರದಲ್ಲಿ ಅಕ್ಟೋಬರ್ ನಾಲ್ಕರಂದು ಆರಂಭವಾಗಲಿದೆ. ಇದಕ್ಕಾಗಿ ಹಾಕಿ ಇಂಡಿಯಾ 30 ಆಟಗಾರರ ಪಟ್ಟಿಯನ್ನು ಶನಿವಾರ ಬಿಡುಗಡೆ ಮಾಡಿದೆ.

ಉದ್ಯಾನ ನಗರಿಯಲ್ಲಿ ನಡೆದ ಶಿಬಿರದಲ್ಲಿ ಪಾಲ್ಗೊಂಡು ಟೋಕಿಯೊಗೆ ತೆರಳಿದ್ದ ತಂಡ ಒಲಿಂಪಿಕ್ಸ್‌ನಲ್ಲಿ ಕಂಚು ಗೆದ್ದುಕೊಂಡಿತ್ತು. ಈ ಮೂಲಕ 41 ವರ್ಷಗಳ ನಂತರ ಪದಕದ ಸಾಧನೆ ಮಾಡಿತ್ತು. ಬೆಂಗಳೂರಿನಲ್ಲಿ ಮತ್ತೆ ಆರಂಭವಾಲಿರುವ ಶಿಬಿರ ಮುಂದಿನ ಒಲಿಂಪಿಕ್ಸ್‌ನ ಸಿದ್ಧತೆಯೂ ಆಗಲಿದೆ. 2024ರಲ್ಲಿ ಪ್ಯಾರಿಸ್‌ನಲ್ಲಿ ಮಹತ್ವದ ಸಾಧನೆ ಮಾಡುವ ಗುರಿಯೊಂದಿಗೆ ತಂಡ ಅಭ್ಯಾಸ ಆರಂಭಿಸಲಿದೆ.

ಅನುಭವಿ ಆಟಗಾರರ ಜೊತೆ ಯುವ ಪ್ರತಿಭೆಗಳನ್ನು ಶಿಬಿರಕ್ಕೆ ಆಯ್ಕೆ ಮಾಡಲಾಗಿದೆ. ಗೋಲ್ ಕೀಪರ್ ಪಿ.ಆರ್.ಶ್ರೀಜೇಶ್ ಅವರೊಂದಿಗೆ ಮನ್‌ಪ್ರೀತ್ ಸಿಂಗ್, ಹರ್ಮನ್‌ಪ್ರೀತ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಗುರಿಂದರ್ ಸಿಂಗ್ ಮತ್ತಿತರರು ಪಾಲ್ಗೊಳ್ಳಲಿದ್ದಾರೆ.

‘ಆಟಗಾರರಿಗೆ ಸುದೀರ್ಘ ವಿಶ್ರಾಂತಿ ಬೇಕಾಗಿತ್ತು. ಅದು ಲಭ್ಯವಾಗಿದೆ. ಮತ್ತೊಮ್ಮೆ ಶಿಬಿರದಲ್ಲಿ ಪಾಲ್ಗೊಳ್ಳಲು ಎಲ್ಲರೂ ಉತ್ಸುಕರಾಗಿದ್ದಾರೆ. ಮುಂದಿನ ವರ್ಷದ ಸವಾಲುಗಳಿಗೆ ಸಜ್ಜಾಗಲು ಶಿಬಿರ ನೆರವಾಗುವ ಭರವಸೆ ಇದೆ. ಮುಂದಿನ ಒಲಿಂಪಿಕ್ಸ್‌ನಲ್ಲಿ ವೈಯಕ್ತಿಕ ಮತ್ತು ಸಂಘಟಿತ ಸಾಮರ್ಥ್ಯ ಹೆಚ್ಚಿಸುವುದು ಪ್ರಮುಖ ಗುರಿ’ ಎಂದು ಮುಖ್ಯ ಕೋಚ್ ಗ್ರಹಾಂ ರೀಡ್ ಹೇಳಿದರು.


ಪಿ.ಆರ್.ಶ್ರೀಜೇಶ್ –ರಾಯಿಟರ್ಸ್ ಚಿತ್ರ

ಶಿಬಿರದಲ್ಲಿ ಪಾಲ್ಗೊಳ್ಳುವ ಆಟಗಾರರು: ಮನ್‌ದೀಪ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಗುರುಸಾಹೀಬ್‌ಜೀತ್ ಸಿಂಗ್, ಶಂಶೇರ್ ಸಿಂಗ್, ವರುಣ್ ಕುಮಾರ್, ಜರ್ಮನ್‌ಪ್ರೀತ್ ಸಿಂಗ್, ದಿಪ್ಸನ್ ಟರ್ಕಿ, ನೀಲಂ ಸಂಜೀವ್ ಕ್ಸೆಸ್, ಜಸ್‌ಕರಣ್ ಸಿಂಗ್, ರಾಜ್‌ಕುಮಾರ್ ಪಾಲ್, ಗುರ್ಜಂತ್ ಸಿಂಗ್, ಸುಮಿತ್, ಶೈಲಾನಂದ್ ಲಾಕ್ರ, ಸುಮನ್ ಬೇಕ್, ಮನ್‌ದೀಪ್ ಮೋರ್, ಆಶಿಶ್ ಕುಮಾರ್ ಟೊಪ್ನೊ, ಪಿ.ಆರ್. ಶ್ರೀಜೇಶ್, ಕೃಶನ್ ಬಹದ್ದೂರ್ ಪಾಠಕ್, ಸೂರಜ್ ಕರ್ಕೇರಾ, ಹರ್ಮನ್‌ಪ್ರೀತ್ ಸಿಂಗ್, ದಿಲ್‌ಪ್ರೀತ್ ಸಿಂಗ್, ಸುರೇಂದ್ರ ಕುಮಾರ್, ಗುರಿಂದರ್ ಸಿಂಗ್, ಅಮಿತ್ ರೋಹಿದಾಸ್, ಮನ್‌ಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ನೀಲಕಂಠ ಶರ್ಮಾ, ವಿವೇಕ್ ಸಾಗರ್ ಪ್ರಸಾದ್, ಸಿಮ್ರನ್‌ಜೀತ್ ಸಿಂಗ್, ಆಕಾಶ್‌ದೀಪ್ ಸಿಂಗ್.

ವಿಶ್ವ ಕುಸ್ತಿ: ಗೆದ್ದು ಸೋತ ರವಿಂದರ್

ಒಸ್ಲೊ, ನಾರ್ವೆ (ಪಿಟಿಐ): ವೀರೋಚಿತ ಸಾಮರ್ಥ್ಯ ತೋರಿದ ಭಾರತದ ರವಿಂದರ್ (61 ಕೆಜಿ ವಿಭಾಗ) ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಹಾಲಿ ಚಾಂಪಿ ಯನ್, ಜಾರ್ಜಿಯಾದ ಬೆಕಾ ಲೊಮ್‌ತಾಜ್ ಅವರನ್ನು ಚಿತ್ ಮಾಡಿದರು. ಆದರೆ ಕ್ವಾರ್ಟರ್‌ಫೈನಲ್‌ನಲ್ಲಿ ಸೋತು ನಿರಾಸೆ ಮೂಡಿಸಿದರು.

ಶನಿವಾರ ಇಲ್ಲಿ ಆರಂಭವಾದ ಚಾಂಪಿಯನ್‌ಷಿಪ್‌ನ ಎಂಟರಘಟ್ಟದಲ್ಲಿ ರವಿಂದರ್ ಅಮೆರಿಕದ ದಾತೊನ್ ಡ್ಯುವನ್ ಫಿಕ್ಸ್ ಎದುರು ಸೋತರು.

ಯಶ್ ತನೀರ್ (74 ಕೆಜಿ ವಿಭಾಗ), ಸಂದೀಪ್ ಮಾನ್ (86 ಕೆಜಿ) ಹಾಗೂ ಅನಿರುದ್ಧ್ (125 ಕೆಜಿ) ಅರ್ಹತಾ ಸುತ್ತಿನ ತಡೆ ದಾಟುವಲ್ಲಿ ವಿಫಲರಾದರು.